

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ನವೆಂಬರ್ 15 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 208 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರಿಗೆ ಕಪ್ಪು ಚುಕ್ಕೆ ಇಟ್ಟ ಮುಡಾ!
ಯಾರದೋ ಭೂಮಿ, ಮತ್ತಾರಿಗೋ ನಿವೇಶನ ಮಂಜೂರು
■ ಪುಟ–5

ಬಗರ್‌ಹುಕುಂ ಅರ್ಜಿಗಳ ವಿಂಗಡಣೆಗೆ ತಹಸೀಲ್ದಾರ್‌ರಿಗೆ ನ.25ರ ಗಡುವು



● ಅಷ್ಟರೊಳಗೆ ಅರ್ಜಿಗಳ ಜಿಲ್ಲಾಧಿಕಾರಿಗೆ ಸಲ್ಲಿಸಬೇಕು; ತಪ್ಪಿದರೆ ಶೋಕಾಸ್ ನೋಟೀಸ್ ಜಾರಿ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಎಚ್ಚರಿಕೆ
● ವಿಡಿಯೋ ಕಾನ್ಫರೆನ್ಸ್ ಮೂಲಕ ಬಗರ್ ಹುಕುಂ ಅರ್ಜಿ ವಿಲೇವಾರಿ ಪ್ರಗತಿ ಪರಿಶೀಲಿಸಿ

ಬೆಂಗಳೂರು, ನ. 14(ಕೆಎಂಶಿ)– ಬಡವರಿಗೆ ಭೂ ಮಂಜೂರು ಮಾಡುವ "ಬಗರ್ ಹುಕುಂ" ಅರ್ಜಿಗಳ ಪೈಕಿ ಅರ್ಹ–ಅನರ್ಹ ಅರ್ಜಿಗಳನ್ನು ರಾಜ್ಯಾದ್ಯಂತ ತಹಸೀಲ್ದಾರರು ಈ ತಿಂಗಳ 25ರೊಳಗೆ ವಿಂಗಡಿಸಿ ಜಿಲ್ಲಾಧಿಕಾರಿಗಳಿಗೆ ನೀಡಬೇಕು. ತಪ್ಪಿದರೆ ಎಲ್ಲರಿಗೂ ಶೋಕಾಸ್ ನೋಟಿಸ್ ನೀಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಂದಿಲ್ಲಿ ಎಚ್ಚರಿಸಿದ್ದಾರೆ.

ರಾಜ್ಯದ ತಹಸೀಲ್ದಾರರೊಂದಿಗಿನ ವಿಡಿಯೋ ಕಾನ್ಫರೆನ್ಸ್ ಮೂಲಕ ಬಗರ್ ಹುಕುಂ ಅರ್ಜಿ ವಿಲೇವಾರಿ ಪ್ರಗತಿ ಪರಿಶೀಲಿಸಿ, ಈ ಆದೇಶ ಹೊರಡಿಸಿದರು.

ಬಗರ್‌ಹುಕುಂ ಕೆಲಸಗಳಿಗೆ ಚುರುಕು ಮುಟ್ಟಿಸಬೇಕೆಂಬ ಕಾರಣದಿಂದ ಕಳೆದ ಒಂದು ವರ್ಷದಿಂದ ವೈಯಕ್ತಿಕವಾಗಿ ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಕೈಗೊಂಡು ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದೇನೆ. ಎಲ್ಲಾ ತಹಸೀಲ್ದಾರರೊಂದಿಗೆ ಪ್ರತಿ ತಿಂಗಳೂ ವಿಡಿಯೊ ಕಾನ್ಫರೆನ್ಸ್ ಮೂಲಕವೂ ಸಭೆ ನಡೆಸಿ ಪ್ರಗತಿ ಪರಿಶೀಲಿಸುತ್ತಿದ್ದೇನೆ. ಆದರೂ, ಕೆಲವು ● 6ನೇ ಪುಟಕ್ಕೆ

ಕಂದಾಯ ಇಲಾಖೆ ಸೇವೆಯಲ್ಲಿ ಮೈಸೂರು ಕಳಪೆಯಲ್ಲಿ ಕಳಪೆ!

ಸಿಎಂ ಸಿದ್ದರಾಮಯ್ಯ ತವರು ಅಧಿಕಾರಿಗಳ ಚಳಿ ಬಿಡಿಸಿದ ಕೃಷ್ಣಬೈರೇಗೌಡ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಕೆಲಸವನ್ನೇ ಮಾಡುತ್ತಿಲ್ಲ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಸೀಲ್ದಾರರು ಈ ಮಟ್ಟಿಗೆ ಜಡ್ಡುಗಟ್ಟಿ ಹೋಗಿದ್ದಾರೆಯೇ.

ಇಂತಹ ಅತ್ಯಂತ ಹೀನಾಯ ಸ್ಥಿತಿಯನ್ನು ತೆರೆದಿಟ್ಟವರು ಕಂದಾಯ ಸಚಿವ ಕೃಷ್ಣಬೈರೇಗೌಡ. ಮೈಸೂರು ಜಿಲ್ಲೆಯ ತಹಸೀಲ್ದಾರ್‌ಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಕಂದಾಯ ಸಚಿವರು, ಮೈಸೂರು ಜಿಲ್ಲೆ ● 6ನೇ ಪುಟಕ್ಕೆ



ಕೋವಿಡ್ ಅವಧಿಯಲ್ಲಿ ವೈದ್ಯಕೀಯ ಪರಿಕರ ಖರೀದಿಸುವಲ್ಲಿ ಅವ್ಯವಹಾರ

ತನಿಖೆಗೆ SIT ರಚನೆ

● ಸಂಪುಟ ಸಭೆ ನಿರ್ಧಾರ ● ಐಜಿ ಮಟ್ಟದ ಅಧಿಕಾರಿ ನೇತೃತ್ವದಲ್ಲಿ ತನಿಖೆ

ಬೆಂಗಳೂರು, ನ.14(ಕೆಎಂಶಿ)– ಕೋವಿಡ್–19 ಅವಧಿಯಲ್ಲಿ ವೈದ್ಯಕೀಯ ಪರಿಕರಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರಗಳ ತನಿಖೆಗೆ ಎಸ್‌ಐಟಿ ರಚಿಸಲು ನಡೆದ ಸೇರಿದ್ದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

'ಸಿ' ಪ್ರವರ್ಗದ 10 ಕಂಪನಿಗಳಿಗೆ ಅಕ್ರಮ ಗಣಿ ಗುತ್ತಿಗೆ ನೀಡಿದ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸಲು ಲೋಕಾಯುಕ್ತ ವಿಶೇಷ ತನಿಖಾ ತಂಡಕ್ಕೆ ವಹಿಸುವ ಮತ್ತೊಂದು ಮಹತ್ವದ ನಿರ್ಧಾರವನ್ನು ಸಭೆ ಕೈಗೊಂಡಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಕೋವಿಡ್–19 ಅವಧಿಯಲ್ಲಿ ನಡೆದ ಅವ್ಯವಹಾರಗಳಿಗೆ ಸಂಬಂಧಿಸಿ ದಂತೆ ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ನೀಡಿರುವ ಮಧ್ಯಂತರ ವರದಿ ಆಧರಿಸಿ, ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಎಸ್‌ಐಟಿಗೆ ಅಧಿಕಾರ ನೀಡಲಾಗಿದೆ. ಐಜಿ ಮಟ್ಟದ ಅಧಿಕಾರಿಯೊಬ್ಬರು ಈ ತನಿಖೆ ನೇತೃತ್ವ ವಹಿಸಿ, ಆರೋಪಗಳಿಗೆ ಸಂಬಂಧಿಸಿದಂತೆ ಕ್ರಮ ಜರುಗಿಸಲಿದ್ದಾರೆ. ಇದೊಂದು ಬ್ರಹ್ಮಾಂಡ ಭ್ರಷ್ಟಾಚಾರ ಎಂದು ಬಣ್ಣಿಸಿದ ಸಚಿವರು, ಅಂದು ಆಡಳಿತ ನಡೆಸುತ್ತಿದ್ದವರ, ಆದೇಶದಂತೆ ಅಧಿಕಾರಿಗಳು ಭಾರೀ ಮೊತ್ತದ ಅವ್ಯವಹಾರ ನಡೆಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್

ಮುಖ್ಯಮಂತ್ರಿ, ಸಚಿವರು, ಅಧಿಕಾರಿಗಳು ಈ ವಿಷಯದಲ್ಲಿ ಅಮಾನವೀಯವಾಗಿ ವರ್ತಿಸಿದ್ದಾರೆಂದು ನ್ಯಾ.ಕುನ್ಹಾ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ಔಷಧ ಸಾಮಗ್ರಿ ಖರೀದಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಅಪರಾಧ ನಡೆದಿದ್ದು, ಅಂತಹವರ ವಿರುದ್ಧ ತನಿಖೆ ನಡೆಸಿ, ಕ್ರಿಮಿನಲ್ ದಾವೆ ಹೂಡಲಾಗುವುದು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಗರದ ಹೆಬ್ಬಾಳದಲ್ಲಿ ಸಾವಯವ ಮತ್ತು ಸಿರಿಧಾನ್ಯ ಪ್ರಮುಖ ಕೇಂದ್ರವನ್ನು 20 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು ಸಂಪುಟ ಸಮ್ಮತಿಸಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ದಾವಣಗೆರೆ, ವಿಜಯಪುರ ಹಾಗೂ ● 6ನೇ ಪುಟಕ್ಕೆ

ಮುಡಾ ಮಾಜಿ ಅಧ್ಯಕ್ಷ ಮರೀಗೌಡ ಇಡಿ ವಿಚಾರಣೆಗೆ ಹಾಜರು

ಬೆಳಗ್ಗೆಯಿಂದ ರಾತ್ರಿವರೆಗೂ ಸುದೀರ್ಘ ಅವಧಿ ಮಾಹಿತಿ ಸಂಗ್ರಹ



ಕೆ.ಮರಿಗೌಡ

ಬೆಂಗಳೂರು, ನ.14(ಬಿಎಲ್‌ಯು)– ರಾಜ್ಯ ಮಾತ್ರವಲ್ಲದೆ ದೇಶದಲ್ಲೇ ಸದ್ದು ಮಾಡುತ್ತಿರುವ ಮುಡಾ ಹಗರಣದ ಬಗ್ಗೆ ಇಡಿ (ಜಾರಿ ನಿರ್ದೇಶನಾಲಯ) ಮುಂದೆ ಮುಡಾ ಮಾಜಿ ಅಧ್ಯಕ್ಷ ಕೆ.ಮರಿಗೌಡ ಇಂದು ವಿಚಾರಣೆಗೆ ಹಾಜರಾಗಿದ್ದರು.

ಬೆಂಗಳೂರಿನ ಶಾಂತಿನಗರದ ಇಡಿ ಕಚೇರಿಗೆ ಇಂದು ಬೆಳಗ್ಗೆ 11 ಗಂಟೆಗೆ ಆಗಮಿಸಿದ ಮರೀಗೌಡರು ಪ್ರವೇಶ ದಾಖಲು ಪುಸ್ತಕದಲ್ಲಿ ತಮ್ಮ ಸ್ವವಿವರ ಬರೆದರು. ತರುವಾಯ ಭದ್ರತಾ ತಪಾಸಣೆಗೊಳಗಾದ ಮರೀಗೌಡ ಇಡಿ ಕಚೇರಿಯೊಳಗೆ ಪ್ರವೇಶ ಪಡೆದರು. ದಾಖಲಾತಿಗಳಿರುವ ಫೈಲ್‌ನೊಂದಿಗೆ ಬಂದಿದ್ದ ಮರೀಗೌಡರನ್ನು ಇಂದು ಬೆಳಗ್ಗೆಯಿಂದ ರಾತ್ರಿ ಬಹು ಹೊತ್ತಿನವರೆಗೂ ಇಡಿ ಅಧಿಕಾರಿಗಳು ನಿರಂತರ ವಿಚಾರಣೆ ಮಾಡಿದರು. ಇಂಗ್ಲಿಷ್‌ನಲ್ಲಿ ಪ್ರಶ್ನೆ ಕೇಳಿದರೂ ಮರೀಗೌಡರಿಂದ ಮಾಹಿತಿ ಪಡೆಯಲು ಅನುವಾದಕರ ಸಹಕಾರ ಪಡೆದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ 14 ನಿವೇಶನ ಪಡೆದ ● 6ನೇ ಪುಟಕ್ಕೆ

ರಾಜ್ಯಾದ್ಯಂತ ನ.20ರಂದು ಮದ್ಯ ಮಾರಾಟ ಬಂದ್

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮದ್ಯ ಮಾರಾಟಗಾರರ ಒಕ್ಕೂಟ ನಿರ್ಧಾರ



ಬೆಂಗಳೂರು, ನ.14(ಕೆಎಂಶಿ)– ನವೆಂಬರ್ 20ರಂದು ರಾಜ್ಯಾದ್ಯಂತ ಮದ್ಯ ಮಾರಾಟ ಬಂದ್ ಆಗಲಿದೆ. ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇಕಡ 20 ಲಾಭಾಂಶ ನೀಡುವುದು ಸೇರಿದಂತೆ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯವ್ಯಾಪಿ ಮದ್ಯ ಮಾರಾಟ ಬಂದ್ ಮಾಡಲು ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ನಿರ್ಧರಿಸಿದೆ. ಜಂಟಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಬಿ.ಗೋವಿಂದರಾಜ್ ಹೆಗ್ಡೆ ಹಾಗೂ ಅಧ್ಯಕ್ಷ ಎಸ್.ಗುರುಸ್ವಾಮಿ, ಸಿಲ್–2ರಲ್ಲಿ ಮದ್ಯ ಸೇರಿಸಲು ಅವಕಾಶ ಮಾಡಿಕೊಡಬೇಕು, ಸಿಎಲ್9ರಲ್ಲಿ ಹೆಚ್ಚುವರಿ ಕೌಂಟರ್‌ಗಳನ್ನು ● 6ನೇ ಪುಟಕ್ಕೆ

ಮೃಗಾಲಯ, ದಸರಾ ವಸ್ತುಪ್ರದರ್ಶನ, ಅರಮನೆಯಲ್ಲಿ ಚಿಣ್ಣರ ಕಲರವ

● ವಸ್ತುಪ್ರದರ್ಶನದಲ್ಲಿ ಸಾವಿರಾರು ಮಕ್ಕಳಿಗೆ ಉಚಿತ ಊಟ, ತಿನಿಸು ● ಆಟೋಟ ಸ್ಪರ್ಧೆಗಳಲ್ಲಿ ಮಿಂದೆದ್ದ ಚಿಣ್ಣರು



ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ವಸ್ತು ಪ್ರದರ್ಶನದ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಮಕ್ಕಳ ಸಂಭ್ರಮದಲ್ಲಿ ತಾವೂ ಭಾಗಿಯಾದರು.

ಮೈಸೂರು,ನ.14(ಎಂಟಿವೈ)– ಮಕ್ಕಳ ದಿನಾಚರಣೆಯ ಅಂಗವಾಗಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಗುರುವಾರ ಮಕ್ಕಳ ಜಾತ್ರೆಯೇ ನಡೆಯಿತು. ವಿವಿಧೆಡೆಯಿಂದ ಆಗಮಿಸಿದ್ದ ಅಪಾರ ಸಂಖ್ಯೆಯ ಮಕ್ಕಳು ಮೃಗಾಲಯ, ದಸರಾ ವಸ್ತುಪ್ರದರ್ಶನ, ಅರಮನೆ ಸೇರಿದಂತೆ ಪ್ರವಾಸಿ ತಾಣಗಳಿಗೆ ಲಗ್ಗೆ ಇಟ್ಟು ಸಂಭ್ರಮಿಸಿದರು.

ಪ್ರತಿ ವರ್ಷದಂತೆ ಈ ಬಾರಿಯೂ ಮಕ್ಕಳ ದಿನಾಚರಣೆ ದಿನವಾದ ಇಂದು(ನ.14) ಪ್ರಾಥಮಿಕ ಶಾಲಾ ಮಕ್ಕಳಿಗೆ ಮೃಗಾಲಯ, ದಸರಾ ವಸ್ತುಪ್ರದರ್ಶನ, ಅರಮನೆಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ನಗರ ಮಾತ್ರವಲ್ಲದೆ, ಜಿಲ್ಲೆಯ ವಿವಿಧೆಡೆಯಿಂದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಪ್ರವಾಸಿ ತಾಣಗಳಿಗೆ ತಂಡೋಪತಂಡವಾಗಿ ಆಗಮಿಸಿ, ಒಂದು ದಿನದ ಮಕ್ಕಳ ಹಬ್ಬದಲ್ಲಿ ಪಾಲ್ಗೊಂಡು ಮನಸಾರೆ ಸಂಭ್ರಮಿಸಿದರು.

ದಸರಾ ವಸ್ತುಪ್ರದರ್ಶನದಲ್ಲಿ ಉಪಚಾರ: ದಸರಾ ವಸ್ತುಪ್ರದರ್ಶನದಲ್ಲಿ ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ತಿನಿಸು ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ, ಮಕ್ಕಳಿಗೆ ವಿವಿಧ ಆಟೋಟ ಹಾಗೂ ಚಿತ್ರಕಲಾ ಸ್ಪರ್ಧೆ, ಆಶು ಭಾಷಣ ಸ್ಪರ್ಧೆ ಏರ್ಪಡಿಸುವ ಮೂಲಕ ಮಕ್ಕಳ ದಿನಾಚರಣೆ ಸಂಭ್ರಮದಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳಲಾಯಿತು. ಬೆಳಗ್ಗೆ ಕಡಲೆಕಾಯಿ, ಸೌತೇಕಾಯಿ, ಕಿತ್ತಳೆಹಣ್ಣು, ಚಾಕೊಲೇಟ್, ಬಿಸ್ಕೆಟ್‌ನ್ನು ರಾಶಿ ಇಟ್ಟು, ಮಕ್ಕಳೇ ತೆಗೆದುಕೊಂಡು ಹೋಗುವಂತೆ ಸೂಚಿಸಲಾಯಿತು. ಅಪಾರ ಸಂಖ್ಯೆಯಲ್ಲಿ ಆಗಮಿಸಿದ ಮಕ್ಕಳು ಕೈಗೆ ● 6ನೇ ಪುಟಕ್ಕೆ



ಆಹಾರ ಸುರಕ್ಷತೆ, ಗುಣಮಟ್ಟ ಕಾಪಾಡದ ಬಗ್ಗೆ ದೂರು

ಮೈಸೂರಲ್ಲಿ ಇಂದಿನಿಂದ ಪಿಜಿಗಳ ವಿಶೇಷ ತಪಾಸಣೆ



ಮೈಸೂರು,ನ.14(ಬಿಎಲ್‌ಆರ್)– ಸಾಂಸ್ಕೃತಿಕ ನಗರಿ ಮೈಸೂರಿನ ಪೇಯಿಂಗ್ ಗೆಸ್ಟ್ (ಪಿಜಿ)ಗಳಲ್ಲಿ ಆಹಾರ ಸುರಕ್ಷತೆ ಹಾಗೂ ಗುಣಮಟ್ಟದ ಬಗ್ಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು ನಾಳೆಯಿಂದ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಲಿದ್ದಾರೆ. ಬಹಳಷ್ಟು ಕಾಲೇಜು ವಿದ್ಯಾರ್ಥಿಗಳು ಹಾಗೂ ಉದ್ಯೋಗಸ್ಥರು ಪಿಜಿಗಳಲ್ಲಿ ವಾಸ್ತವ್ಯ ಹೂಡಿದ್ದಾರೆ. ಕಾಲೇಜು ಅಥವಾ ಕೆಲಸ ಮುಗಿಸಿ ಬಂದು ಊಟ–ತಿಂಡಿ ತಯಾರಿ ಮಾಡಿಕೊಳ್ಳುವುದು ಪ್ರಯಾಸವಾಗಿತ್ತು. ಮನೆ ಅಥವಾ ಕೊಠಡಿಗಳ ಬಾಡಿಗೆ ಕೂಡ ದುಬಾರಿಯಾಗಿರುವ ಕಾರಣ ಆರ್ಥಿಕ ಹೊರೆ. ಆದ ಕಾರಣ ಬಹಳಷ್ಟು ವಿದ್ಯಾರ್ಥಿಗಳು, ಉದ್ಯೋಗ ಸ್ಥರು ವಾಸ್ತವ್ಯ ಹೂಡಲು ಪಿಜಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಲ್ಲಿ ವಾಸ್ತವ್ಯದ ಜೊತೆಗೆ ಊಟ, ತಿಂಡಿ ಕೂಡ ದೊರೆಯುತ್ತದೆ. ತಿಂಗಳಿಗೆ ನಿಗದಿ ಮಾಡಿದ ಹಣ ನೀಡಿ ಮನೆಯ ವಾತಾವರಣದಲ್ಲಿ ಇರುವ ಅಭಿಲಾಷೆ. ಮೈಸೂರಿನಲ್ಲಿ ನೂರಾರು ಪಿಜಿಗಳಿದ್ದು, ಸಾವಿರಾರು ಮಂದಿ ವಾಸ್ತವ್ಯ ಹೂಡಿದ್ದಾರೆ.

ಆದರೆ ಇತ್ತೀಚಿಗೆ ಪಿಜಿಗಳಲ್ಲಿನ ಆಹಾರ ಪದಾರ್ಥಗಳು ಗುಣಮಟ್ಟದಿಂದ ಕೂಡಿಲ್ಲ ಎಂಬ ಆರೋಪವಿದೆ. ಸಿಲಿಕಾನ್ ಸಿಟಿ ಬೆಂಗಳೂರಿನ ಕೆಲವು ಪಿಜಿಗಳಲ್ಲಿ ಫುಡ್ ಪಾಯಿಸನ್ ಪ್ರಕರಣಗಳು ದಾಖಲಾಗಿವೆ.

ಆದ ಕಾರಣ ರಾಜ್ಯ ಸರ್ಕಾರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಆಯುಕ್ತ ಶ್ರೀನಿವಾಸ್ ನಿರ್ದೇಶನದ ಮೇರೆಗೆ ಮೈಸೂರಿನಲ್ಲಿ ನಾಳೆಯಿಂದ ಪಿಜಿಗಳ ಆಹಾರ ಸುರಕ್ಷತೆ ಬಗ್ಗೆ ವಿಶೇಷ ತಪಾಸಣಾ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಇದಕ್ಕಾಗಿ ಆಹಾರ ಸುರಕ್ಷಾಧಿಕಾರಿಗಳ ಮೂರು ತಂಡವನ್ನು ರಚನೆ ಮಾಡ ಲಾಗಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಪಿಜಿಗಳಿಗೆ ದಿಢೀರ್ ಭೇಟಿ ನೀಡಿ ಅಲ್ಲಿ ತಯಾರು ಮಾಡುತ್ತಿರುವ ಆಹಾರ ಸುರಕ್ಷತೆ ಬಗ್ಗೆ ಪರಿಶೀಲನೆ ನಡೆಸಲಿದ್ದಾರೆ.

ಪಿಜಿಗಳಲ್ಲಿ ಆಹಾರ ತಯಾರು ಮಾಡುವ ಸ್ಥಳ ಸ್ವಚ್ಛವಾಗಿದೆಯೇ, ಊಟ, ತಿಂಡಿಗೆ ಬಳಸುವ ಆಹಾರ ಪದಾರ್ಥಗಳು ಯಾವ ರೀತಿ ಗುಣಮಟ್ಟ ದಿಂದ ಕೂಡಿದೆ ಎಂದು ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಲಿದ್ದಾರೆ. ಈ ವೇಳೆ ಪಿಜಿಗಳಲ್ಲಿ ತಯಾರು ಮಾಡಿರುವ ಆಹಾರದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಿದ್ದಾರೆ. ಅಷ್ಟೇ ಅಲ್ಲದೆ ಪಿಜಿಯಲ್ಲಿ ವಾಸ್ತವ್ಯ ಹೂಡಿ ರುವವರನ್ನು ಭೇಟಿ ಮಾಡಿ ಏನಾದರೂ ತೊಂದರೆ ಇದೆಯೇ ಎಂಬ ಬಗ್ಗೆಯೂ ಅವರಿಂದ ವಿವರ ಕೂಡ ಪಡೆಯಲಿ ದ್ದಾರೆ. ಮೈಸೂರಿನಲ್ಲಿರುವ ಪಿಜಿಗಳ ಆಹಾರ ಸುರಕ್ಷತೆ ಮತ್ತು ಗುಣಮಟ್ಟವನ್ನು ಪರಿಶೀಲಿಸುವ ಅಧಿಕಾರಿಗಳು ವಾರದೊಳಗೆ ಆಯುಕ್ತರಿಗೆ ವರದಿ ನೀಡಲಿದ್ದಾರೆ. ಪಿಜಿಗಳ ಆಹಾರ ಸುರಕ್ಷತೆ ಮತ್ತು ಗುಣಮಟ್ಟದಲ್ಲಿ ಲೋಪಗಳು ಕಂಡು ಬಂದರೆ ಹಲವು ಕ್ರಮ ಕೈಗೊಳ್ಳಲು ಇಲಾಖೆ ಮಾರ್ಗಸೂಚಿ ಸಿದ್ಧಪಡಿಸಲಿದೆ.

ಇಂದಿರಾ ಕ್ಯಾಂಟೀನ್‌ಗಳ ಆಹಾರ ಪರೀಕ್ಷೆ

ಮೈಸೂರಿನಲ್ಲಿರುವ ಎಲ್ಲಾ ಇಂದಿರಾ ಕ್ಯಾಂಟಿನ್‌ಗಳ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಅಧಿಕಾರಿಗಳು ಪ್ರತಿ ದಿನ ಪರಿಶೀಲನೆ ನಡೆಸುತ್ತಿದ್ದಾರೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳ ತಂಡ ಈಗಾಗಲೇ ಮೈಸೂರಿನ ಹಲವು ಇಂದಿರಾ ಕ್ಯಾಂಟಿನ್ ಗಳಿಗೆ ಭೇಟಿ ನೀಡಿದೆ. ಅಲ್ಲಿ ದೊರೆಯುವ ಆಹಾರ ಮಾತ್ರವಲ್ಲದೆ ಆಹಾರ ವಿತರಿಸುವ ಸ್ಥಳದ ಸ್ವಚ್ಛತೆ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಇಂದಿರಾ ಕ್ಯಾಂಟಿನ್‌ಗಳ ಆಹಾರದ ಮಾದರಿಯನ್ನು ಸಂಗ್ರಹಿಸಿರುವ ಅಧಿಕಾರಿಗಳು ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಆಯಾ ದಿನದ ತಪಾಸಣೆ ಪ್ರಕ್ರಿಯೆ ವರದಿಯನ್ನು ಕೇಂದ್ರ ಕಚೇರಿಗೆ ಆಯಾ ದಿನವೇ ಕಳುಹಿಸಿದ್ದಾರೆ. ಇನ್ನು ಕೆಲವು ಇಂದಿರಾ ಕ್ಯಾಂಟಿನ್‌ಗೆ ಭೇಟಿ ನೀಡಬೇಕಿದ್ದು, ಅಂತಿಮ ವರದಿ ಕಳುಹಿಸಲು ತಯಾರಿ ಮಾಡಿಕೊಂಡಿದ್ದಾರೆ.

ಮೈಸೂರಿನ ಗೋಲ್‌ಗಪ್ಪಾ ಪೂರಿ ಗುಣಮಟ್ಟದಲ್ಲಿ ಲೋಪವಿಲ್ಲ




ಮೈಸೂರಿನಲ್ಲಿ ಮಾರಾಟ ಮಾಡುತ್ತಿರುವ ಗೋಲ್‌ಗಪ್ಪಾ ಪೂರಿ ಗುಣಮಟ್ಟದಲ್ಲಿ ಯಾವುದೇ ರೀತಿಯ ಲೋಪವಿಲ್ಲ ಎಂದು ಪ್ರಯೋ ಗಾಲಯ ದೃಢಪಡಿಸಿದೆ. ಉತ್ತರ ಪ್ರದೇಶ, ಬಿಹಾರ ಸೇರಿದಂತೆ ಹಲವು ರಾಜ್ಯದ ವ್ಯಾಪಾರಿಗಳು ಮೈಸೂರಿನ ರಸ್ತೆ ರಸ್ತೆಗಳಲ್ಲಿ ಗೋಲ್‌ಗಪ್ಪಾ ಪೂರಿ ಮಾರಾಟ ಮಾಡುತ್ತಿದ್ದಾರೆ. ಆದರೆ ಗೋಲ್‌ಗಪ್ಪಾದ ಗುಣಮಟ್ಟದ ಬಗ್ಗೆ ಬಹಳಷ್ಟು ಜನರು ಆಕ್ಷೇಪ ವ್ಯಕ್ತಪಡಿಸಿದ್ದರು. ಗೋಲ್‌ಗಪ್ಪಾ ರುಚಿ ಹೆಚ್ಚಳಕ್ಕೆ ಹಾರ್ಪಿಕ್ ಮತ್ತು ಯೂರಿಯಾ ಬಳಕೆ ಮಾಡಲಾಗುತ್ತದೆ. ಜೊತೆಗೆ ಗೋಲ್‌ಗಪ್ಪಾ ಪೂರಿಯನ್ನು ಅಶುಚಿತ್ವ ವಾತಾವರಣದಲ್ಲಿ ತಯಾರು ಮಾಡಲಿದ್ದು, ಗುಣಮಟ್ಟವಲ್ಲದ ಅಡುಗೆ ಎಣ್ಣೆ ಬಳಕೆ ಮಾಡಲಾಗುತ್ತಿದೆ ಎಂಬ ಆರೋಪವಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಗೋಲ್‌ಗಪ್ಪಾ ಪೂರಿಗಳ ಗುಣಮಟ್ಟ ಪರೀಕ್ಷೆ ಮಾಡುವಂತೆ ಕಾರ್ಯಾಚರಣೆ ಕೈಗೊಂಡಿತ್ತು. ಮೈಸೂರಿನ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಮೂರು ಅಧಿಕಾರಿಗಳ ತಂಡ ಮೈಸೂರಿನಲ್ಲಿ ಕೆಲವೆಡೆ ಮಾರಾಟ ಮಾಡುವ ಗೋಲ್‌ಗಪ್ಪಾ ಪೂರಿ ಮತ್ತು ಅದಕ್ಕೆ ಬಳಸುವ ಇತರೆ ಪದಾರ್ಥಗಳ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿತ್ತು. ಆದರೆ ಮೈಸೂರಿನಲ್ಲಿ ಮಾರಾಟವಾಗುತ್ತಿರುವ ಗೋಲ್‌ಗಪ್ಪಾ ಪೂರಿ ಮತ್ತು ಅದಕ್ಕೆ ಬಳಸುವ ಪದಾರ್ಥಗಳ ಗುಣಮಟ್ಟದಲ್ಲಿ ಯಾವುದೇ ಲೋಪವಿಲ್ಲ ಎಂಬ ವರದಿ ಬಂದಿದೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ 'ಸ್ವರ್ಣಕೃತಿ' ಬಿಡುಗಡೆ



ಮೈಸೂರು, ನ. 14– ಮೈಸೂರಿನ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ತನ್ನ ವಿಶೇಷವಾದ ಹೊಸ ಸಂಗ್ರಹವಾದ 'ಸ್ವರ್ಣಕೃತಿ' ಬಿಡುಗಡೆ ಮಾಡಿದೆ. ಅತ್ಯಂತ ನುರಿತ ನೈಪುಣ್ಯಾಗಾರರಿಂದ ರಚಿಸಲಾದ ಈ ಕ್ಲಾಸಿಕ್ ಕ್ಯೂರೇಶನ್, ಭಾರತದ ಶ್ರೀಮಂತ ಪರಂಪರೆಯನ್ನು ಸಮಕಾಲೀನ ವಿನ್ಯಾಸಗಳೊಂದಿಗೆ ಸುಂದರವಾಗಿ ಸಂಯೋಜಿಸುವ ಸೊಗಸಾದ ಚಿನ್ನದ ಆಭರಣಗಳನ್ನು ಪ್ರದರ್ಶಿಸುತ್ತದೆ. ಆಧುನಿಕತೆಯೊಂದಿಗೆ ಸಂಪ್ರದಾಯವನ್ನು ಸಮತೋಲನಗೊಳಿಸುವ, ಕಾಲಾತೀತ ಸೊಬಗು ಮತ್ತು ಶಕ್ತಿಯನ್ನು ಸಾಕಾರಗೊಳಿಸುವ ಮಹಿಳೆಯರ ಪ್ರಯಾಣಕ್ಕೆ ಸ್ವರ್ಣಕೃತಿ ಗೌರವವಾಗಿದೆ. ಸಂಗ್ರಹದಲ್ಲಿರುವ ಪ್ರತಿಯೊಂದು ತುಣುಕನ್ನು ನಿಖರವಾಗಿ ವಿಶೇಷ ಕರಕುಶಲತೆಯಿಂದ ರಚಿಸಲಾಗಿದೆ, ಸಂಕೀರ್ಣವಾದ ಮಾದರಿಗಳು, ಸೂಕ್ಷ್ಮವಾದ ಫಿಲಿಗ್ರೀ ಮತ್ತು ಭಾರತದ ಅಂತಸ್ತಿನ ಪರಂಪರೆಯನ್ನು ಆಚರಿಸುವ ಅಲಂಕೃತ ವಿವರಗಳನ್ನು ಒಳಗೊಂಡಿದೆ. ಬಿಡುಗಡೆಯ ಕುರಿತು ಪ್ರತಿಕ್ರಿಯಿಸಿದ ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂಪಿ ಅಹಮ್ಮದ್, 'ಸ್ವರ್ಣಕೃತಿಯೊಂದಿಗೆ ನಾವು ಕರಕುಶಲ ಚಿನ್ನದ ಆಭರಣಗಳ ಸೌಂದರ್ಯವನ್ನು ಮಾತ್ರವಲ್ಲದೆ ಪ್ರತಿ ತುಣುಕು ಪ್ರತಿನಿಧಿಸುವ ಪರಂಪರೆ ಮತ್ತು ಸೊಬಗನ್ನು ಸಹ ಆಚರಿಸುತ್ತೇವೆ. ಇದು ಗುಣಮಟ್ಟ, ಪಾರದರ್ಶಕತೆ ಮತ್ತು ಮೌಲ್ಯದ ನಮ್ಮ ಭರವಸೆಯನ್ನು ಸಾಕಾರಗೊಳಿಸುತ್ತದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಗ್ರಾಹಕರು ಹೊಂದಿರುವ ನಂಬಿಕೆಯನ್ನು ಎತ್ತಿಹಿಡಿಯುತ್ತದೆ ಎಂದರು.

ಹುಟ್ಟುಹಬ್ಬದ ಶುಭಾಶಯ...



ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಖ್ಯಾತ ಉದ್ಯಮಿ ಅಬ್ದುಲ್ ಅಜೀಜ್ (ಅಬ್ದುಲ್ ಬಾಯ್) ಅವರ ಜನ್ಮದಿನದ ಹಿನ್ನೆಲೆಯಲ್ಲಿ ಫಯಾಜ್ ಅಹಮದ್, ವಕ್ಫ್ ಬೋರ್ಡ್ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಅಕ್ರಂ ಪಾಷಾ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜುಬೇರ್ ಅಹಮದ್, ಚೇತನ್, ಅಲೋಕ್ ಜೈನ್, ಮಹಾನ್ ಶ್ರೇಯಸ್, ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಮಹಾರಾಣಿ ವಿಜ್ಞಾನ ಕಾಲೇಜಲ್ಲಿ 'ಕನ್ನಡ ಹಬ್ಬ'



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ 'ಕನ್ನಡ ಹಬ್ಬ'ದಲ್ಲಿ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಮಾತನಾಡಿದರು. ಪ್ರಾಂಶುಪಾಲ ಡಾ.ಅಬ್ದುಲ್ ರಹಿಮಾನ್, ಪತ್ರಾಂಕಿತ ವ್ಯವಸ್ಥಾಪಕಿ ಆರ್.ಮೀನಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ನ.14(ಎಸ್‌ಬಿಡಿ)– ಕನ್ನಡ ಭಾಷೆ ರಕ್ಷಣೆಯಲ್ಲಿ ಜಾನಪದದ ಕೊಡುಗೆ ಅಪಾರವಾಗಿದೆ ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಹೇಳಿದರು.

ರಾಜ್ಯೋತ್ಸವ ಪ್ರಯುಕ್ತ ಮೈಸೂರು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಕಲಾ ಮಂಟಪದಲ್ಲಿ ಗುರುವಾರ ಆಯೋಜಿಸಿದ್ದ 'ಕನ್ನಡ ಹಬ್ಬ'ದಲ್ಲಿ ಮಾತನಾಡಿದ ಅವರು, ಗ್ರಾಮೀಣ ಜನರಲ್ಲಿ ಬೆರೆದುಕೊಂಡಿರುವ ಜಾನಪದದಿಂದಲೇ ಕನ್ನಡ ಭಾಷೆ ಉಳಿದಿದೆ ಎಂದರು.

ನಮ್ಮ ನಾಡಿನ ಜಾನಪದ ಮಹಾಕಾವ್ಯಗಳು ಪಾಶ್ಚಿಮಾತ್ಯರ ಜಾನಪದ ಮಹಾಕಾವ್ಯಗಳಿಗಿಂತ ಮಿಗಿಲಾಗಿವೆ. ಜಗತ್ತಿನ ಯಾವ ಭಾಷೆಗೂ ಕಡಿಮೆ ಇಲ್ಲದ ಸಾಂಸ್ಕೃತಿಕ ಹಿರಿಮೆಯನ್ನು ಕನ್ನಡ ಹೊಂದಿದೆ. ನಮ್ಮ ಭಾಷೆಯ ಮಹತ್ವವನ್ನು ಉಳಿಸಿಕೊಳ್ಳುವುದು ಇಂದಿನ ಯುವ ಸಮುದಾಯದ ಜವಾಬ್ದಾರಿ. ನಿತ್ಯ ನಮ್ಮ ಬದುಕಿನಲ್ಲಿ ಕನ್ನಡವನ್ನು ಬಳಸಿದರೆ ಸಾಕು, ಭಾಷೆ ಗಟ್ಟಿಯಾಗಿ ಉಳಿಯುತ್ತದೆ. ಈ ಮೂಲಕ ನಾಡು, ನಾಡಿನ ಜನ, ನಾಡಿನ ತನ, ನೆಲದ ಮಣ್ಣಿನ ಗುಣ ಎಲ್ಲವೂ ಉಳಿಯುತ್ತದೆ ಎಂದು ತಿಳಿಸಿದರು.


ಹೆಣ್ಣು ಮಕ್ಕಳು ಈ ನಾಡಿನ ಸಂಸ್ಕೃತಿ ರಕ್ಷಣೆಯ ರೂವಾರಿಗಳು. ಸಾಂಸ್ಕೃತಿಕ ರಾಯಭಾರಿಗಳು ಅವರೇ. ಎಲ್ಲಾ ಹೆಣ್ಣು ಮಕ್ಕಳು ಕನ್ನಡದ ತಾಯಂದಿರು. ಹಾಗಾಗಿ ಈ ನಾಡಿನ ಭಾಷೆಯೊಂದಿಗೆ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಹಿಂಜರಿಕೆ ಬೇಡ. ನಮ್ಮ ಭಾಷೆ ಹಾಗೂ ಸಂಸ್ಕೃತಿಯನ್ನು ಹೆಮ್ಮೆಯಿಂದ ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು.

ಪ್ರಾಂಶುಪಾಲ ಡಾ.ಎಂ.ಅಬ್ದುಲ್ ರಹಿಮಾನ್ ಮಾತನಾಡಿ, ನಿತ್ಯ ಬಳಕೆ ಮೂಲಕ ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಬೇಕು. ಯಾವುದೇ ಭಾಷೆ ಉಳಿಯುವುದು ಬಳಕೆಯಿಂದ ಮಾತ್ರ ಎಂಬ ಜಾಗ್ರತೆ ಎಲ್ಲರಲ್ಲಿರಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೆಲ, ಜಲ ಭಾಷೆಗೆ ಸಂಬಂಧಿಸಿದ ಹಾಡು, ನೃತ್ಯ ಪ್ರದರ್ಶನ ಮಾಡಿದರು. ರಾಜ್ಯೋತ್ಸವದ ಅಂಗವಾಗಿ ನಡೆಸಲಾದ ವಿವಿಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಾಂಸ್ಕೃತಿಕ ಸಮಿತಿ ಸಂಚಾಲಕಿ ಶ್ರೀಮತಿ ಕೆಪಿ.ಕೋಮಲ್, ಖಜಾಂಚಿ ಡಾ.ಜಿ.ಎಲ್.ಬಸವರಾಜ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್.ಕೆಂಡಗಣ್ಣೇಗೌಡ, ಪತ್ರಾಂಕಿತ ವ್ಯವಸ್ಥಾಪಕಿ ಆರ್.ಮೀನಾಕ್ಷಿ, ಸ್ನಾತಕೋತ್ತರ ವಿಭಾಗದ ಅಮೃತವರ್ಷಿಣಿ, ವಿದ್ಯಾರ್ಥಿ ಸಂಸತ್ ಸದಸ್ಯರಾದ ಕಾವ್ಯ ಎಂ.ಕಟ್ಟಿ, ಎಸ್.ದೀಕ್ಷಿತ, ವಿ.ಜೀವಿತಾ, ಜೆ.ಜರೀನಾ, ಹೆಚ್.ಕೆ.ರಕ್ಷಿತಾ, ಭೂಮಿಕಾ, ಎ.ಬೃಂದಾ, ಎಂ.ದಿವ್ಯಶ್ರೀ, ಟಿ.ಹೆಚ್.ಅಮೃತಾ, ಬಿ.ಎಂ.ರಕ್ಷಾ, ಲೇಖನಾ ಅರಸ್, ಕೆಎಸ್.ಲಕ್ಷ್ಮೀ, ಬಿ.ಎನ್.ಕಾವೇರಿ ಸೇರಿದಂತೆ ಎಲ್ಲಾ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಿಧನ

ಯಶೋಧಮ್ಮ



ಶ್ರವಣಬೆಳಗೊಳ,ನ.14– ತಾಲೂಕಿನ ಅರುವನಹಳ್ಳಿ ಗ್ರಾಮದ ಮುಖಂಡರಾದ ಲೇಟ್ ಬೋಜಪ್ಪನವರ ಪತ್ನಿ ಶ್ರೀಮತಿ ಯಶೋಧಮ್ಮ (93) ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ದಿವಂಗತರು ಓರ್ವ ಪುತ್ರ, ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಬುಧವಾರ ಸಂಜೆ ಅರುವನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.11.2024 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು, ಭುಜದ ನೋವು ಇತರೆ ತೊಂದರೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ಟೆರೇಷಿಯನ್ ಕಾಲೇಜು :** ಅಂತರ ಕಾಲೇಜು ಕಾಮರ್ಸ್ ಫೆಸ್ಟ್, ಸ್ಥಳ: ಅವೆ ಮರಿಯಾ ಗೋಲ್ಡನ್ ಜ್ಯೂಬಿಲಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಡ್ರೀಮ್ಸ್ ಇಂಕ್ ಇನ್ನೋವೇಷನ್ ಕ್ರ್ಯೂ ಇವೆಂಟ್ಸ್ ಅಂಡ್ ಆಡ್ಸ್ :** ಬೃಹತ್ ಎಜುಕೇಷನ್ ಫೇರ್, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಮೈಕ್ರೋಕಾಸಮ್ 1.0 ಮೈಕ್ರೋ ಬಯೋಲಾಜಿ ಕಾನ್ಫರೆನ್ಸ್, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ನಿರ್ದೇಶಕ ಪ್ರೊ. ಅನಿಲ್ ಕೌಲ್, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಡಾ. ಬಿ.ಎಂ. ತ್ಯಾಗರಾಜು, ಡಾ. ಅನುಣ್ ಕೆ. ಭೂನಿಯಾ, ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಬಸವನಗೌಡಪ್ಪ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.

■ **ರೋಟರಿ ಬೆಂಗಳೂರು ಗ್ಲೋಬಲ್ ಯೋಗ, ಯೋಗ ಯೂನಿವರ್ಸಿಟಿಸ್ ಆಫ್ ಅಮೇರಿಕಾಸ್ (ಬೆಂಗಳೂರು), ವಿಶ್ವ ಫೌಂಡೇಷನ್ (ಅಕ್ಕಲ್‌ಕೋಟ್), ವೇದವ್ಯಾಸ ಫೌಂಡೇಷನ್ (ಮೈಸೂರು), ಮಹರ್ಷಿ ಪಬ್ಲಿಕ್ ಸ್ಕೂಲ್ :** ಅಗ್ನಿಹೋತ್ರ ಸಮಾವೇಶ, ಡಾ. ಯೋಗಿ ದೇವರಾಜ್ ಗುರೂಜಿ, ಡಾ. ರಾಜಶೇಖರ್ ರೆಡ್ಡಿ, ಡಾ. ಪುರುಷೋತ್ತಮ ಮಹಾರಾಜ್, ಭವಾನಿ ಶಂಕರ್, ಡಾ. ರೀಟಾ ಮಹಾಜನ್, ಎಸ್.ಎ. ರಾಮದಾಸ್, ಡಾ. ರಾಘವೇಂದ್ರ ಪೈ, ಸ್ಥಳ: ಮಹರ್ಷಿ ಪಬ್ಲಿಕ್ ಸ್ಕೂಲ್, ಬೆಳಗ್ಗೆ 10 ರಿಂದ.

■ **ರೋಟರಿ ಮೈಸೂರು ನಾರ್ತ್ :** ಬೆಳಗ್ಗೆ 10 ರಿಂದ ಮಕ್ಕಳ ದಿನಾಚರಣೆ ಪ್ರಯುಕ್ತ ಆರೋಗ್ಯವಂತ ಮಕ್ಕಳ ಸ್ಪರ್ಧೆ, ತೀರ್ಪುಗಾರರು : ಜೆಎಸ್‌ಎಸ್ ಆಸ್ಪತ್ರೆ ಮಕ್ಕಳ ತಜ್ಞ ಡಾ. ವರ್ಷ, ಸಂಜೆ 7ಕ್ಕೆ ಸಮಾರೋಪ ಸಮಾರಂಭ, ಸ್ಥಳ: ರೋಟರಿ ಭವನ, ವಿಜಯನಗರ ರೈಲ್ವೆ ಬಡಾವಣೆ.

■ **ಮಹಾಜನ ಕಾನೂನು ಕಾಲೇಜು:** ನ್ಯಾಯವನ್ನು ಉತ್ತೇಜಿಸುವಲ್ಲಿ ಕಾನೂನು ಸೇವಾ ಪ್ರಾಧಿಕಾರದ ಜವಾಬ್ದಾರಿಗಳು ಮತ್ತು ಪಾತ್ರ ಕುರಿತು ಕಾರ್ಯಾಗಾರ, ಉದ್ಘಾಟನೆ : ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆನಂದ್ ಪಿ.ವುಗಾಡೆ, ಮುಖ್ಯ ಅತಿಥಿಗಳು: ಸೀನಿಯರ್ ಸಿವಿಲ್ ಜಡ್ಜ್ ಬಿ.ಜಿ.ದಿನೇಶ್, ಉಪಸ್ಥಿತರು: ವಕೀಲರಾದ ಬಿ.ಆರ್.ಚಂದ್ರಮೌಳಿ, ಪ್ರಿನ್ಸಿಪಾಲ್ ಸೌಮ್ಯ, ಅಧ್ಯಕ್ಷತೆ: ಕಾಲೇಜು ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ.

■ **ಸಕ್ಷಮ, ದಿವ್ಯಾಂತ ಸೇವಾ ಕೇಂದ್ರ :** ಸ್ಕೂಲ್ ಕಿಟ್ಸ್ ಮತ್ತು ಮೆಡಿಕಲ್ ಕಿಟ್ಸ್ ವಿತರಣಾ ಕಾರ್ಯಕ್ರಮ, ಉದ್ಘಾಟನೆ : ಬಿಎಸ್‌ಎಸ್ ವಿದ್ಯೋದಯ ಟ್ರಸ್ಟಿ ಟಿ. ಮುರಳೀಧರ್ ಭಟ್, ಎರಿಕಾ ವೆಸ್ಟ್‌ಪಾಲ್, ಗೌರವ ಅತಿಥಿಗಳು : ನಂದಕುಮಾರ್ ವರದರಾಜನ್, ಡಾ. ಚಂದ್ರಶೇಖರ್, ನಾಗರಾಜ್, ಅರುಣಾಚಲ ಶರ್ಮ, ಅಧ್ಯಕ್ಷತೆ : ಸಕ್ಷಮ ಅಧ್ಯಕ್ಷ ಬಿ.ಎನ್. ಜಯರಾಮ್, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಹಿರಿಯ ನಾಗರಿಕರ ಮಂಡಳಿ ಮತ್ತು ವಿಶ್ವಸ್ಥ ಮಂಡಳಿ, ಮೈಸೂರು ಹಾಗೂ ಕಂಪಾನಿಯೋ ಬೆಂಗಳೂರು :** ಆರೋಗ್ಯ ಸುಧಾರಣೆ ಹಾಗೂ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಸಂಪೂರ್ಣ ಮಾಹಿತಿ ಕಾರ್ಯಾಗಾರ, ಸ್ಥಳ : ಹಿರಿಯ ನಾಗರಿಕರ ಮಂಡಳಿ ಮತ್ತು ವಿಶ್ವಸ್ಥ ಮಂಡಳಿ, ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಮೈಸೂರು ಪ್ರಜಾಪ್ರತಿನಿಧಿ ಸಭೆ : ಚಾರಿತ್ರಿಕ ಅವಲೋಕನ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಆಶಯ ನುಡಿ : ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಡಾ.ಗವಿಸಿದ್ದಯ್ಯ, ಸ್ಥಳ: ಕಾಲೇಜು ಆವರಣ, ಊಟಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಸ್ವಯಂ ಅಭಿವೃದ್ಧಿಗಾಗಿ ಯೋಗ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಡಾ.ಜಿ. ಶೀಲಾ, ಸಂಪನ್ಮೂಲ ವ್ಯಕ್ತಿ : ಡಾ. ಎಸ್. ಮಾದಿಯಾಲಗನ್, ಡಾ. ಎಂ. ಪುಷ್ಪಾ, ಸ್ಥಳ: ಮಾನಸ ಇಂಡೋರ್ ಸ್ಟೇಡಿಯಂ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜು :** 34ನೇ ವಾರ್ಷಿಕ ಕರ್ನಾಟಕ ಅಸೋಸಿಯೇಷನ್ ಆಫ್ ಕಮ್ಯೂನಿಟಿ ಹೆಲ್ತ್ ಕಾನ್ಫರೆನ್ಸ್, ಕಾಚ್‌ಕಾನ್–2024, ಸ್ಥಳ: ಶ್ರೀರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ಹುಣ್ಣಿಮೆಯಂದು ಜರುಗಲಿರುವ ಉಪನ್ಯಾಸ ಕಾರ್ಯಕ್ರಮ, ತಿಂಗಳ ತಿಳಿವು, ಸಾನ್ನಿಧ್ಯ : ರಾಮಕೃಷ್ಣ ಆಶ್ರಮ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಹಾರಾಜ್, ತಿಂಗಳ ಅತಿಥಿ : ಸ್ವಾಮಿ ಸರ್ವಜಯಾನಂದ, ಉಪಸ್ಥಿತರು : ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಡಾ.ಎಸ್.ಪಿ. ಯೋಗಣ್ಣ, ಬಸವಣ್ಣ, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ, ಸಂಜೆ 5.30ಕ್ಕೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಮಠದ ಆವರಣ, ಸಂಜೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಸುಕೇಶ್. ಪಿ, ಸಹಾಯಕ ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ – 'ವಿಶ್ವ ಮಧುಮೇಹ ದಿನಾಚರಣೆಯ ಸಂದರ್ಭದಲ್ಲಿ 'ಮಕ್ಕಳಲ್ಲಿ ಮಧುಮೇಹ– ನಿರ್ವಹಣೆ ಮತ್ತು ಚಿಕಿತ್ಸೆ' ಕುರಿತು ಡಾ.ತೃಪ್ತಿ. ಎಸ್.ಅವರೊಂದಿಗೆ ಮಾತುಕತೆ ಮತ್ತು 'ಮಧುಮೇಹ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ' ಕುರಿತು ಡಾ. ರೇಣುಕಾಪ್ರಸಾದ್. ಎ.ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಎಂ. ಬಾಲಮುರಳೀಕೃಷ್ಣ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ– ಪ್ರತಿಭಾ, 12.45 ಕಾದಂಬರಿ ವಿಹಾರ – ಮುಂದಿನ ವಾರದಿಂದ ಬಿತ್ತರಗೊಳ್ಳಲಿರುವ ಕಾದಂಬರಿ ಓದಿನ ಕುರಿತು ಪ್ರಸ್ತಾವನೆ. ಪ್ರಸ್ತುತಿ : ಡಾ. ಮೈಸೂರು ಉಮೇಶ್, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಚಿಟ್ಟಿಬಾಬು–ವೀಣಾ ವಾದನ, 4.00 ಮಹಿಳಾರಂಗ–ಸಖೀ ಸಂವಾದ, ವಿಷಯ–ಹೆಂಡತಿಯ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಗಂಡನ ಪಾತ್ರ, ಪ್ರಸ್ತುತಿ : ಸಹನ, ನೇತ್ರ, 4.30 ವೃತ್ತಿ ಮಾರ್ಗದರ್ಶನ– ಕರ್ನಾಟಕ ಮುಕ್ತ ವಿದ್ಯಾಲಯ ಅಂದರೆ ಓಪನ್ ಸ್ಕೂಲ್‌ನಲ್ಲಿ ಇರುವ ಅಧ್ಯಯನ ಅವಕಾಶಗಳು ಕುರಿತು ಮೈಸೂರಿನ ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯದ ನಿರ್ದೇಶಕರಾದ ಸಿ.ಎಸ್. ಶಿವಸ್ವಾಮಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.50 ಕೃಷಿರಂಗ : ವ್ಯವಸಾಯದ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ. ಸಾಲಿಗ್ರಾಮ ತಾಲೂಕು ಮಿರ್ಲೆ ಹೋಬಳಿ ಬೀಚನಹಳ್ಳಿ ಕೊಪ್ಪಲು ಗ್ರಾಮದ ಶಿವಣ್ಣ, ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ 'ಶಬ್ದ ಮೀರಿದ ಆಲಿಸುವಿಕೆ ಹೇಗೆ? ಏಕೆ?' ಮಾತನಾಡುತ್ತಾರೆ–ಹೆಚ್. ಎಸ್. ಮಧುರಾಣಿ, 8.00 ರಸಮಂಜರಿ, ಕನ್ನಡವನ್ನು ಪೋಷಿಸಿದ ಸಂಸ್ಕೃತ. ಮಾತನಾಡುವವರು–ಡಾ. ಎಂ.ಎ. ಆಳ್ವಾರ್, ತರ್ಕದ ಭಾವವೇನು–ಮಾತನಾಡುವವರು –ಶ್ರೀನಿಧಿ ಪ್ಯಾಟಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಜಿ.ಎನ್. ಬಾಲಸುಬ್ರಹ್ಮಣ್ಯಂ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

■ **ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ :** ತಲಕಾಡು ಕಾವೇರಿ ನದಿಯಲ್ಲಿ ಕಾರ್ತಿಕ ಹುಣ್ಣಿಮೆಯಂದು ಕಾವೇರಿ ಆರತಿ, ಉಪಸ್ಥಿತರು : ತಲಕಾಡಿನ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮೀಜಿ, ಸ್ಥಳ: ತಲಕಾಡು ಕಾವೇರಿ ನದಿ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಕನ್ನಡ ರಾಜ್ಯೋತ್ಸವ ಆಚರಣೆ, ಮುಖ್ಯ ಅತಿಥಿಗಳು : ಖ್ಯಾತ ನಿರ್ದೇಶಕ ಸುರೇಶ್ ಹೆಬ್ಳೀಕರ್, ಜಾನಪದ ಕಲಾವಿದ ಜಿ. ಅಮ್ಮರಾಮಚಂದ್ರ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸನ್ಮಾನ : ರಂಗಕರ್ಮಿ ಜನಾರ್ಧನ್, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ರಂಗಕರ್ಮಿ ಡಿ. ರಾಮು, ನೃತ್ಯ ಕಲಾವಿದೆ ಶ್ರೀಮತಿ ಲಲಿತರಾವ್, ರಂಗ ಕಲಾವಿದೆ ಶ್ರೀಮತಿ ಸರಸ್ವತಿ ಜುಲೇಖಾ ಬೇಗಂ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–273, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ಜೆ.ಕೆ. ಯೋಗಕೀರ್ತನ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಸುನಿಲ್ ಸುಬ್ರಮಣ್ಯ –ಮೃದಂಗ, ವಿದ್ವಾನ್ ಉತ್ತಮ್ ಶಾಂತರಾಜು–ಘಟಂ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ಜಾನಪದ ನೃತ್ಯೋತ್ಸವ, ಉದ್ಘಾಟನೆ : ಪತ್ರಕರ್ತ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ, ಮುಖ್ಯ ಅತಿಥಿಗಳು : ವಾಣಿಜ್ಯ ಇಲಾಖೆ ಸಹಾಯಕ ಆಯುಕ್ತ ಎಸ್. ನಾಗರಾಜು, ಡಾ. ಕೆ.ಎ. ಗೋವಿಂದೇಗೌಡ, ಕೃಷ್ಣ ಜನಮನ, ಕುಮಾರಸ್ವಾಮಿ, ಸ್ಥಳ: ಕಲಾಮಂದಿರ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವ, ಅಮೃತಾ ವಿಶ್ವವಿದ್ಯಾಪೀಠಂ ಅವರಿಂದ ಜತೆಗಿರುವನು ಚಂದಿರ ನಾಟಕ ಪ್ರದರ್ಶನ, ರಚನೆ : ಜಯಂತ್ ಕಾಯ್ಕಿಣಿ, ನಿರ್ದೇಶನ: ಎಸ್. ಕಾರ್ತಿಕ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ಸಂಜೆ 6.30ಕ್ಕೆ ವಸುಂಧರೋತ್ಸವ, 40ನೇ ವರ್ಷದ ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ಸಂಗೀತ–ನೃತ್ಯಗಳ ಹಬ್ಬ, ಡಾ.ವಸುಂಧರ ದೊರೆಸ್ವಾಮಿರವರ 75ನೇ ಜನ್ಮ ದಿನೋತ್ಸವ ಹಾಗೂ 50 ವರ್ಷಗಳ ಸಂಗೀತ–ನೃತ್ಯಕಲಾ ಸೇವೆಯ ಸಂಭ್ರಮ ಆಚರಣೆ, ಉದ್ಘಾಟನೆ : ಜೆಎಸ್‌ಎಸ್‌ಎಸ್ ಆಡಳಿತಾಧಿಕಾರಿ ಅನುಪಮ ಬಿ.ಪಂಡಿತ್, ಮುಖ್ಯ ಅತಿಥಿಗಳು : ಮಂಗಳೂರು ಗಣೇಶ ಬೀಡಿಯ ಮ್ಯಾನೇಜಿಂಗ್ ಪಾರ್ಟ್‌ನರ್ ಡಾ.ಎಂ.ಜಗನ್ನಾಥ ಶೆಣೈ, ಖ್ಯಾತ ಸಾಹಿತಿ ಕೆ.ಸಿ.ಶಿವಪ್ಪ, ಅಧ್ಯಕ್ಷತೆ : ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಶುಭ ಧನಂಜಯ, 'ಡಾ.ವಸುಂಧರ ದೊರೆಸ್ವಾಮಿರವರ ನೃತ್ಯ ಪಯಣದ ವ್ಯಕ್ತಿ ಪಯಣ' ಪುಸ್ತಕ ಬಿಡುಗಡೆ, ನೃತ್ಯ ಕಾರ್ಯಕ್ರಮ, ಸಂಜೆ 6 ಗಂಟೆಗೆ ವಿದುಷಿ ಸೌಮ್ಯ ಗೋವಿಂದ ನಾಯ್ಡು, 6.45ಕ್ಕೆ ವಿದ್ವಾನ್ ಸುಧನ್ವ ಎಂ.ಎಲ್ ಮತ್ತು ಎಂ.ಎಸ್. ಸುಮೇದಿನಿ, 7.30ಕ್ಕೆ ವಿದುಷಿ ಮಿತ್ರ ನವೀನ್ ಶಿಷ್ಯ ವೃಂದ ನೃತ್ಯ ಪ್ರದರ್ಶನ, ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ.

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ :** ಕನ್ನಡವೆಮ್ಮಯ ಪ್ರಾಣ, ರಾಜ್ಯೋತ್ಸವ ಸಂಭ್ರಮ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಕೆ.ಆರ್. ಪ್ರಭಾಕರರಾವ್, ಸ್ಥಳ: ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಹುಣ್ಣಿಮೆ ದೀಪೋತ್ಸವ, ಸಂಜೆ 7ಕ್ಕೆ ಶಿವ ದೀಪೋತ್ಸವ, ಪ್ರಸಾದ ವಿನಿಯೋಗ, ಸ್ಥಳ:ದೇವಸ್ಥಾನ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಕಲಾಸುರುಚಿ:** ವಿಶ್ವನಾಥ ಮಿರ್ಲೆ ನೆನಪಿನ ಮಕ್ಕಳ ಇಂಗ್ಲಿಷ್ ನಾಟಕೋತ್ಸವ, ಉದ್ಘಾಟನೆ : ಪತ್ರಕರ್ತೆ ಶ್ರೀಮತಿ ಪ್ರೀತಿ ನಾಗರಾಜ್, 6.15ಕ್ಕೆ ಮೈಸೂರು ಇಂಟರ್ ನ್ಯಾಷನಲ್ ಸ್ಕೂಲ್ ಮಕ್ಕಳಿಂದ ದಿ ಟ್ರೈಲ್ ಆಫ್ ಎ ಥೀಫ್, 7.15ಕ್ಕೆ ಆಚಾರ್ಯ ವಿದ್ಯಾ ಕುಲದ ಪೋಸ್ಟ್ ಅರ್ಲಿ ಫಾರ್ ಕ್ರಿಸ್ ಮಸ್ ನಾಟಕ ಪ್ರದರ್ಶನ, ಸ್ಥಳ: ಸುರುಚಿ ರಂಗಮನೆ.

ಅಂಚೆ ನೌಕರರ 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ ಸಮಾರೋಪ

ಪುರುಷರ ವಿಭಾಗದಲ್ಲಿ ತಮಿಳುನಾಡು, ಮಹಿಳೆಯರ ವಿಭಾಗದಲ್ಲಿ ದೆಹಲಿ ತಂಡಗಳಿಗೆ ಟೀಂ ಚಾಂಪಿಯನ್‌ಶಿಪ್

ದೇಶದಲ್ಲಿ ಕ್ರೀಡೆ, ಕ್ರೀಡಾಪಟುಗಳಿಗೆ ಹೆಚ್ಚು ಅವಕಾಶ ಸಿಗಬೇಕು ; ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಿ ಅಂತಾರಾಷ್ಟ್ರೀಯ ಕ್ರೀಡಾಪಟು ಅಶ್ವಿನಿ ಅಕ್ಕುಂಜಿ ಅಭಿಮತ



ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಟೀಂ ಚಾಂಪಿಯನ್‌ಶಿಪ್‌ಗೆ ಭಾಜನವಾದ ಪುರುಷರ ವಿಭಾಗದ ತಮಿಳುನಾಡು ತಂಡ ಮತ್ತು ಮಹಿಳೆಯರ ವಿಭಾಗದ ದೆಹಲಿ ತಂಡಕ್ಕೆ ಬಹುಮಾನ ವಿತರಣೆ ಮಾಡಲಾಯಿತು.

ಮೈಸೂರು,ನ.14(ಪಿಎಂ)– ನಜರ್‌ಬಾದಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಭಾರತೀಯ ಅಂಚೆ ಇಲಾಖೆ ವತಿಯಿಂದ ನಡೆದ ಅಂಚೆ ನೌಕರರ 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪುರುಷರ ವಿಭಾಗದಲ್ಲಿ ತಮಿಳುನಾಡು ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ದೆಹಲಿ ತಂಡವು ಟೀಂ ಚಾಂಪಿಯನ್‌ಶಿಪ್‌ಗೆ ಭಾಜನವಾದವು.

ಇದೇ ಕ್ರೀಡಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭದಲ್ಲಿ ಈ ಎರಡು ತಂಡಗಳೊಂದಿಗೆ ವಿವಿಧ ವಿಭಾಗದಲ್ಲಿ ಗೆಲುವು ಸಾಧಿಸಿದ ಪಟುಗಳಿಗೂ ಬಹುಮಾನ ಹಾಗೂ ಟ್ರೋಫಿಗಳನ್ನು ವಿತರಣೆ ಮಾಡಲಾಯಿತು.

ಬಹುಮಾನ ವಿತರಿಸಿದ ಅಂತಾರಾಷ್ಟ್ರೀಯ ಕ್ರೀಡಾಪಟು, ಧ್ಯಾನ್‌ಚಂದ್ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಶ್ವಿನಿ ಅಕ್ಕುಂಜಿ ಮಾತನಾಡಿ, ದೇಶದಲ್ಲಿ ಕ್ರೀಡೆ ಹಾಗೂ ಕ್ರೀಡಾಪಟುಗಳಿಗೆ ಹೆಚ್ಚು ಅವಕಾಶ ಸಿಗಬೇಕು. ಕ್ರೀಡಾಪಟುಗಳಿಗೆ ಅಂಚೆ ಇಲಾಖೆಯಲ್ಲಿ ಹೆಚ್ಚು ಮೀಸಲಾತಿ ನೀಡಿ ಅವರಿಗೆ ಇನ್ನು ಹೆಚ್ಚಿನ ಪ್ರೋತಾಹ ನೀಡಬೇಕು. ಬಿಡುವಿದ್ದಾಗಲೆಲ್ಲಾ ಪ್ರತಿಯೊಬ್ಬರು ಯಾವುದಾದರೂ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಭಾರತೀಯ ಅಂಚೆ ಇಲಾಖೆಯ ಹೆಚ್ಚುವರಿ ಮಹಾನಿರ್ದೇಶಕರು ಹಾಗೂ ಕೇಂದ್ರ ಅಂಚೆ ಇಲಾಖೆ ಅಂಚೆ ಸೇವಾ ಮಂಡಳಿ ಸದಸ್ಯರೂ ಆದ ಆಶಿಶ್ ಕುಮಾರ್ ಮಾತನಾಡಿ, ಕ್ರೀಡಾಪಟುಗಳು ಉತ್ಸಾಹದಿಂದ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು. ಜೊತೆಗೆ ಕರ್ನಾಟಕ ಅಂಚೆ ಇಲಾಖೆ ವತಿಯಿಂದ ಉತ್ತಮ ರೀತಿಯಲ್ಲಿ ಪಂದ್ಯಾವಳಿ ಆಯೋಜನೆಗೊಳ್ಳುವ ಮೂಲಕ ಯಶಸ್ವಿಯಾಗಿ 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ ಮುಕ್ತಾಯ ಕಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಮಾತನಾಡಿ, ಪ್ರತಿಯೊಬ್ಬರ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಕ್ರೀಡಾ ಚಟುವಟಿಕೆಗಳು ಸಹಕಾರಿ. ಬ್ಯಾಡ್ಮಿಂಟನ್ ಎಲ್ಲರೂ ಆಡುವಂತಹ ಆಟವಾಗಿದ್ದು, ಈ ಆಟದ ನಿಯಮಗಳನ್ನು ಎಲ್ಲರೂ ಜೀವನಕ್ಕೆ ಅಳವಡಿಸಿಕೊಂಡಲ್ಲಿ ಬದುಕು ಉತ್ತಮಗೊಳ್ಳಲಿದೆ ಎಂದು ಹೇಳಿದರು.

ಸ್ಥಳೀಯ ಕ್ರೀಡೆಯಾದ ಬ್ಯಾಡ್ಮಿಂಟನ್ ಮತ್ತು ಬಾಲ್ ಬ್ಯಾಡ್ಮಿಂಟನ್‌ಗೆ ಹೆಚ್ಚು ಮನ್ನಣೆ ದೊರೆಯಬೇಕು. 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ ಕ್ರೀಡಾ ಸ್ಪೂರ್ತಿಯಿಂದ ಯಶಸ್ವಿಯಾಗಿ ನಡೆದಿದ್ದು, ಅತ್ಯಂತ ಸಂತಸ ಉಂಟಾಗಿದೆ. ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ ಮತ್ತು ಪಂದ್ಯಾವಳಿಯ ಯಶಸ್ಸಿಗೆ ಕಾರಣರಾದ ಪ್ರತಿಯೊಬ್ಬರಿಗೆ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.

ಉತ್ತರ ಕರ್ನಾಟಕ ಅಂಚೆ ವಲಯದ ಪೋಸ್ಟ್‌ಮಾಸ್ಟರ್ ಜನರಲ್ ಸುಶೀಲ್ ಕುಮಾರ್, ಬೆಂಗಳೂರು ಹೆಚ್‌ಕ್ಯೂ ವಲಯದ ಪೋಸ್ಟ್‌ಮಾಸ್ಟರ್ ಜನರಲ್ ಎಲ್.ಕೆ.ದಾಸ್, ದಕ್ಷಿಣ ಕರ್ನಾಟಕ ಅಂಚೆ ವಲಯದ ಪೋಸ್ಟ್‌ಮಾಸ್ಟರ್ ಜನರಲ್ ಡಾ.ಚಂದ್ರಶೇಖರ್ ಕಾಕುಮನು, ದಕ್ಷಿಣ ಕರ್ನಾಟಕ ಅಂಚೆ ವಲಯದ ನಿರ್ದೇಶಕ ಸಂದೇಶ್ ಮಹದೇವಪ್ಪ, ಜಿಲ್ಲಾ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ ನಾಯಕ್ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಫೈನಲ್‌ನಲ್ಲಿ ಸೋಲು–ಗೆಲುವು

ನ.10ರಿಂದ 14ರವರೆಗೆ 5 ದಿನಗಳ ಕಾಲ ನಡೆದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ದೇಶದ 20 ಪೋಸ್ಟಲ್ ಸರ್ಕಲ್‌ಗಳ 194 ಪಟುಗಳು ಭಾಗವಹಿಸಿದ್ದರು. ವಿವಿಧ 7 ವಿಭಾಗಗಳಲ್ಲಿ ಪಂದ್ಯಗಳು ನಡೆದವು. ಫೈನಲ್ ಪಂದ್ಯಗಳಲ್ಲಿ ಜಯ ಸಾಧಿಸಿದ ಪಟುಗಳ ವಿವರ ಇಂತಿದೆ, ಪುರುಷರ ಸಿಂಗಲ್ಸ್‌ನಲ್ಲಿ ಉತ್ತರಪ್ರದೇಶದ ಅಮಿತ್ ಶರ್ಮ ವಿರುದ್ಧ ಹಿಮಾಚಲಪ್ರದೇಶದ ಅಜಯ್ ಕೈತ್ ಜಯ ಗಳಿಸಿದರು.

ಅಂತೆಯೇ ಮಹಿಳೆಯರ ಸಿಂಗಲ್ಸ್‌ನಲ್ಲಿ ಗುಜರಾತ್‌ನ ವೈಶಾಲಿ ಎಫ್ ಬರಿಯಾ ವಿರುದ್ಧ ಪಶ್ಚಿಮ ಬಂಗಾಲದ ಅನುರಿಯಾ ದಾಸ್ ಜಯ ಸಾಧಿಸಿದರು. ಪುರುಷರ ಡಬಲ್ಸ್‌ನಲ್ಲಿ ತಮಿಳುನಾಡಿನ ಈ.ಯುವರಾಜ್ ಮತ್ತು ಎಸ್.ಸುಬ್ರಮಣ್ಯ ಜೋಡಿ ವಿರುದ್ಧ ದೆಹಲಿಯ ಶುಭಂ ಯಾದವ್ ಮತ್ತು ಒಡಿಸ್ಸಾದ ಸ್ವಾದಿನ್‌ಗೌಂಡ ಜೋಡಿ ಗೆಲುವು ಸಾಧಿಸಿತು. ಅದೇ ರೀತಿಯಲ್ಲಿ ಮಹಿಳೆಯರ ಡಬಲ್ಸ್‌ನಲ್ಲಿ ಪಶ್ಚಿಮಬಂಗಾಳದ ಅನುರಿಯಾ ದಾಸ್ ಮತ್ತು ಹಿಮಾಚಲಪ್ರದೇಶದ ಭಾವಿ ಠಾಕೂರ್ ಜೋಡಿ ವಿರುದ್ಧ ದೆಹಲಿಯ ಮಯೂರಿ ಯಾದವ್ ಮತ್ತು ಕರ್ನಾಟಕದ ಆರ್.ಲೀಲಾ ಲಕ್ಷ್ಮೀ ಜೋಡಿ ಜಯ ಸಾಧಿಸಿತು.

ಅದೇ ರೀತಿ ಮಿಶ್ರ ಡಬಲ್ಸ್‌ನಲ್ಲಿ ಮಧ್ಯಪ್ರದೇಶದ ಪರಮೇಶ್ ಪಟಿದಾರ್ ಮತ್ತು ಕರ್ನಾಟಕದ ಆರ್.ಲೀಲಾ ಲಕ್ಷ್ಮೀ ಜೋಡಿ ವಿರುದ್ಧ ಶುಭಂ ಯಾದವ್ ಮತ್ತು ದೆಹಲಿಯ ಮಯೂರಿ ಯಾದವ್ ಜೋಡಿ ಗೆಲುವು ದಾಲಿಸಿತು. 45 ವರ್ಷ ಮೇಲ್ಪಟ್ಟವರ ಸಿಂಗಲ್ಸ್‌ನಲ್ಲಿ ಹಿಮಾಚಲಪ್ರದೇಶದ ವಿಕಾಸ್ ಸೂದ್ ವಿರುದ್ಧ ಮಧ್ಯಪ್ರದೇಶದ ಕುನಾಲ್ ಮಕ್ವಾನ ಗೆಲುವು ಸಾಧಿಸಿದರೆ, 45 ವರ್ಷ ಮೇಲ್ಪಟ್ಟವರ ಡಬಲ್ಸ್‌ನಲ್ಲಿ ಒಡಿಸ್ಸಾದ ಹಿಮಾಂಶು ಭೂಷಣ್ ಪರಿದಾ ಮತ್ತು ಕೇರಳದ ಜೋಮನ್ ಜಾರ್ಜ್ ಜೋಡಿ ವಿರುದ್ಧ ಮಹಾರಾಷ್ಟ್ರದ ಪರಾಗ್ ಏಕಂಡೆ ಮತ್ತು ಹಿಮಾಚಲಪ್ರದೇಶದ ವಿಕಾಸ್ ಸೂದ್ ಜೋಡಿ ಗೆಲುವು ಸಾಧಿಸಿತು.

ಎಂಆರ್‌ಸಿ ಅಧ್ಯಕ್ಷರಾಗಿ ಕೆ.ಎನ್.ಸುರೇಶ್ ಕುಮಾರ್ ಅವಿರೋಧ ಆಯ್ಕೆ



ಕೆ.ಎನ್. ಸುರೇಶ್ ಕುಮಾರ್



ಕಾರಿಯಪ್ಪ



ಬಾಲಕೃಷ್ಣ



ಜಿ.ವೆಂಕಟೇಶ್



ಅಜಿತ್ ಕುಮಾರ್



ಜಯರಾಜ್

ಮೈಸೂರು, ನ.14–ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಅಧ್ಯಕ್ಷರು ಹಾಗೂ ಹಿರಿಯ ಸ್ಟೀವರ್ಡ್ಸ್ ಆಗಿ ಕೆ.ಎನ್. ಸುರೇಶ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ಜೊತೆಗೆ ಸ್ಟೀವರ್ಡ್‌ಗಳಾಗಿ ಬಿ.ಎನ್.ಕಾರಿಯಪ್ಪ(119 ಮತ), ಕೆ.ಟಿ.ಬಾಲಕೃಷ್ಣ ಐಎಎಸ್(102), ಜಿ.ವೆಂಕಟೇಶ್(72) ಹಾಗೂ ಸಮಿತಿ ಸದಸ್ಯರಾಗಿ ಡಾ. ಎಎಸ್.ಅಜಿತ್ ಕುಮಾರ್ ರಾಜ್ ಅರಸ್ (88 ಮತ), ಜಯರಾಜ್ ಅರಸ್(83) ಆಯ್ಕೆಯಾಗಿದ್ದಾರೆ. ಸ್ಟೀವರ್ಡ್ ಮೂರು ಸ್ಥಾನಕ್ಕೆ ಆರು ಮಂದಿ ಹಾಗೂ ಸಮಿತಿ ಸದಸ್ಯ 2 ಸ್ಥಾನಕ್ಕೆ ನಾಲ್ವರು ಕಣದಲ್ಲಿದ್ದರು.

ಸೇವಾ ನ್ಯೂನತೆ; ಮೈಸೂರಿನ 'ಟ್ರಾವೆಲ್ ಕಂಫರ್ಟ್ಸ್'ಗೆ ದಂಡ ಮೈಸೂರು ಜಿಲ್ಲಾ ಗ್ರಾಹಕರ ಆಯೋಗ ಆದೇಶ

ಮೈಸೂರು, ನ. 14– ಪ್ರವಾಸಕ್ಕೆಂದು ಕರೆದುಕೊಂಡು ಹೋಗಿ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸದೆ ಸೇವಾ ನ್ಯೂನತೆ ಎಸಗಿದ ಮೈಸೂರಿನ ಗೋಕುಲಂನಲ್ಲಿರುವ 'ಟ್ರಾವೆಲ್ ಕಂಫರ್ಟ್ಸ್' ಮಾಲೀಕರಿಗೆ ಮೈಸೂರು ಜಿಲ್ಲಾ ಗ್ರಾಹಕರ ಆಯೋಗವು ದಂಡ ವಿಧಿಸಿ ಆದೇಶಿಸಿದೆ.

ಪ್ಯಾಕೇಜ್ ಟೂರ್ ಸೌಲಭ್ಯದಡಿಯಲ್ಲಿ ವಿಜಯನಗರದ ನಿವಾಸಿ ಶ್ರೇಯಸ್ ಚಂದ್ರಶೇಖರ್ ಎಂಬುವವರು ಗೋಕುಲಂನ ಟ್ರಾವೆಲ್ ಕಂಪರ್ಟ್ಸ್‌ನ ಮಾಲೀಕ ಕಿರಣ್ ಶೆಟ್ಟಿ ಎಂಬ ಟ್ರಾವೆಲ್ ಏಜೆಂಟ್ ಮೂಲಕ ಪ್ರವಾಸ ಕೈಗೊಂಡಿದ್ದರು. ಪ್ರವಾಸದ ವೇಳೆ ಟ್ರಾವೆಲ್ ಕಂಫರ್ಟ್ಸ್ ಏಜೆಂಟ್ ಸೂಕ್ತ ಸೌಲಭ್ಯ ಒದಗಿಸದೆ ಸೇವಾ ನ್ಯೂನತೆ ಎಸಗಿದುದರಿಂದ ದಂಪತಿ ಮಾನಸಿಕ ಹಿಂಸೆ ಅನುಭವಿಸಬೇಕಾಯಿತೆಂದು ಆಪಾದಿಸಿ, ತಮಗೆ ಬರಬೇಕಾದ ಬಾಕಿ ರೂ 2,53,000 ಹಾಗೂ ಚಿಕಿತ್ಸೆಯ ವೆಚ್ಚ ರೂ 25,612 ಮತ್ತು 2 ಲಕ್ಷ ರೂ. ನಷ್ಟ ಪರಿಹಾರ ದೊರಕಿಸಿಕೊಡ ಬೇಕೆಂದು ಟ್ರಾವೆಲ್ ಕಂಪರ್ಟ್ಸ್ ಮಾಲೀಕ ಕಿರಣ್ ಶೆಟ್ಟಿ ವಿರುದ್ಧ ಶ್ರೇಯಸ್ ಚಂದ್ರಶೇಖರ್ ಅವರು ಮೈಸೂರು ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ನೀಡಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರು ಜಿಲ್ಲಾ ಗ್ರಾಹಕರ ಆಯೋಗವು ಶ್ರೇಯಸ್ ಸಲ್ಲಿಸಿದ್ದ ದೂರನ್ನು ಪರಿಗಣಿಸಿ ದೂರುದಾರರಿಗೆ ರೂ.1,29,000 ಬಡ್ಡಿ ಯೊಡನೆ ಮರುಪಾವತಿ ಮಾಡಬೇಕೆಂದು ಅದರೊಡನೆ ಪರಿಹಾರದ ಮೊತ್ತ ರೂ.50,000ಗಳನ್ನು ಮತ್ತು ವ್ಯಾಜ್ಯದ ವೆಚ್ಚದ ಬಾಬು ರೂ.10,000ಗಳನ್ನು ಪಾವತಿ ಮಾಡಬೇಕೆಂದು ಟ್ರಾವೆಲ್ ಕಂಫರ್ಟ್ಸ್ ಮಾಲೀಕ ಕಿರಣ್ ಶೆಟ್ಟಿಯವರಿಗೆ ನಿರ್ದೇಶಿಸಿ ಆದೇಶ ಹೊರಡಿಸಿದೆ. ದೂರುದಾರರ ಪರ ವಕೀಲ ಕೆ.ಸಿ.ರವೀಂದ್ರ ವಾದಿಸಿದ್ದರು.

ಮೈಸೂರು ಜಿಲ್ಲಾ ನ್ಯಾಯಾಧೀಶರಾಗಿದ್ದ ರವೀಂದ್ರ ಹೆಗಡೆಯವರಿಗೆ ವಕೀಲರ ಆತ್ಮೀಯ ಬೀಳ್ಕೊಡುಗೆ



ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ರವೀಂದ್ರ ಹೆಗಡೆ ಅವರು ಹೈಕೋರ್ಟ್ ರಿಜಿಸ್ಟ್ರಾರ್(ವಿಜಿಲೆನ್ಸ್) ಆಗಿ ವರ್ಗಾವಣೆಗೊಂಡಿರುವ ಹಿನ್ನೆಲೆಯಲ್ಲಿ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮೈಸೂರು, ನ14(ಎಸ್‌ಬಿಡಿ)– ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ, ಹೈಕೋರ್ಟ್ ರಿಜಿಸ್ಟ್ರಾರ್(ವಿಜಿಲೆನ್ಸ್) ಆಗಿ ವರ್ಗಾವಣೆಗೊಂಡಿರುವ ರವೀಂದ್ರ ಹೆಗಡೆ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಸಂಘದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಿಗೆ ಮೈಸೂರು ಪೇಟ ತೊಡಿಸಿ, ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯ ಸ್ಮರಣಿಕೆ ನೀಡಿ, ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ನ್ಯಾಯಾಧೀಶರಾದ ರವೀಂದ್ರ ಹೆಗಡೆ, ಮೈಸೂರು ನ್ಯಾಯಾಲಯದಲ್ಲಿ ಕಾರ್ಯ ನಿರ್ವಹಿಸಿರುವುದು ಒಂದು ಹೆಮ್ಮೆಯ ಸಂಗತಿ. ಇಲ್ಲಿನ ವಕೀಲರು ಮತ್ತು ನ್ಯಾಯಾಲಯದ ಸಿಬ್ಬಂದಿಯ ಉತ್ತಮ ಸಹಕಾರವನ್ನು ಮರೆಯಲಾಗದು. ಎಲ್ಲರ ಸಹಕಾರದಿಂದಲೇ ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಯಿತು. ಕ್ಯಾಂಟೀನ್ ಸೌಲಭ್ಯ ಮತ್ತು ಮೂಲಸೌಕರ್ಯಗಳ ಉನ್ನತೀಕರಣ ನಿಮ್ಮೆಲ್ಲರ ಸಹಕಾರದಿಂದಲೇ ಆಗಿದ್ದು. ಎಲ್ಲರಿಗೂ ಹೃದಯಪೂರ್ವಕ ಧನ್ಯವಾದ ಅರ್ಪಿಸುತ್ತೇನೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಡಿ.ಪುಟ್ಟಸ್ವಾಮಿ, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಕಾರ್ಯದರ್ಶಿ ಎ.ಜಿ. ಸುಧೀರ್ ಸೇರಿದಂತೆ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣದ ಮದರಸಾ ತೆರವಿಗೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿ

ಹೈಕೋರ್ಟ್‌ಗೆ ಕೇಂದ್ರ ಮನವಿ

ಬೆಂಗಳೂರು: ಶ್ರೀರಂಗಪಟ್ಟಣದ ಐತಿಹಾಸಿಕ ಜಾಮಾ ಮಸೀದಿ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮದರಸಾವನ್ನು ತೆರವುಗೊಳಿಸುವಂತೆ ಮಂಡ್ಯ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೇಂದ್ರ ಸರ್ಕಾರ ಕರ್ನಾಟಕ ಹೈಕೋರ್ಟ್‌ಗೆ ಮನವಿ ಮಾಡಿದೆ.

ವಕ್ಫ್ ಬೋರ್ಡ್ ಈ ಕ್ರಮವನ್ನು ವಿರೋಧಿಸಿದ್ದು, ಮಸೀದಿಯನ್ನು ತನ್ನ ಆಸ್ತಿ ಎಂದು ಹೇಳಿಕೊಂಡಿದೆ ಮತ್ತು ಅಲ್ಲಿ ಮದರಸಾ ನಡೆಸುವ ಹಕ್ಕನ್ನು ಸಮರ್ಥಿಸಿಕೊಂಡಿದೆ.

ಕನಕಪುರ ತಾಲೂಕಿನ ಕಬ್ಬಾಳು ಗ್ರಾಮದ ಅಭಿಷೇಕ್‌ಗೌಡ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್ ವಿ ಅಂಜಾರಿಯಾ ಅವರಿದ್ದ ವಿಭಾಗೀಯ ಪೀಠ ಈ ಪ್ರಕರಣದ ವಿಚಾರಣೆ ನಡೆಸಿತು.

ಮಸೀದಿಯೊಳಗೆ ಅನಧಿಕೃತ ಮದರಸಾ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

1951 ರಲ್ಲಿ ಜಾಮಾ ಮಸೀದಿಯನ್ನು ಸಂರಕ್ಷಿತ ಸ್ಮಾರಕವಾಗಿ ಘೋಷಿಸಲಾಯಿತು. ಆದರೂ ಅನಧಿಕೃತ ಮದರಸಾ ಚಟುವಟಿಕೆಗಳು ಅಲ್ಲಿ ಮುಂದುವರೆದಿವೆ ಎಂದು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುತ್ತಿರುವ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ ಅರವಿಂದ್ ಕಾಮತ್ ವಾದಿಸಿದರು.

ಕಾಮತ್ ಅವರು, ಮಸೀದಿಯಿಂದ ಮದರಸಾವನ್ನು ತೆರವುಗೊಳಿಸುವಂತೆ ಮಂಡ್ಯ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಬೇಕು ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಪ್ರತಿವಾದದಲ್ಲಿ, ರಾಜ್ಯ ಸರ್ಕಾರ ಮತ್ತು ವಕ್ಫ್ ಮಂಡಳಿಯ ವಕೀಲರು ಈ ಮನವಿಯನ್ನು ವಿರೋಧಿಸಿದರು. ವಕ್ಫ್ ಬೋರ್ಡ್ 1963 ರಿಂದ ಈ ಆಸ್ತಿಯ ಮಾಲೀಕ ಎಂದು ಗುರುತಿಸಲಾಗಿದೆ ಮತ್ತು ಆದ್ದರಿಂದ ಅಲ್ಲಿ ಮದರಸಾ ಚಟುವಟಿಕೆಗಳನ್ನು ನಡೆಸುವುದು ಕಾನೂನು ಬದ್ಧವಾಗಿದೆ ಎಂದು ಹೇಳಿದರು.

ಎರಡೂ ಕಡೆಯ ವಾದ ಆಲಿಸಿದ ನ್ಯಾಯಮೂರ್ತಿ ಎನ್ ವಿ ಅಂಜಾರಿಯಾ ಅವರು, ವಿಚಾರಣೆಯನ್ನು ನವೆಂಬರ್ 20ಕ್ಕೆ ಮುಂದೂಡಿದ್ದಾರೆ.

ಕೊರೊನಾ ವೇಳೆ ಭಾರತದ ನೆರವು

ಪ್ರಧಾನಿ ಮೋದಿಗೆ ತನ್ನ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿ ಘೋಷಿಸಿದ ಡೊಮಿನಿಕಾ

ಡೊಮಿನಿಕಾ: ಕೋವಿಡ್ –19 ಸಾಂಕ್ರಾಮಿಕ ಸಮಯದಲ್ಲಿ ತಮ್ಮ ದೇಶಕ್ಕೆ ಸಹಾಯ ಮಾಡಿದ್ದಕ್ಕಾಗಿ ಮತ್ತು ಉಭಯ ದೇಶಗಳ ನಡುವಿನ ಸಂಬಂಧ ವನ್ನು ಬಲಪಡಿಸಲು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಗೌರವಿಸಲು ಡೊಮಿನಿಕಾ ಸರ್ಕಾರ ನಿರ್ಧರಿಸಿದೆ.




ಇದಕ್ಕಾಗಿ ಡೊಮಿನಿಕಾದ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿ ಯಾದ 'ಡೊಮಿನಿಕಾ ಅವಾರ್ಡ್ ಆಫ್ ಆನರ್' ಅನ್ನು ಪ್ರಧಾನಿ ಮೋದಿಯವರಿಗೆ ನೀಡಲಿದೆ.

ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ ಭಾರತ ನೀಡಿದ ಬೆಂಬಲ, ನೆರವಿಗೆ ಕೃತಜ್ಞತೆಯ ಸಂಕೇತವಾಗಿ ಮತ್ತು ಉಭಯ ದೇಶಗಳ ನಡುವೆ ಬೆಳೆಯುತ್ತಿರುವ ಪಾಲುದಾರಿಕೆಯ ಸಂಕೇತವಾಗಿ ಈ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಡೊಮಿನಿಕಾದ ಪ್ರಧಾನ ಮಂತ್ರಿ ಕಚೇರಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

2021ರ ಫೆಬ್ರವರಿಯಲ್ಲಿ COVID-19 ಉತ್ತುಂಗದಲ್ಲಿದ್ದ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತ ಸರ್ಕಾರ ಡೊಮಿನಿಕಾಗೆ 70,000 ಡೋಸ್ ಅಸ್ಟ್ರಾಜೆನೆಕಾ ಲಸಿಕೆಯನ್ನು ಕಳುಹಿಸಿತ್ತು. ಈ ಲಸಿಕೆ ಪೂರೈಕೆಯನ್ನು ಭಾರತದ 'ಲಸಿಕೆ ಮೈತ್ರಿ' ನೀತಿಯ ಅಡಿಯಲ್ಲಿ ಮಾಡಿತ್ತು. ಈ ಮೂಲಕ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಸಹಾಯ ಮಾಡುವ ಗುರಿ ಭಾರತ ಹೊಂದಿತ್ತು.

ಮುಂಬರುವ ಭಾರತ–CARICOM (ಕೆರಿಬಿಯನ್ ಸಮುದಾಯ) ಶೃಂಗಸಭೆಯಲ್ಲಿ ಡೊಮಿನಿಕನ್ ಅಧ್ಯಕ್ಷ ಸಿಲ್ವಾನಿ ಬರ್ಟನ್ ಪ್ರಧಾನಿ ಮೋದಿಯವರಿಗೆ ಗೌರವವನ್ನು ನೀಡಲಿದ್ದಾರೆ. ಈ ಶೃಂಗಸಭೆಯು ಗಯಾನಾದ ಜಾರ್ಜ್‌ಟೌನ್‌ನಲ್ಲಿ ನವೆಂಬರ್ 19 ಮತ್ತು 21ರ ನಡುವೆ ನಡೆಯಲಿದೆ. ಈ ಸಂದರ್ಭದಲ್ಲಿ, ಭಾರತ ಮತ್ತು ಕೆರಿಬಿಯನ್ ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ಪರಿಗಣಿಸಲಾಗುವುದು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಲಾಗೈಡ್‌ನ ಎಚ್.ಎನ್.ವೆಂಕಟೇಶ್ ಅವರಿಗೆ ಸನ್ಮಾನ...



2023–24ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ವಕೀಲರೂ ಆದ ಲಾಗೈಡ್ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕ ಎಚ್.ಎನ್.ವೆಂಕಟೇಶ್ ಅವರಿಗೆ ಅವರ ಹಿತೈಷಿಗಳು ಮೈಸೂರು ಪೇಟ ತೊಡಿಸಿ, ಬೃಹತ್ ಗುಲಾಬಿ ಹಾರ ಹಾಕಿ, ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಜಿ.ಪಂ. ಮಾಜಿ ಅಧ್ಯಕ್ಷ ಎಂ.ಪಿ. ನಾಗರಾಜ್, ಜಿಪಂ ಮಾಜಿ ಸದಸ್ಯರಾದ ಎಂ.ಟಿ.ಕುಮಾರ್, ನಾಗರಾಜ್, ವಕೀಲರಾದ ಸ್ವಾಮಿಗೌಡ, ಲೋಕೇಶ್, ಕಾರ್ತಿಕ್, ವೀಣಾ, ರಾಜೇಶ್, ಹರೀಶ್, ಕುಮಾರ್, ವೆಂಕಟೇಶ್, ಅನಿಲ್‌ಕುಮಾರ್, ಕಣೆಯನಹುಂಡಿ ಪ್ರಸನ್ನ ಉಪಸ್ಥಿತರಿದ್ದರು.

ಮಂಡ್ಯ ಡೈರಿಯಲ್ಲಿ ಕೆಲಸ ಕೊಡಿಸುವುದಾಗಿ ಮೈಸೂರು ಡೈರಿ ನೌಕರನಿಂದ 11.50 ಲಕ್ಷ ವಂಚನೆ

ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ನ.14–ಮೈಸೂರಿನ ಮೆಗಾ ಡೈರಿ ನೌಕರನೋರ್ವ ಅಲ್ಲಿನ ಗುತ್ತಿಗೆ ಆಧಾರದ ನೌಕರನಿಗೆ ಮಂಡ್ಯ ಡೈರಿಯಲ್ಲಿ ವಿಸ್ತರಣಾಧಿಕಾರಿ ಕೆಲಸ ಕೊಡಿಸುವುದಾಗಿ 11.50 ಲಕ್ಷ ರೂ. ವಂಚಿಸಿರುವ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಯರಗನಹಳ್ಳಿ ಪಾಪಣ್ಣ ಲೇಔಟ್ ನಿವಾಸಿ, ಮೆಗಾ ಡೈರಿ ನೌಕರ ಕೆ.ಎಸ್.ಆದರ್ಶ್ ಆರೋಪಕ್ಕೆ ಗುರಿಯಾದವರಾಗಿದ್ದು, ಈತ 2022ರಲ್ಲಿ ಮೆಗಾ ಡೈರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಆರ್.ದೀಕ್ಷಿತ್ ಎಂಬಾತನಿಗೆ ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು ಗೆಜ್ಜಲಗೆರೆಯಲ್ಲಿರುವ ಡೈರಿಯಲ್ಲಿ 40 ರಿಂದ 60 ಸಾವಿರ ರೂ. ವೇತನ ಸಿಗುವ ವಿಸ್ತರಣಾಧಿಕಾರಿ ಕೆಲಸ ಕೊಡಿಸುವುದಾಗಿ ತಿಳಿಸಿದ್ದಾರೆ. ಅಲ್ಲದೇ ತನ್ನ ತಂದೆ ಯೂನಿಯನ್ ಅಧ್ಯಕ್ಷರಾಗಿದ್ದು, ಶಾಸಕರು, ಸಂಸದರು, ಡೈರಿ ನಿರ್ದೇಶಕರು, ವ್ಯವಸ್ಥಾಪಕರು ನನಗೆ ಪರಿಚಯಸ್ಥರಿದ್ದಾರೆ ಹಾಗೂ ಸಂಬಂಧಿಕರೂ ಆಗಿದ್ದು, ಈಗಾಗಲೇ ಹಲವರಿಗೆ ಕೆಲಸ ಕೊಡಿಸಿರುವುದಾಗಿ ನಂಬಿಸಿದ್ದಾರೆ.

ಈತ ಮೈಸೂರು ತಾಲೂಕು ಕೊಪ್ಪಲೂರಿನ ಶ್ರೀ ಸಿದ್ಧಲಿಂಗೇಶ್ವರ ಬಡಾವಣೆಯಲ್ಲಿರುವ ದೀಕ್ಷಿತ್‌ನ ಸಹೋದರಿ ಮನೆಗೆ ತೆರಳಿ, ಕೆಲಸ ಕೊಡಿಸಲು 11.50 ಲಕ್ಷ ರೂ. ಆಗುತ್ತದೆ ಎಂದು ತಿಳಿಸಿ ದೀಕ್ಷಿತ್‌ನ ತಂದೆ ಪಿ.ರಾಮಸ್ವಾಮಿ ಅವರಿಂದ ಮುಂಗಡ ಹಣ ಪಡೆದಿದ್ದಾನೆ.

2023ರ ಸೆ.13ರಂದು ರಾಮಸ್ವಾಮಿಯವರ ವಾಟ್ಸಾಪ್ ನಂಬರ್‌ಗೆ ಮಂಡ್ಯ ಡೈರಿಯಿಂದ ದೀಕ್ಷಿತ್‌ಗೆ ಬಂದಂತೆ ನಕಲಿ ನೇಮಕಾತಿ ಆದೇಶ ಹೊರಡಿಸಿರುವ ಪ್ರತಿಯೊಂದನ್ನು ರವಾನಿಸಿದ್ದಲ್ಲದೇ, ಆದೇಶದ ಮೂಲ ಪ್ರತಿ ನೋಂದಾಯಿತ ಅಂಚೆ ಮೂಲಕ ಮನೆಗೆ ಬರುತ್ತದೆ ಎಂದು ತಿಳಿಸಿ, ಉಳಿದ ಹಣವನ್ನು ಪಡೆದು ಹೋಗಿದ್ದಾನೆ. ಆದರೆ ದೀಕ್ಷಿತ್‌ಗೆ ಯಾವುದೇ ಆದೇಶ ಬಾರದ ಕಾರಣ ಆತ ತನ್ನ ತಂದೆಗೆ ವಾಟ್ಸಾಪ್‌ನಲ್ಲಿ ಬಂದಿದ್ದ ಆದೇಶದ ಪ್ರತಿಯೊಂದಿಗೆ ಮಂಡ್ಯ ಡೇರಿಗೆ ಹೋಗಿ ವಿಚಾರಿಸಿದಾಗ ಅದು ನಕಲಿ ಎಂಬುದು ಗೊತ್ತಾಗಿದೆ.

ಈ ಹಿನ್ನೆಲೆಯಲ್ಲಿ ದೀಕ್ಷಿತ್ ತಂದೆ ರಾಮಸ್ವಾಮಿಯವರು 2024ರ ಫೆ.14ರಂದು ಮೈಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಆದರ್ಶ್‌ನನ್ನು ಕರೆಸಿ ವಿಚಾರಣೆ ಮಾಡಿದಾಗ ಆತ 11.50 ಲಕ್ಷ ರೂ. ಪಡೆದಿರುವುದನ್ನು ಒಪ್ಪಿಕೊಂಡಿದ್ದಲ್ಲದೇ, ತಾನು ಹಣವನ್ನು ವಾಪಸ್ ಕೊಡುವುದಾಗಿಯೂ, ಯಾವುದೇ ಪ್ರಕರಣ ದಾಖಲಿಸಬಾರದೆಂದು ಕೋರಿಕೊಂಡು ರಾಮಸ್ವಾಮಿಯವರಿಗೆ 3 ಚೆಕ್‌ಗಳನ್ನು ನೀಡಿದ್ದಾನೆ. ಹೀಗಾಗಿ ರಾಮಸ್ವಾಮಿ ತಾನು ನೀಡಿದ್ದ ದೂರನ್ನು ಠಾಣೆಯಿಂದ ಹಿಂಪಡೆದಿದ್ದಾರೆ. ಆದರೆ ಆದರ್ಶ್ ನೀಡಿದ್ದ ಚೆಕ್‌ಗಳೆಲ್ಲಾ ಬೌನ್ಸ್ ಆಗಿದ್ದು, ಆತನನ್ನು ಸಂಪರ್ಕಿಸಿ ಹಣ ಕೇಳಿದಾಗ ಕೊಲೆ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಹಿಂದೆ ಪೊಲೀಸ್ ಠಾಣೆಯಲ್ಲಿದ್ದ ದೂರನ್ನು ವಾಪಸ್ ಪಡೆದಿದ್ದ ದೂರನ್ನು ರಾಮಸ್ವಾಮಿಯವರು ಮೈಸೂರಿನ 11ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಆದರ್ಶ್ ವಿರುದ್ಧ ಭಾರತೀಯ ದಂಡ ಸಂಹಿತೆ 406, 420, 465, 504, 506ರಡಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

IN THE COURT OF THE HON'BLE SENIOR CIVIL JUDGE AT VIRAJPET, KODAGU SITTING AT PONNAMPET

O.S. No: 112 OF 2020

PLAINTIFFS: Smt. H.K Shakunthala

V/s

DEFENDANTS P. Babu & Others

COURT NOTICE/SUMMONS TO L. R'S OF DEFENDANT No: 8, LATE SMT. MANJULA

8 (a). Sri. Manish, S/o Late Smt. Manjula and Sri. Prabhakar S. J, Aged 18 years,

8 (b). Sri. Manoj, S/o Late Smt. Manjula and Sri. Prabhakar S. J, Aged 21 years,

Both are R/o Door No: 126/5, Maruthi Tent, 3rd Cross, Janathanagar, Mysore - 570009.

Whereas, the Plaintiff has instituted the above suit against your mother, defendant No: 8 and others. You both are arrayed as Defendants 8 (a) and 8 (b). You are hereby summonsed to appear before this Court in person or by a pleader on 30th day of November 2024 at 11.00 A.M to answer the same failing which the suit / application will be disposed of exparte.

Given under my hand and seal of the court, this 12th day of November 2024.

By Order of the Court
Senior Ministerial Officer
Court of the Senior Civil Judge at Virajpet.

Sd/- A. B. Kalaiah
Advocate for Plaintiff
Virajpet/Ponnampet.
Ponnampet
Dt: 12-11-2024

ನಕ್ಕರೆ ಅದೇ ಸ್ವರ್ಗ

ಅಜ್ಜಿ : ಮಗುವೇಕೆ ಅಳುತ್ತಿದೆ? ಅದಕ್ಕೆ ಬೇಕಾದುದನ್ನು ಕೊಡಬಾರದೆ?
ಅಮ್ಮ : ಅದು ಕೇಳಿದ್ದನ್ನು ಕೊಟ್ಟಿದ್ದಕ್ಕೆ ಅಳುತ್ತಿರುವುದು.
ಅಜ್ಜಿ : ಏನದು!?
ಅಮ್ಮ : ಮೆಣಸಿನಕಾಯಿ

ಮೈಸೂರು ಮಿತ್ರ

ಶುಕ್ರವಾರ, 15 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕನ್ನಡಕ್ಕಾಗಿ ಕೈ ಎತ್ತು. ಅದು ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು, ಅದು ಪಾಂಚಜನ್ಯವಾಗುತ್ತದೆ. ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು. ಅದೇ ಗೋವರ್ಧನಗಿರಿಯಾಗುತ್ತದೆ. –ರಾಷ್ಟ್ರಕವಿ ಕುವೆಂಪು

ವೇದ ಸುಳ್ಳಾದರೂ { ನಿನ್ನಲ್ಲಿರುವ ಮಾನ
ಗಾದೆ ಸುಳ್ಳಾಗದು { ನಿನಗೆ ಕೊಡುವುದು ಬಹುಮಾನ.

ನಿಮ್ಮ ಪತ್ರಗಳು

■ ಬನ್ನಿಮಂಟಪದಲ್ಲಿ ಸಬ್ ಅರ್ಬನ್ ಬಸ್ ನಿಲ್ದಾಣಕ್ಕೆ ಜಾಗ ಸಾಕಾಗುವುದಿಲ್ಲ

ಮಾನ್ಯರೆ,

ಮೈಸೂರು ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಸಬ್ ಅರ್ಬನ್ ಬಸ್ ನಿಲ್ದಾಣ ಸ್ಥಳಾಂತರಿಸುವ ಬಗ್ಗೆ ಚರ್ಚೆ ನಡೆಸಿದರು ಎಂದು 'ಮೈಸೂರು ಮಿತ್ರ' ವರದಿ ಮಾಡಿದೆ. ಶ್ರೀನಿವಾಸ ಅವರು ಐಷಾರಾಮಿ ಕಾರಿನಲ್ಲಿ ಓಡಾಡುವ ತಜ್ಞರ ಜೊತೆ ಚರ್ಚೆ ಮಾಡುವ ಬದಲು ಪ್ರತಿದಿನ ಬಸ್ ಸೇವೆಯನ್ನು ಪಡೆಯುವ ಪ್ರಯಾಣಿಕ ನಾಗರಿಕರು, ಅಲ್ಲಿ ಪ್ರಯಾಣಿಕರನ್ನು ಸಾಗಾಟ ಮಾಡುವ ಆಟೋ ಸೇವಾದಾರರನ್ನು ಮತ್ತು ಬಸ್ ನಿಲ್ದಾಣದಲ್ಲಿ ಸ್ಕೂಟರ್ ಪಾರ್ಕ್ ಮಾಡಲು ಹೆಣಗಾಡುವ ಪ್ರಯಾಣಿಕರ ಜೊತೆ ಚರ್ಚಿಸಬೇಕಾಗಿ ಕೋರುತ್ತೇನೆ. ಒಬ್ಬ ಪ್ರಯಾಣಿಕನಾಗಿ ಮತ್ತು ಮೈಸೂರಿನ ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುವ ನಾಗರಿಕನಾಗಿ ನನ್ನ ಕೆಲವೊಂದು ಸಲಹೆಗಳು. ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣ ಖಂಡಿತ ಅಲ್ಲಿಂದ ಸ್ಥಳಾಂತರಿಸಬೇಕು. ಪ್ರತೀದಿನ ಮೈಸೂರಿನ 30–40 ಸಾವಿರ ಜನ ಬಸ್ಸಿನಲ್ಲಿ ಹೊರ ಊರಿಗೆ ಹೋಗುವುದು ಬರುವುದು ಇದ್ದೇ ಇರುತ್ತದೆ. ಅವರೆಲ್ಲಾ ಮೈಸೂರಿನ ಪ್ರವಾಸಿ ತಾಣಗಳಾದ ಅರಮನೆ, ಮೃಗಾಲಯ, ಜಗನ್ಮೋಹನ ಅರಮನೆ ಹೀಗೆ ಪ್ರವಾಸಿಗರು ಸುತ್ತಾಡುವ ಸ್ಥಳಕ್ಕೆ ಬರುತ್ತಾರೆ. ಸರಿಸುಮಾರು 10 ಸಾವಿರ ಆಟೋ ಟ್ರಿಪ್, ಬಸ್, ಕಾರು ಇವೆಲ್ಲವೂ ಹೊರ ಊರಿಗೆ ಹೋಗುವ ಪ್ರಯಾಣಿಕರನ್ನು ಹೊತ್ತು ತರುವುದರಿಂದ ಸಬ್ ಅರ್ಬನ್ ಬಸ್ ನಿಲ್ದಾಣದ ಸುತ್ತಾ ಪ್ರಯಾಣಿಕರ ಒತ್ತಡ ಇರುತ್ತದೆ. ನಾವು ಬಸ್ ನಿಲ್ದಾಣ ಬೇರೆ ಕಡೆ ಇದ್ದರೆ ಅಲ್ಲಿಗೆ ಹೋಗುತ್ತೇವೆ. ಆಗ ಪ್ರವಾಸಿ ತಾಣಗಳನ್ನು ಪ್ರವಾಸಿಗರು ಆರಾಮವಾಗಿ ನೋಡಬಹುದು.

ಬನ್ನಿಮಂಟಪದಲ್ಲಿ ಬಸ್ ನಿಲ್ದಾಣಕ್ಕೆ ಜಾಗ ಸಾಲುವುದಿಲ್ಲ. ಮುಂದಿನ 30 ವರ್ಷದ ಜನಸಂಖ್ಯೆಯನ್ನು ಗುರಿಯಾಗಿಟ್ಟುಕೊಂಡು 60 ರಿಂದ 80 ಎಕರೆ ಜಾಗ ಗುರುತಿಸಿ ನಗರ ಬಸ್ ನಿಲ್ದಾಣ, ಸಬ್ ಅರ್ಬನ್ ಬಸ್ ನಿಲ್ದಾಣ, ಕಾರು, ಸ್ಕೂಟರ್ ಪಾರ್ಕಿಂಗ್ ವ್ಯವಸ್ಥೆ, ಮುಂದೆ ಮೆಟ್ರೋ ಲೈನ್ ಎಲ್ಲವನ್ನೂ ದೃಷ್ಟಿಯಲ್ಲಿ ಇಟ್ಟುಕೊಂಡು ಬಸ್ ನಿಲ್ದಾಣ ಕಟ್ಟುವುದು ಸೂಕ್ತ. ರಿಂಗ್ ರಸ್ತೆಯಲ್ಲಿ ಸೂಕ್ತ ಸ್ಥಳವನ್ನು ಗುರುತಿಸಿ ಬಸ್ ನಿಲ್ದಾಣ ಕಟ್ಟಿದರೆ ಪ್ರಯಾಣಿಕರು ಆ ಕಡೆ ಹೋದರೆ ಪ್ರವಾಸಿ ತಾಣಗಳ ಬಳಿ ಒತ್ತಡ ಕಡಿಮೆಯಾಗುತ್ತದೆ. ಈಗಿರುವ ಸಬ್ ಅರ್ಬನ್ ಬಸ್ ನಿಲ್ದಾಣವನ್ನು ಸಿಟಿ ಬಸ್ ನಿಲ್ದಾಣವಾಗಿ ಮಾಡಬಹುದು. **–ಅರಕೆರೆ ದೇವರಾಜು, ಮೈಸೂರು.**

■ ನಾಟಕದ ಟಿಕೆಟ್ ಕೂಡ ಸೋಲ್ಡ್ ಔಟ್! ಇದು ಕೂಡ ಸತ್ಯವೇ!

ಮಾನ್ಯರೆ,

ಅಡ್ಡಂಡ ಸಿ.ಕಾರ್ಯಪ್ಪ ರಚಿಸಿ, ನಿರ್ದೇಶಿಸಿರುವ 'ಸತ್ಯವನ್ನೇ ಹೇಳುತ್ತೇನೆ' ಎಂಬ ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ನ.11 ರಿಂದ 13 ರವರೆಗೆ ಪ್ರದರ್ಶಿತವಾಗಿದ್ದು, ಹಿಂದೆ ನಡೆದ 5 ಪ್ರದರ್ಶನಗಳು ಕೂಡ ಹೌಸ್ ಫುಲ್ ಆಗಿದ್ದವು ಎಂದು ವರದಿಯಾಗಿದೆ. ಪ್ರಸ್ತುತ ನಾಟಕದ ಬಗ್ಗೆ ಕೆಬಿಜಿಯವರು 'ಮೈಸೂರು ಮಿತ್ರ' ಪತ್ರಿಕೆಯ ಭೂಮಂತ್ರ ಅಂಕಣದಲ್ಲಿ ಬರೆದಿದ್ದ ವಿಮರ್ಶೆಯನ್ನು ಓದಿ, ನಾಟಕ ನೋಡಬೇಕು ಎಂದು ಟಿಕೆಟ್‌ಗಾಗಿ ಪತ್ರಿಕೆಯಲ್ಲಿ ಇದ್ದ ನಂಬರ್‌ಗೆ ದಿನಾಂಕ 12.11.24 ರಂದು 3.45 ಗಂಟೆಯಲ್ಲಿ ಕರೆ ಮಾಡಿದೆ. ಆಶ್ಚರ್ಯ, ಕರೆ ಸ್ವೀಕರಿಸಿದವರು (ಬಹುಶಃ ಅಡ್ಡಂಡ ಸಿ.ಕಾರ್ಯಪ್ಪನವರೇ ಇರಬೇಕು)ಏನು ಎಂದರು. ನಾನು, ಸರ್ ನಾಟಕದ ಟಿಕೆಟ್ ಬೇಕಿತ್ತು ಎಂದೆ. ಅವರು, ಇಲ್ಲ ಟಿಕೆಟ್ ಸೋಲ್ಡ್‌ಔಟ್ ಎಂದರು. ನಾನು, ಸರ್ ನಾಳೆ ಪ್ರದರ್ಶನದ ಟಿಕೆಟ್ ಆದರೂ ಕೊಡಿ ಎಂದೆ. ಅವರು, ಇಲ್ಲ ಅದೂ ಕೂಡ ಮುಗಿದಿದೆ. ಮತ್ತೊಮ್ಮೆ ಪ್ರದರ್ಶನದ ಏರ್ಪಾಡು ಮಾಡುತ್ತೇವೆ ಆಗ ನೋಡಿ ಎಂದರು. ಹೌದಲ್ಲ ನಾಟಕದ ಟಿಕೆಟ್ ಕೂಡ ಸೋಲ್ಡ್‌ಔಟ್ ಆಗುತ್ತದೆ ಸತ್ಯ!! ಎಂದರೆ 'ಸತ್ಯ' ಈಗ ಜನರಿಗೆ ಗೊತ್ತಾಗುತ್ತಿದೆ. ನಾಟಕ ಸತ್ಯವನ್ನೇ ಹೇಳುತ್ತಿದೆ. ಎನ್ನುವುದು!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ನಾಗೇಂದ್ರಗೆ ಮತ್ತೆ ಸಚಿವ ಸ್ಥಾನ ನೀಡಲು ಸಿಎಂ ಉತ್ಸುಕ: ರಾಜಕೀಯ ವ್ಯವಸ್ಥೆ ಎತ್ತ ಸಾಗುತ್ತಿದೆ

ಮಾನ್ಯರೆ,

ವಾಲ್ಮೀಕಿ ನಿಗಮದ ಹಗರಣದಲ್ಲಿ ಪ್ರಮುಖ ಆರೋಪಿಯಾಗಿ ಸೆರೆವಾಸ ಅನುಭವಿಸಿ ಜಾಮೀನಿನ ಮೇಲೆ ಹೊರಬಂದಿರುವ ಮಾಜಿ ಸಚಿವ ಬಿ. ನಾಗೇಂದ್ರ ಅವರಿಗೆ ಮತ್ತೆ ಸಚಿವ ಸ್ಥಾನ ದಯಪಾಲಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸುಳಿವು ಕೊಟ್ಟಿದ್ದಾರೆ. ಆದರೆ ಇದು ಎಷ್ಟರ ಮಟ್ಟಿಗೆ ಸೂಕ್ತ ಎಂಬುದು ಇಲ್ಲಿ ಪ್ರಶ್ನೆಯಾಗಿದೆ.

ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಾಂತರ ರೂಪಾಯಿ ಹಣ ದುರುಪಯೋಗದ ಬಗ್ಗೆ ನಡೆಯುತ್ತಿರುವ ಇ.ಡಿ ತನಿಖೆಯಲ್ಲಿ ನಾಗೇಂದ್ರ ಅವರ ಹೆಸರು ಪ್ರಮುಖವಾಗಿ ಕೇಳಿಬಂದಿದ್ದು ಅವರ ವಿಚಾರಣೆ ನಡೆಸಿ ಬಂಧಿಸಲಾಗಿತ್ತು. ನಂತರ ಜಾಮೀನಿನ ಮೇಲೆ ಬಿಡುಗಡೆ ಆದ ಅವರಿಗೆ ಅದ್ಧೂರಿ ಸ್ವಾಗತದ ಮೂಲಕ ಬರಮಾಡಿಕೊಳ್ಳಲಾಗಿತ್ತು. ಓರ್ವ ಪ್ರಭಾವಿ ಆರೋಪಿ ಜೈಲಿನಿಂದ ಹೊರಬಂದಾಗ ಅವರನ್ನು ಸ್ವಾತಂತ್ರ್ಯ ಹೋರಾಟಗಾರರ ರೀತಿ ಸ್ವಾಗತಿಸುವ ವೈಖರಿ ಬಗ್ಗೆ ನ್ಯಾಯಮೂರ್ತಿ ಸಂತೋಷ ಹೆಗಡೆ ಅವರು ಈ ಹಿಂದೆ ವ್ಯಕ್ತಪಡಿಸಿದ್ದ ಅನಿಸಿಕೆಯನ್ನು ಈ ಪ್ರಕರಣದಲ್ಲೂ ಉಲ್ಲೇಖಿಸಬಹುದು. ಇಂತಹ ಬೃಹತ್ ಹಗರಣದಲ್ಲಿ ಸಿಲುಕಿರುವ ನಾಗೇಂದ್ರ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಲು ಮುಖ್ಯಮಂತ್ರಿಗಳು ಉತ್ಸುಕರಾಗಿರುವುದನ್ನು ನೋಡಿದರೆ ನಮ್ಮ ರಾಜಕೀಯ ವ್ಯವಸ್ಥೆ ಎತ್ತ ಸಾಗುತ್ತಿದೆ ಎಂಬುದರ ದ್ಯೋತಕವಾಗಿದೆ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು

■ ಶಕ್ತಿ ಯೋಜನೆ ದುರುಪಯೋಗವಲ್ಲವೆ?

ಮಾನ್ಯರೆ,

ಕರ್ನಾಟಕದಲ್ಲಿ ಪ್ರಸ್ತುತ ಮಹಿಳೆಯರ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆ ಜಾರಿ ಆಗಿ 18 ತಿಂಗಳು ಆಗಿದೆ. ನೌಕರಿಗೆ ತೆರಳುವ ಮಹಿಳೆಯರಿಗೆ, ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ, ಸಣ್ಣ–ಪುಟ್ಟ ವ್ಯಾಪಾರ ಮಾಡುವ ಮಹಿಳೆಯರಿಗೆ ಇದು ಉಪಯುಕ್ತವಾಗಿದೆ. ಬೇಕೆಂತಲೇ ಅನವಶ್ಯಕವಾಗಿ ಸಂಚರಿಸುವ ಮಹಿಳೆಯರೂ ಇದ್ದಾರೆ. ಉಚಿತ ಬಸ್ ಪ್ರಯಾಣ ಇದೆಯೆಂದು 10 ರೂ. ಸೊಪ್ಪು ಖರೀದಿಸಲು ದೇವರಾಜ ಮಾರುಕಟ್ಟೆಗೆ ಬರುವವರೂ ಇದ್ದಾರೆ. ಶಕ್ತಿ ಯೋಜನೆಯಿಂದ ರಾಜ್ಯ ಸರ್ಕಾರ ಬಸ್ ಮಾರ್ಗಗಳನ್ನೇ ರದ್ದುಗೊಳಿಸಿದೆ. ಸರ್ಕಾರ ಇದರ ಬಗ್ಗೆ ಮರು ಚಿಂತನೆ ಮಾಡಲಿ.

– ನೊಂದ ಪ್ರಯಾಣಿಕರು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸಮಯದ ಅರಿವಿದ್ದವನಿಗೆ ಜೀವನದ ಅರಿವಾಗುತ್ತದೆ!!

ನಾವು ನಮ್ಮ ಸಮಯವನ್ನು ಹೇಗೆ ಬಳಸಿಕೊಳ್ಳುತ್ತಿದ್ದೇವೆ? ಎಂದು ಕೆಲವು ಸಲವಾದರೂ ಅವಲೋಕನ ಮಾಡಿಕೊಳ್ಳಬೇಕು. ದಿನದ 24 ಗಂಟೆಗಳು, ವಾರದ ಏಳು ದಿನಗಳು, ತಿಂಗಳು ಹಾಗೂ ವರ್ಷದಲ್ಲಿ ನಮ್ಮ ಕೆಲಸ ಹೇಗಿತ್ತು. ಅದರಲ್ಲಿ ಅಂದುಕೊಂಡಂತೆ ನಾವು ಮಾಡಿದ ಕೆಲಸವೆಷ್ಟು? ಮಾಡಲಾಗದ್ದು ಎಷ್ಟು? ಮಾಡಲಾಗದಿದ್ದಕ್ಕೆ ಕಾರಣವೇನು? ಸಾಧಿಸಿದ್ದು ಏನು? ಇತ್ಯಾದಿ ಅವಲೋಕನ ಮಾಡಿಕೊಂಡರೆ ನಮಗೆ ನಾವು ಸಮಯವನ್ನು ಹೇಗೆ ಬಳಸಿಕೊಳ್ಳುತ್ತಿದ್ದೇವೆ ಎಂದು ಗೊತ್ತಾಗುತ್ತದೆ.

ಹೊರಗೆ ನಾನು ಬಹಳ ಬ್ಯುಸಿ, ಸಮಯವೇ ಇಲ್ಲ ಎನ್ನುವವರು ನಿಜವಾಗಿ ತಮಗೆ ಸಿಕ್ಕಷ್ಟೂ ಸಮಯವನ್ನು ಸರಿಯಾಗಿ ಬಳಸಿಕೊಂಡಿದ್ದಾರೆಯೇ? ಎಂದು ಅವಲೋಕನ ಮಾಡಿಕೊಳ್ಳಬೇಕು. ನಾವು ನಮಗಿರುವ ಸಮಯದಲ್ಲೇ ಅನೇಕ ಕೆಲಸಗಳನ್ನು, ಸಾಧನೆಗಳನ್ನು ಮಾಡಬಹುದು. ಆದರೆ ಮಾಡದೆ 'ನನಗೆ ಸಮಯವೇ ಸಿಗಲಿಲ್ಲ, ಸಿಕ್ಕಿದ್ದರೆ ಅವೆಲ್ಲವನ್ನೂ ಮಾಡುತ್ತಿದ್ದೆ' ಎಂದು ಸುಳ್ಳು ಸಮಾಧಾನ ಹೊಂದುತ್ತೇವೆ. ಕೆಲವರಂತೂ ನನಗೆ ಕೆರೆದುಕೊಳ್ಳಲೂ ಪುರುಸೊತ್ತಿಲ್ಲ ಎನ್ನುವ ಹಳೆಯ ಮಾತುಗಳನ್ನು ಪುನರುಚ್ಚರಿಸುತ್ತಲೇ ಇರುತ್ತಾರೆ. ಇಂತಹವರು ಮೇಲ್ಕಂಡಂತೆ ಅವಲೋಕನ ಮಾಡಿಕೊಳ್ಳಬೇಕು. ನಿಜ, ನಾವು ಇತರರಿಗಿಂತ ಸ್ವಲ್ಪ ಹೆಚ್ಚಿನ ಕೆಲಸ ಮಾಡುತ್ತೇವೆ. ಹಾಗೆಂದು ಸಮಯವೇ ಸಿಗುವುದಿಲ್ಲ ಎಂದು ಹೇಳುವುದು ಸುಳ್ಳು. ನಮಗೆ ಅನಿರೀಕ್ಷಿತವಾಗಿ ಆರೋಗ್ಯ ತಪ್ಪಿದರೆ, ಮೂರ್‍ನಾಲ್ಕು ದಿನ ಮಲಗುವಂತಾದರೆ, ಆಗ ನಮ್ಮ ಎಲ್ಲಾ ಕೆಲಸಗಳೂ ನಿಂತುಹೋಗುವುದೇ? ಇಲ್ಲ. ನಂತರ ಸ್ವಲ್ಪ ಹೆಚ್ಚು ಸಮಯ ವ್ಯಯ ಮಾಡಿದರೆ ಆ ದಿನಗಳ ಕೊರತೆ ತುಂಬಿಸಿಕೊಳ್ಳುತ್ತೇವೆ. ಹಾಗಾದರೆ ಆರೋಗ್ಯವಾಗಿರುವಾಗ ಆ ರೀತಿ ಮೂರ್‍ನಾಲ್ಕು ದಿನಗಳನ್ನು ಇತರೆ ಅಗತ್ಯ ಕೆಲಸಗಳಿಗೆ ವಿನಿಯೋಗಿಸಲು ಏಕೆ ಸಾಧ್ಯವಾಗುವುದಿಲ್ಲ? ಇಲ್ಲಿ ಸಮಯಕ್ಕಿಂತ ನಮ್ಮ ಮನಸ್ಸು ಹಾಗೂ ನಮ್ಮ ಆದ್ಯತೆಯು ಮುಖ್ಯವಾಗಿರುತ್ತದೆ. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಲೇಬೇಕು ಎಂಬುದನ್ನು ಮೊದಲು ನಾವೇ ನಿರ್ಧರಿಸಿಕೊಳ್ಳಬೇಕು. ಮಾಡಲೇಬೇಕು ಎಂದಾದಾಗ ಅದಕ್ಕೆ ಖಂಡಿತಾ ಸಮಯ ಹೊಂದಾಣಿಕೆಯಾಗುತ್ತದೆ.

ಒಂದಂತೂ ನಿಜ. ನಾವು ಏನೇ ಮಾಡಿದರೂ ಒಂದು ನಿಮಿಷವನ್ನೂ ಹೆಚ್ಚಾಗಿ ಸೃಷ್ಟಿ ಮಾಡಲಾಗುವುದಿಲ್ಲ. ಕೊನೆಗೆ ನಮ್ಮ ಆಯಸ್ಸನ್ನೂ ಸಹ, ಎಂತಹ ವೈದ್ಯಕೀಯ ಸೌಲಭ್ಯಗಳಿದ್ದರೂ ಸಾವು ಅದನ್ನು ಬದಿಗಿರಿಸಿ ನಮ್ಮನ್ನು ತನ್ನ ಕಬಂಧಬಾಹುಗಳಿಗೆ ತೆಗೆದುಕೊಂಡೇ ಹೋಗುತ್ತದೆ. ಕವಿ ಬಿ. ಆರ್. ಲಕ್ಷ್ಮಣರಾವ್ ಅವರು ಬರೆದಂತೆ 'ಜಿಪುಣ ಅಂದ್ರೆ ಜಿಪುಣ ಈ ಕಾಲ, ಏನೇ ಗಿರವೀ ಇಟ್ರೂ, ಎಷ್ಟೇ ಬಡ್ಡಿ ಕೊಟ್ರೂ, ಹುಟ್ಟೋದಿಲ್ಲ ಒಂದು ಗಳಿಗೆ ಸಾಲ' ಎನ್ನುವುದರ ಜೊತೆಗೆ ಹೀಗಾದಾಗ ನಾವು ಏನು ಮಾಡಬಹುದು ಎಂಬುದಕ್ಕೆ ಅವರು ಹೇಳುತ್ತಾರೆ "ಮೀರುವುದೊಂದೇ ಇವನನು ಗೆಲ್ಲುವ ದಾರಿ, ಸಿಕ್ಕದೆ ರೂಢಿಯ ಕೈಲಿ, ಕಲ್ಪಿಸಿ ಹೊಸಹೊಸ ಶೈಲಿ, ಧಿಕ್ಕರಿಸೋಣ ಲೆಕ್ಕಾಚಾರದ ತಾಳ" ಎಂದು.

ಕಾಲ ಎಂದರೆ ಜಿಪುಣ, ಏನು ಮಾಡಿದರೂ ಒಂದು ಗಳಿಗೆಯನ್ನೂ ಅದು ಹೆಚ್ಚಾಗಿ ಕೊಡುವುದಿಲ್ಲ. ಕಾಲವನ್ನು ಲಂಚ ಕೊಟ್ಟು ಕೊಳ್ಳಲಾಗುವುದಿಲ್ಲ. ಹಾಗಾಗಿ ಇರುವ ಸಮಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದೇ ಬುದ್ಧಿವಂತಿಕೆ. ಕಾಲವನ್ನು ಹೊಂದಿಸಿಕೊಳ್ಳುವುದು ಬುದ್ಧಿವಂತಿಕೆ. ನಾವು ಇಡೀ ದಿನದಲ್ಲಿ ಯಾವುದಕ್ಕೆ ಅಗತ್ಯವಾದ ಸಮಯ ನೀಡುತ್ತಿದ್ದೇವೆ, ಯಾವುದರಲ್ಲಿ ಅನವಶ್ಯಕವಾಗಿ ಸಮಯ ಕಳೆದಿದ್ದೇವೆ ಎಂಬುದನ್ನು ನಾವೇ ವಿವೇಚಿಸಬೇಕು.

ಸಾಮಾನ್ಯವಾಗಿ ನಿದ್ರೆಯ ವಿಷಯದಲ್ಲಿ ಸಮಯದ ಚಿಂತನೆ ಮಾಡಬೇಕಾಗುತ್ತದೆ. ಕೆಲವೊಮ್ಮೆ ನಿದ್ರೆ ಬಾರದಿದ್ದರೂ ಸಮಯ ನೋಡಿಕೊಂಡು ಮಲಗುವುದರಿಂದ ನಮ್ಮ ಸಾಕಷ್ಟು ಸಮಯ ಹಾಳಾಗುತ್ತದೆ. ಹಾಗೆಯೇ ಎಚ್ಚರವಾದ ನಂತರವೂ ಮಲಗಿ ಸಮಯವನ್ನು ಹಾಳು ಮಾಡಿಕೊಳ್ಳುತ್ತೇವೆ. ನಿದ್ರೆ ಸಾಮಾನ್ಯವಾಗಿ ನಮ್ಮ ದೈಹಿಕ ಹಾಗೂ ಕೆಲವೊಮ್ಮೆ ಮಾನಸಿಕ ಒತ್ತಡಕ್ಕೆ ಅವಶ್ಯವಾದಷ್ಟು ಬೇಕಾಗುತ್ತದೆ. ದೈಹಿಕ ಶ್ರಮ ತಾನಾಗೇ ನಿದ್ರೆ ತರಿಸುತ್ತದೆ. ಮಾನಸಿಕ ಒತ್ತಡ ನಿದ್ರೆಗೆ ಅಷ್ಟು ಸುಲಭವಾಗಿ ಆಸ್ಪದ ನೀಡುವುದಿಲ್ಲ. ನಮ್ಮಲ್ಲಿ ಅನೇಕರು ರಾತ್ರಿ ಮಲಗುವವರೆಗೂ ಟಿವಿ ನೋಡುತ್ತಾರೆ. ಕೊನೆಯ ಅರ್ಧ ಗಂಟೆ ಏನು ನೋಡಿರುತ್ತೇವೆಯೋ, ಅದೇ ನಮ್ಮ ನಿದ್ರೆ ನಿರ್ಧರಿಸುತ್ತದೆ. ನಾವು ನೋಡಿದ ದೃಶ್ಯ ಹಿಂಸಾತ್ಮಕವಾದ ಘಟನೆಗೆ ಸಂಬಂಧಿಸಿದ್ದರೆ, ನಿದ್ರೆಯಲ್ಲೂ ಮೈಬೆವರುವಂತೆ ಆಗುತ್ತದೆ. ಹಾಸ್ಯದ ದೃಶ್ಯಗಳಾಗಿದ್ದರೆ, ನಿದ್ರೆಯಲ್ಲೂ ಕೆಲವರು ನಗುತ್ತಾರೆ. ಆದ್ದರಿಂದ ಇಂತಹವರಿಗೆ ಸಾಮಾನ್ಯವಾಗಿ ಹೇಳುವುದು ಏನೆಂದರೆ ಮಲಗುವ ಕನಿಷ್ಠ ಅರ್ಧ ಗಂಟೆಗೆ ಮುಂಚೆ ಟಿವಿ ನೋಡುವುದನ್ನು ನಿಲ್ಲಿಸಿ. ನಿಮ್ಮ ಮನಸ್ಸಿಗೆ ನೆಮ್ಮದಿ ನೀಡಬಹುದಾದ ಹಾಡು ಕೇಳಿ, ಇಷ್ಟವಾದ ಪುಸ್ತಕ ಓದಿ. ಅದರಿಂದ ನಿಮಗೆ ನೆಮ್ಮದಿಯ ನಿದ್ರೆ ಬರುತ್ತದೆ ಎಂದು. ಇದು ಸಮಯದ ಸದುಪಯೋಗದ ಹಾದಿ.

ನಮ್ಮ ಕನ್ನಡದಲ್ಲಿ ಒಂದು ಒಳ್ಳೆಯ ಮಾತಿದೆ. 'ಸಮಯದ ಅರಿವಿದ್ದವನಿಗೆ, ಜೀವನದ ಅರಿವಿರುತ್ತದೆ' ಎಂದು. ನಾವು



"

ಸಾಮಾನ್ಯವಾಗಿ ನಿದ್ರೆಯ ವಿಷಯದಲ್ಲಿ ಸಮಯದ ಚಿಂತನೆ ಮಾಡಬೇಕಾಗುತ್ತದೆ. ಕೆಲವೊಮ್ಮೆ ನಿದ್ರೆ ಬಾರದಿದ್ದರೂ ಸಮಯ ನೋಡಿಕೊಂಡು ಮಲಗುವುದರಿಂದ ನಮ್ಮ ಸಾಕಷ್ಟು ಸಮಯ ಹಾಳಾಗುತ್ತದೆ. ಹಾಗೆಯೇ ಎಚ್ಚರವಾದ ನಂತರವೂ ಮಲಗಿ ಸಮಯವನ್ನು ಹಾಳು ಮಾಡಿಕೊಳ್ಳುತ್ತೇವೆ. ನಿದ್ರೆ ಸಾಮಾನ್ಯವಾಗಿ ನಮ್ಮ ದೈಹಿಕ ಹಾಗೂ ಕೆಲವೊಮ್ಮೆ ಮಾನಸಿಕ ಒತ್ತಡಕ್ಕೆ ಅವಶ್ಯವಾದಷ್ಟು ಬೇಕಾಗುತ್ತದೆ. ದೈಹಿಕ ಶ್ರಮ ತಾನಾಗೇ ನಿದ್ರೆ ತರಿಸುತ್ತದೆ. ಮಾನಸಿಕ ಒತ್ತಡ ನಿದ್ರೆಗೆ ಅಷ್ಟು ಸುಲಭವಾಗಿ ಆಸ್ಪದ ನೀಡುವುದಿಲ್ಲ. ನಮ್ಮಲ್ಲಿ ಅನೇಕರು ರಾತ್ರಿ ಮಲಗುವವರೆಗೂ ಟಿವಿ ನೋಡುತ್ತಾರೆ. ಕೊನೆಯ ಅರ್ಧ ಗಂಟೆ ಏನು ನೋಡಿರುತ್ತೇವೆಯೋ, ಅದೇ ನಮ್ಮ ನಿದ್ರೆ ನಿರ್ಧರಿಸುತ್ತದೆ. ನಾವು ನೋಡಿದ ದೃಶ್ಯ ಹಿಂಸಾತ್ಮಕವಾದ ಘಟನೆಗೆ ಸಂಬಂಧಿಸಿದ್ದರೆ, ನಿದ್ರೆಯಲ್ಲೂ ಮೈಬೆವರುವಂತೆ ಆಗುತ್ತದೆ. ಹಾಸ್ಯದ ದೃಶ್ಯಗಳಾಗಿದ್ದರೆ, ನಿದ್ರೆಯಲ್ಲೂ ಕೆಲವರು ನಗುತ್ತಾರೆ. ಆದ್ದರಿಂದ ಇಂತಹವರಿಗೆ ಸಾಮಾನ್ಯವಾಗಿ ಹೇಳುವುದು ಏನೆಂದರೆ ಮಲಗುವ ಕನಿಷ್ಠ ಅರ್ಧ ಗಂಟೆಗೆ ಮುಂಚೆ ಟಿವಿ ನೋಡುವುದನ್ನು ನಿಲ್ಲಿಸಿ. ನಿಮ್ಮ ಮನಸ್ಸಿಗೆ ನೆಮ್ಮದಿ ನೀಡಬಹುದಾದ ಹಾಡು ಕೇಳಿ, ಇಷ್ಟವಾದ ಪುಸ್ತಕ ಓದಿ. ಅದರಿಂದ ನಿಮಗೆ ನೆಮ್ಮದಿಯ ನಿದ್ರೆ ಬರುತ್ತದೆ ಎಂದು. ಇದು ಸಮಯದ ಸದುಪಯೋಗದ ಹಾದಿ.

ಸಮಯವನ್ನು ಸದುಪಯೋಗಪಡಿಸಿಕೊಂಡರೆ ನಮ್ಮ ಜೀವನ ಸರಿದಾರಿಯಲ್ಲಿ ನಡೆಯುತ್ತದೆ. ಜೀವನಕ್ಕೆ ಶಿಸ್ತು ಮುಖ್ಯ. ಯಾವುದಕ್ಕೆ ಎಷ್ಟು ಸಮಯ ನೀಡಬೇಕು ಎಂಬುದನ್ನು ವಿವೇಚಿಸಬೇಕು.

ಸಾಮಾನ್ಯವಾಗಿ ನಾವು ಸಭೆ ಸಮಾರಂಭಗಳಿಗೆ ರಾಜಕೀಯ ನಾಯಕರನ್ನು ಅತಿಥಿಗಳಾಗಿ ಕರೆಯುತ್ತೇವೆ. ಹೀಗೆ ಕರೆದಿರುವಾಗ ಅವರು ಬರುವವರೆಗೂ ಕಾಯಬೇಕಾದ ಅನಿವಾರ್ಯತೆ ಇರುತ್ತದೆ. ನಾವು ಕಾರ್ಯಕ್ರಮ ಇಷ್ಟು ಹೊತ್ತಿಗೆ ಆರಂಭಿಸುತ್ತೇವೆ ಎಂದು ಪ್ರಕಟಿಸಿರುತ್ತೇವೆ. ಆದರೆ ಆ ಮುಖಂಡ ಬರುವುದು ಒಂದು ಗಂಟೆ, ಕೆಲವೊಮ್ಮೆ ಎರಡು ಗಂಟೆ ತಡವಾಗಿ. ಆದರೆ ಅವರು ಬಂದ ನಂತರ ಮಾತು ಆರಂಭಿಸುವಾಗ ಸ್ವಲ್ಪ ತಡವಾಯಿತು ಎಂದು ಮಾತ್ರ ಹೇಳುತ್ತಾರೆ. ಅವರು ಒಂದು ಗಂಟೆ ತಡವಾಯಿತು ಎಂದರೆ ಅದು ಒಂದು ಗಂಟೆ ಮಾತ್ರ ಆಗಿರುವುದಿಲ್ಲ. ಅಲ್ಲಿ ಕುಳಿತ ಸಭಿಕರ ಒಂದೊಂದು ಗಂಟೆ ಆಗಿರುತ್ತದೆ. ಅಲ್ಲಿ ನೂರು ಜನ ಸೇರಿದ್ದರೆ ಆದ ನಷ್ಟ ನೂರು ಗಂಟೆಗಳು ಎಂದರ್ಥ. ಅದು ನೂರು ಮಾನವ ಗಂಟೆಗಳು. ಅಷ್ಟು ಸಮಯದಲ್ಲಿ, ಅಷ್ಟೂ ಜನರೂ ಸೇರಿ ಏನಾದರೂ ಕೆಲಸ ಮಾಡಿದ್ದರೆ ಏನಾಗುತ್ತಿತ್ತು? ಎಂಬುದನ್ನು ಯೋಚಿಸಬೇಕು. ಅಷ್ಟು ಜನರ ಸಮಯ ಹಾಳು ಮಾಡುವ ಅರ್ಹತೆ ನಮಗಿದೆಯೇ? ಎಂದೂ ಪ್ರಶ್ನೆ ಮಾಡಿಕೊಳ್ಳಬೇಕು. ಇಲ್ಲಿ ಅವರ ಸಮಯದ ಹೊಂದಾಣಿಕೆಯ ಕೊರತೆ ಕಾಣಿಸುತ್ತದೆ. ಇದರ ಅರಿವಿರುವ ಜನರು ಹತ್ತು ಗಂಟೆಗೆ ಕಾರ್ಯಕ್ರಮ ಎಂದರೆ ಹತ್ತೂವರೆ, ಹನ್ನೊಂದು ಗಂಟೆಗೆ ಬರುತ್ತಾರೆ. ಹಾಗೆ ನೋಡಿದರೆ ಅವರನ್ನು ಬುದ್ಧಿವಂತರು ಎಂದು ಕರೆಯಬಹುದೇನೋ? ಸಮಯಕ್ಕೆ ಸರಿಯಾಗಿ ಹಾಜರಾಗುವವರು ಸಾಕಷ್ಟು ಸಮಯವನ್ನು ವ್ಯರ್ಥ ಮಾಡಿಕೊಂಡಿರುತ್ತಾರೆ. ಹೀಗಾಗೀ ನಾವೇ 'ನಮ್ಮದು ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್' ಎಂದು ಅಪಹಾಸ್ಯ ಮಾಡಿಕೊಳ್ಳುವಂತಾಗಿದೆ.

ಸರ್ ಎಂ.ವಿಶ್ವೇಶ್ವರಯ್ಯನವರು ಸಮಯಕ್ಕೆ ಹೆಚ್ಚು ಬೆಲೆ ನೀಡುತ್ತಿದ್ದರು ಎಂಬುದನ್ನು ನಾವು ಕೇಳಿದ್ದೇವೆ. ಒಂದು ಸಲ ಅವರು ಮೂರು ದಿನದ ಒಂದು ಸಮ್ಮೇಳನಕ್ಕೆ ಹೋಗಿದ್ದರು. ಸಭೆ ಮಧ್ಯಾಹ್ನ ಎರಡು ಗಂಟೆಗೆ ಸೇರುತ್ತಿತ್ತು. ಆ ಸಭೆ ಮುಗಿಯುವ ಹಂತದಲ್ಲಿ ವಿಶ್ವೇಶ್ವರಯ್ಯನವರು ಕೇಳಿದರು. 'ನಾಳೆ ಎಷ್ಟು ಹೊತ್ತಿಗೆ ಸಭೆ?' ಆಯೋಜಕರು ಮಧ್ಯಾಹ್ನ ಎರಡು ಗಂಟೆ ಎಂದರು. ಆಗ ವಿಶ್ವೇಶ್ವರಯ್ಯನವರು "Is it standard time Or Aden time?" ಎನ್ನುತ್ತಿದ್ದರಂತೆ. ಅವರು ಹೀಗೆ ಪ್ರತಿದಿನ ಕೇಳುತ್ತಿದ್ದುದನ್ನು ಗಮನಿಸಿದ ಆಯೋಜಕರೊಬ್ಬರು ಈ ಬಗ್ಗೆ ವಿಶ್ವೇಶ್ವರಯ್ಯನವರನ್ನು ನೀವು ಹಾಗೆ ಏಕೆ ಕೇಳುತ್ತೀರಿ? ಏಡನ್ ಟೈಮ್ ಎಂದರೆ ಏನು? ಅದಕ್ಕೆ ವಿಶ್ವೇಶ್ವರಯ್ಯ ಹೇಳಿದರಂತೆ "ನೀವು ಎರಡು ಗಂಟೆ ಎಂದು ಹೇಳಿದಿರಲ್ಲ, ಅದು ಗ್ರೀನ್‌ವಿಚ್ ಗಡಿಯಾರಕ್ಕನುಸಾರವಾದುದ್ದಾದರೆ ಅದು Standard time. ಅದು ಪ್ರಪಂಚದಲ್ಲಿ ಎಲ್ಲರೂ ಅನುಸರಿಸುವ ಕಾಲಪ್ರಮಾಣ. ಆದರೆ ಏಡನ್ ಬಂದರಿನಲ್ಲಿ ಎರಡು ಗಂಟೆಗೆ ಯಾವುದೋ ಹಡಗು ಬರುತ್ತದೆಂದು ನಿಗದಿಯಾಗಿರುತ್ತದೆ. ಆ ಹಡಗು ಅಲ್ಲಿಗೆ ಯಾವಾಗ ಬರುವುದೋ ಆಗಲೇ ಎರಡು ಗಂಟೆ ಎಂದು ಭಾವಿಸುತ್ತಾರೆ. ಅದು ರಾತ್ರಿ ಏಳು ಗಂಟೆಗೆ ಬಂದರೂ ಅದು ಮಧ್ಯಾಹ್ನ ಎರಡು ಗಂಟೆಯೇ. ಇಲ್ಲಿ ನಮ್ಮ ಮೀಟಿಂಗ್‌ಗಳಲ್ಲೂ ಏಡನ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ನಾವೆಲ್ಲಾ ಬಂದು ಸೇರಿದಾಗ ಅದನ್ನು ಎರಡು ಗಂಟೆ ಎಂದು ಹೇಳಲಾಗುತ್ತಿದೆ ಎಂದರಂತೆ. ಅದನ್ನು ಕೇಳಿದ ಆಯೋಜಕರು ತಾವು ತಪ್ಪು ತಿದ್ದಿಕೊಳ್ಳುವುದಾಗಿ ಹೇಳಿದ್ದರಂತೆ.

ವಿಶ್ವೇಶ್ವರಯ್ಯನವರಿಗೆ ಸಂಬಂಧಿಸಿದ ಮತ್ತೊಂದು ಘಟನೆ; ಅವರು ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡುತ್ತಿದ್ದರು. ಅವರು ಕಷ್ಟಪಟ್ಟು ಓದಿ ಮುಂದೆ ಬಂದಿದ್ದವರು. ಹಾಗಾಗಿ ಅವರು ಓದುವ ಮಕ್ಕಳಿಗೆ ಬಹಳ ಪ್ರೋತ್ಸಾಹ ನೀಡುತ್ತಿದ್ದರು. ತಮಗೆ ಪರಿಚಿತರಲ್ಲಿ ಯಾರಿಗಾದರೂ ಓದಿಗೆ ತೊಂದರೆಯಾಗಿದೆ ಎಂದರೆ ಅವರು ಸಹಾಯ ಮಾಡುತ್ತಿದ್ದರು. ಚೆನ್ನಾಗಿ ಓದುವ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಆಸಕ್ತಿ ಮೂಡಿಸಲು ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ಯಾರಾದರೂ ಆಗಿನ ಕಾಲದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದರೆ ಅವರಿಗೆ ತಾವು ನೂರು ರೂಪಾಯಿಗಳ ಬಹುಮಾನ ನೀಡುವುದಾಗಿ ಪ್ರಕಟಪಡಿಸಿದ್ದರು. ಆಗ ನೂರು ರೂಪಾಯಿ ದೊಡ್ಡ ಮೊತ್ತವಾಗಿತ್ತು. ಪ್ರತಿ ವರ್ಷ ತಾವು ನುಡಿದಂತೆ ಬಹುಮಾನ ನೀಡುತ್ತಿದ್ದರು. ಒಂದು ವರ್ಷ ಅವರ ಸಂಬಂಧಿಯ ಮಗನೊಬ್ಬ ಪ್ರಥಮ ಸ್ಥಾನ ಪಡೆದ. ಹಾಗಾಗಿ ಅವನು ಬಹುಮಾನಕ್ಕೆ ಅರ್ಹನಾಗಿದ್ದ. ಬಹುಮಾನ ಪಡೆದ ವಿದ್ಯಾರ್ಥಿಯು ರಾತ್ರಿ ಏಳೂಮುಕ್ಕಾಲಿಗೆ ವಿಶ್ವೇಶ್ವರಯ್ಯನವರ ಮನೆಗೆ ಹೋಗಬೇಕಿತ್ತು. ವಿಶ್ವೇಶ್ವರಯ್ಯನವರೊಡನೆ ರಾತ್ರಿ ಎಂಟು ಗಂಟೆಗೆ ಸರಿಯಾಗಿ ಊಟಕ್ಕೆ ಕುಳಿತುಕೊಳ್ಳಬೇಕು. ಊಟವಾದ ನಂತರ ವಿದ್ಯಾರ್ಥಿಯ ಆಶೀರ್ವದಿಸಿ ಬಹುಮಾನ ನೀಡುತ್ತಿದ್ದರು. ಇದು ಒಂದು ಪದ್ಧತಿಯಾಗಿತ್ತು. ಆ ವರ್ಷ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ಇವರ ಮನೆಗೆ ಬರುವ ಬಗ್ಗೆ ಮುಂಚೆಯೇ ಸಂದೇಶ ಕಳುಹಿಸಿದ್ದರು.

ಆ ಹುಡುಗನಿಗೆ ತಾನು ಪ್ರಥಮ ಸ್ಥಾನ ಪಡೆದಿದ್ದರಿಂದ ಬಹಳ ಸಂತೋಷವಾಗಿತ್ತು. ಅದರ ಖುಷಿಯಲ್ಲಿ ಪೇಟೆ ಸುತ್ತುತ್ತಾ ಕಾಲ ಕಳೆದು ವಿಶ್ವೇಶ್ವರಯ್ಯನವರ ಮನೆಗೆ ಏಳೂಮುಕ್ಕಾಲಿನ ಬದಲು ಎಂಟೂಮುಕ್ಕಾಲಿಗೆ ಬಂದ. ವಿಶ್ವೇಶ್ವರಯ್ಯನವರು ಎಂದಿನಂತೆ ಎಂಟು ಗಂಟೆಗೆ ಊಟ ಮುಗಿಸಿ ತಮ್ಮ ಕೊಠಡಿಗೆ ತೆರಳಿದ್ದರು. ಊಟ ಬಡಿಸುವವರಿಗೆ ಆ ವಿದ್ಯಾರ್ಥಿ ಬಂದಾಗ ಅವನಿಗೆ ಊಟ ಬಡಿಸಬೇಕು, ಅವನು ಊಟವಾದ ನಂತರ ತಮ್ಮನ್ನು ಕಾಣಬೇಕು ಎಂದು ತಿಳಿಸಿದ್ದರು. ತಾನು ಬಂದಿದ್ದು ತಡವಾಗಿದೆ ಎಂದು ಅರಿತ ಆ ವಿದ್ಯಾರ್ಥಿ ಬೇಗ ಊಟ ಮುಗಿಸಿ, ವಿಶ್ವೇಶ್ವರಯ್ಯನವರನ್ನು ಅವರ ಕೊಠಡಿಯಲ್ಲಿ ಭೇಟಿ ಮಾಡಿದ. ಅವರು ಕರೆದು ಹರಸಿ ಅವನಿಗೆ ಒಂದು ಲಕೋಟೆ ಕೊಟ್ಟರು. ಅವನು ಅದನ್ನು ಅಲ್ಲೇ ತೆರೆದು ನೋಡದೆ ಜೇಬಿನಲ್ಲಿ ಇಟ್ಟುಕೊಂಡು, ಅವರಿಗೆ ನಮಸ್ಕರಿಸಿದ. ಆಗ ವಿಶ್ವೇಶ್ವರಯ್ಯನವರು 'ಮಗೂ, ಎಂದಿಗೂ ಹಣವನ್ನು ಎಣಿಸದೇ ಹಾಗೆಯೇ ಇಟ್ಟುಕೊಳ್ಳಬಾರದು. ಅದನ್ನು ಸರಿಯಾಗಿ ಎಣಿಸಿ ನೋಡಿಕೋ' ಎಂದರು. ಅದರಂತೆ ಆ ಹುಡುಗ ಎಣಿಸಿದಾಗ ಅದರಲ್ಲಿ ಬರೀ ಇಪ್ಪತ್ತೈದು ರೂಪಾಯಿ ಮಾತ್ರ ಇತ್ತು. ಆತ ನೂರು ರೂಪಾಯಿ ಇರುತ್ತದೆ ಎಂದು ಅಂದುಕೊಂಡಿದ್ದ. ಆತ ವಿಶ್ವೇಶ್ವರಯ್ಯನವರ ಮುಖವನ್ನು ನೋಡಿದ. ಅವನ ಮುಖದಲ್ಲಿ ನಿರಾಶೆ ಇತ್ತು. ಆಗ ಅವನಿಗೆ ವಿಶ್ವೇಶ್ವರಯ್ಯ ಹೇಳಿದರು, 'ನೀನು ಎಂಟು ಗಂಟೆಗೆ ಸರಿಯಾಗಿ ಬರಬೇಕಾಗಿತ್ತು. ಆದರೆ ಮುಕ್ಕಾಲು ಗಂಟೆ ತಡಮಾಡಿಬಂದೆ. ಆದ್ದರಿಂದ ಮುಕ್ಕಾಲು ಭಾಗ ಹಣ ಕಡಿಮೆಯಾಯಿತು. ಈ ಪಾಠವನ್ನು ನೀನು ಎಂದಿಗೂ ಮರೆಯಬಾರದು. ಸಮಯವೆಂದರೆ ಅದು ಹಣಕ್ಕೂ ಮಿಗಿಲಾದದ್ದು. ಪ್ರತಿ ನಿಮಿಷಕ್ಕೂ ಅದರದ್ದೇ ಆದ ಬೆಲೆ ಇರುತ್ತದೆ' ಎಂದರು. ಆ ಪಾಠವನ್ನು ಆ ಹುಡುಗ ತನ್ನ ಜೀವನದಲ್ಲಿ ಎಂದಿಗೂ ಮರೆಯಲಿಲ್ಲ.

ಇದು ಸಮಯದ ಬೆಲೆ. ಸಮಯದ ಅರಿವಿದ್ದರೆ ಮಾತ್ರ ಜೀವನ ಬೆಲೆ ಅರಿವಾಗುತ್ತದೆ. ಕಳೆದು ಹೋದ ಸಮಯ ಮತ್ತೆಂದೂ ಬಾರದು.

ಮೈಸೂರು ತಾಲೂಕು ಕಚೇರಿ ಮುಂದೆ ಕೆಂಚಲಗೂಡು ಗ್ರಾಮಸ್ಥರ ಪ್ರತಿಭಟನೆ

ಜಮೀನನ್ನು ನಿವೇಶನಕ್ಕಾಗಿಯೇ ಮೀಸಲಿಡಬೇಕೆಂದು ಒತ್ತಾಯ



ಮೈಸೂರು ತಾಲೂಕು ಜಯಪುರ ಹೋಬಳಿಯ ಕೆಂಚಲಗೂಡು ಗ್ರಾಮದಲ್ಲಿ ಜಮೀನನ್ನು ನಿವೇಶನಕ್ಕೆ ಮೀಸಲಿಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಮೈಸೂರಿನ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ನ.14(ಜಿಎ)–ಮೈಸೂರು ತಾಲೂಕು ಜಯಪುರ ಹೋಬಳಿಯ ಕೆಂಚಲಗೂಡು ಗ್ರಾಮದಲ್ಲಿ ನಿವೇಶನಕ್ಕೆಂದು ಮಂಜೂರು ಮಾಡಿರುವ ಜಮೀನನ್ನು ನಿವೇಶನಕ್ಕಾಗಿಯೇ ಮೀಸಲಿಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಮೈಸೂರಿನ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಕೆಂಚಲಗೂಡು ಗ್ರಾಮದ ಸರ್ವೆ ನಂಬರ್ 14ರ 27 ಎಕರೆ 26 ಗುಂಟೆ ಪ್ರದೇಶದಲ್ಲಿ ಸುಮಾರು 70 ಕುಟುಂಬ ಬಗರ್‌ಹುಕುಂ ಸಾಗುವಳಿಯನ್ನು 70 ವರ್ಷಗಳ ಹಿಂದಿನಿಂದಲೂ ಮಾಡುತ್ತಿದ್ದರು. ದರಖಾಸ್ತು ಮಂಜೂರಾಗಿ ಫಾರಂ ನಂ. 50ರ ನಮೂನೆ ಅರ್ಜಿ ಕೂಡ ಸಲ್ಲಿಸಿದ್ದರು. ಮುನ್ಸಿಪಲ್ ವ್ಯಾಪ್ತಿಯಿಂದ ಕಡಿಮೆ ಅಂತರದಲ್ಲಿದೆ ಎಂದು ಸಾಗುವಳಿ ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಸಂಬಂಧಪಟ್ಟ ಸಮಿತಿ ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸಾಗುವಳಿ ಮಾಡುತ್ತಿದ್ದ ರೈತರ ಕುಟುಂಬಕ್ಕೆ ನಿವೇಶನವನ್ನಾದರೂ ನೀಡಬೇಕೆಂಬ ಉದ್ದೇಶದಿಂದ ಈ ಸರ್ವೆ ನಂಬರ್‌ನ 5 ಎಕರೆ 20 ಗುಂಟೆ ಪ್ರದೇಶವನ್ನು ನಿವೇಶನಕ್ಕಾಗಿ ಮೀಸಲಿಡಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಈ ನಡುವೆ ನಿವೇಶನಕ್ಕಾಗಿ ಕಾಯ್ದಿರಿಸಿರುವ ಸ್ಥಳದಲ್ಲಿಯೇ 1 ಎಕರೆ ಪ್ರದೇಶವನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಿ ಆದೇಶ ಹೊರಡಿಸಿರುವುದು ಸರಿಯಲ್ಲ ಎಂದು ಕಿಡಿಕಾರಿದರು. ಸ್ಮಶಾನಕ್ಕೆ ಪರ್ಯಾಯ ಜಾಗ ನೀಡಿ ನಿವೇಶನಕ್ಕಾಗಿ ಕಾಯ್ದಿರಿಸಿರುವ ಜಾಗವನ್ನು ನಿವೇಶನಕ್ಕೆ ಮೀಸಲಿಡಬೇಕು. ಈ ಸರ್ಕಾರಿ ಜಾಗದಲ್ಲಿ ಗುಂಪು ಮನೆ ನಿರ್ಮಿಸಬೇಕೆಂದು ಯೋಜನೆಯನ್ನು ರೂಪಿಸಿದ್ದು, ಗುಂಪು ಮನೆ ನಿರ್ಮಾಣ ಮಾಡಬಾರದು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹೊಸಕೋಟೆ ಬಸವರಾಜು, ತಾಲೂಕು ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ಮುಖಂಡರಾದ ಮರಂಕಯ್ಯ, ಬಸಪ್ಪ ನಾಯಕ ನೂರಾರು ಮಂದಿ ಪಾಲ್ಗೊಂಡಿದ್ದರು.

ಬ್ಲಾಕ್ ಆಗಿದ್ದ ವಾಟ್ಸಾಪ್ ಓಪನ್ ಮಾಡುತ್ತಿದ್ದಂತೆ 2 ಲಕ್ಷ ಖತಂ!

ಮೈಸೂರು, ನ.14(ಎಸ್‌ಬಿಡಿ)– ಬ್ಲಾಕ್ ಆಗಿದ್ದ ವಾಟ್ಸಾಪ್ ಓಪನ್ ಮಾಡಿದ ನಂತರದಲ್ಲಿ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ಸುಮಾರು 2 ಲಕ್ಷ ರೂ. ಕಡಿತವಾಗಿದೆ ಎಂದು ಮೈಸೂರಿನ ರೈಲ್ವೆ ಉದ್ಯೋಗಿಯೊಬ್ಬರು ಕುವೆಂಪುನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಾಟ್ಸಾಪ್ ಬ್ಲಾಕ್ ಆಗಿತ್ತು. ಅದನ್ನು ಓಪನ್ ಮಾಡಲು ಮುಂದಾದಾಗ ಮೊಬೈಲ್ ಸಂಖ್ಯೆ ನಮೂದಿಸುವಂತೆ ಸೂಚಿಸಲಾಯಿತು. ಹಾಗೆಯೇ ಮೊಬೈಲ್ ಸಂಖ್ಯೆ ನಮೂದಿಸಿದಾಗ ಓಟಿಪಿ ಆಟೋ ಜನರೇಟ್ ಆಗಿ ನಂತರ ವಾಟ್ಸಾಪ್ ಓಪನ್ ಆಯಿತು. ಆದರೆ ಅಂದು ಸಂಜೆ ಬ್ಯಾಂಕ್ ಖಾತೆಯಿಂದ ಐದು ಬಾರಿ ಒಟ್ಟು 1,96,603 ರೂ. ಕಡಿತವಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಾಟ್ಸಾಪ್ ಮರುಚಾಲನೆ ಪ್ರಕ್ರಿಯೆಯಿಂದಾಗಿ ಬ್ಯಾಂಕ್ ಖಾತೆಯಲ್ಲಿ ಹಣ ಕಡಿತವಾಗಿದೆಯೇ, ಯಾವುದಾದರೂ ಫೇಸ್ ಆಪ್ ಬಳಸಿದ್ದಾರಾ? ಇಲ್ಲವೇ ಮತ್ಯಾವ ಕಾರಣದಿಂದ ಹೀಗಾಗಿದೆ ಎಂಬುದು ತಿಳಿಯಬೇಕಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ನಡಿಗೆ, ದೈಹಿಕ ವ್ಯಾಯಾಮದಿಂದ ಮಧುಮೇಹ ನಿಯಂತ್ರಣ

ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ವಾಕಥಾನ್



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮುಂಭಾಗ ಕೆಆರ್‌ಎಸ್‌ಎಸ್‌ಡಿಐ, ಜೆಎಸ್‌ಎಸ್ ಹಾಗೂ ಎಪಿಐ ವತಿಯಿಂದ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಾಕಥಾನ್‌ಗೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಪ್ರಭಾರ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಗುರುವಾರ ಚಾಲನೆ ನೀಡಿದರು.

ಮೈಸೂರು, ನ.14(ಜಿಎ)–ಮಧುಮೇಹ ನಿಯಂತ್ರಣಕ್ಕೆ ನಡಿಗೆ ಮತ್ತು ದೈಹಿಕ ವ್ಯಾಯಾಮ ಉತ್ತಮ ಔಷಧಿ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಪ್ರಭಾರ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಸಲಹೆ ನೀಡಿದರು.

ರಿಸರ್ಚ್ ಸೊಸೈಟಿ ಫಾರ್ ದಿ ಸ್ಟಡಿ ಆಫ್ ಡಯಾಬಿಟಿಸ್ ಇನ್ ಇಂಡಿಯಾ ಕರ್ನಾಟಕ ಚಾಪ್ಟರ್ (ಕೆಆರ್‌ಎಸ್‌ಎಸ್‌ಡಿಐ), ಜೆಎಸ್‌ಎಸ್ ಹಾಗೂ ಅಸೋಸಿಯೇಷನ್ ಆಫ್ ಫಿಸಿಶಿಯನ್ಸ್ ಆಫ್ ಇಂಡಿಯಾ (ಎಪಿಐ) ವತಿಯಿಂದ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಾಕಥಾನ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದು ಡಾ. ಫ್ರೆಡೆರಿಕ್ ಬ್ಯಾಂಟಿಂಗ್ ಅವರ ಜನ್ಮದಿನಾಚರಣೆಯಾಗಿದ್ದು, ಇವರು ಸಕ್ಕರೆ ಖಾಯಿಲೆಗೆ ಇನ್ಸುಲಿನ್ ಕಂಡುಹಿಡಿದರು. ಅದರ ಪ್ರಯುಕ್ತ ಅವರ ಜನ್ಮದಿನವನ್ನು ವಿಶ್ವ ಆರೋಗ್ಯ ಸಂಸ್ಥೆಯು ವಿಶ್ವ ಮಧುಮೇಹ ದಿನವಾಗಿ ಆಚರಿಸಲಾಗುತ್ತದೆ. ವಾಕ ಥಾನ್‌ನಿಂದ ಸಾರ್ವಜನಿಕರಿಗೆ ಮತ್ತು ಮಧುಮೇಹಿಗಳಿಗೆ ಸಕ್ಕರೆ ಖಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಭಾರತದಲ್ಲಿ ಸುಮಾರು 10 ಕೋಟಿ ಜನರು ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದಾರೆ. ಇವರಲ್ಲಿ ಎಷ್ಟೋ ಜನರಿಗೆ ಸಕ್ಕರೆ ಖಾಯಿಲೆ ಇದೆ ಎಂಬುದರ ಬಗ್ಗೆಯೇ ಅರಿವು ಇಲ್ಲದೆ ಹಲವಾರು ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಎಂದರು.

ಸಕ್ಕರೆ ಖಾಯಿಲೆಯನ್ನು ನಿರ್ಲಕ್ಷ್ಯ ಮಾಡಬಾರದು. ಮುಂದೆ ಕಣ್ಣಿನ ಸಮಸ್ಯೆ, ಪಾರ್ಶ್ವವಾಯು, ಗ್ಯಾಂಗ್ರಿನ್ ಮತ್ತು ಹೃದಯಾಘಾತದಂತಹ ಸಮಸ್ಯೆಗಳಿಗೆ ತುತ್ತಾಗಬಹುದು. ಆದ್ದರಿಂದ ಆರಂಭದಲ್ಲಿ ಖಾಯಿಲೆಯನ್ನು ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಹಾಗೂ ವ್ಯಾಯಾಮ ಮತ್ತು ನಡಿಗೆಯಿಂದ ಅದನ್ನು ನಿಯಂತ್ರಿಸಬಹುದು ಎಂದು ತಿಳಿಸಿದರು.

ವಾಕ್‌ಥಾನ್‌ನಲ್ಲಿ ವೈದ್ಯಕೀಯ ಕಾಲೇಜು, ನರ್ಸಿಂಗ್ ಕಾಲೇಜು ಮತ್ತು ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗ ಭಾಗವಹಿಸಿ ಘೋಷವಾಕ್ಯಗಳೊಂದಿಗೆ ಮತ್ತು ಭಿತ್ತಿಚಿತ್ರವನ್ನು ಪ್ರದರ್ಶಿಸುತ್ತಾ ನಡಿಗೆಯು ಜೆಎಸ್‌ಎಸ್ ಆಸ್ಪತ್ರೆಯಿಂದ ಹೊರಟು ಜೆಎಸ್‌ಎಸ್ ಮಹಾವಿದ್ಯಾಪೀಠ ಮೂಲಕ ಸಂಸ್ಕೃತ ಕಾಲೇಜು ವೃತ್ತ, ಅಗ್ರಹಾರ ವೃತ್ತ ಮೂಲಕ ಹಿಂತಿರುಗಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಮೆಡಿಸನ್ ವಿಭಾಗದ ಮುಖ್ಯಸ್ಥ ಡಾ.ವೈ.ಎಸ್.ರವಿಕುಮಾರ್, ಪ್ರಾಧ್ಯಾಪಕ ಡಾ.ಶ್ರೀನಾಥ್, ಸಹ ಪ್ರಾಧ್ಯಾಪಕರಾದ ಡಾ.ಎಲ್.ಎಸ್. ಆದರ್ಶ್, ಡಾ.ಪಿ. ಅಶೋಕ್, ಡಾ.ಎಂ.ಸಿ. ಪ್ರಸಾದ್ ಹಾಗೂ ಆಸ್ಪತ್ರೆಯ ಎಲ್ಲಾ ವಿಭಾಗದ ಮುಖ್ಯಸ್ಥರು ಸಿಬ್ಬಂದಿ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನ.17, ಚಾಮುಂಡಿಬೆಟ್ಟದ ನಂದಿಗೆ ಮಹಾಭಿಷೇಕ



ಮೈಸೂರು, ನ.14(ಜಿಎ)– ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ನ.17ರ ಬೆಳಗ್ಗೆ 8 ಗಂಟೆಗೆ ಚಾಮುಂಡಿ ಬೆಟ್ಟದಲ್ಲಿರುವ ಬೆಟ್ಟದ ನಂದಿಗೆ ಮಹಾಭಿಷೇಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಗೋವಿಂದ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸೋಮನಾಥಾನಂದ ಸ್ವಾಮೀಜಿ ಹಾಗೂ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗಂಧ ಪಂಚಕಾಭಿಷೇಕ, ಫಂಚಾಮೃತಾಭಿಷೇಕ, ಫಲಪೂಜಾಮೃತ, ರಸ ಪಂಚಾಮೃತ, ಪಿಷ್ಟ ಪಂಚಕಾಭಿಷೇಕ ಸೇರಿದಂತೆ ವಿವಿಧ ಹಂತಗಳಲ್ಲಿ ಮಹಾ ಅಭಿಷೇಕ ನಡೆಯಲಿದ್ದು, ಹಾಲು, ಮೊಸರು, ತುಪ್ಪ, ಜೇನುತುಪ್ಪ, ಪಾಯಸ, ಬಾಳೆಹಣ್ಣು, ಗೋಧಿಹಿಟ್ಟು, ಎಳನೀರು, ಎಳ್ಳೆಣ್ಣೆ, ಅರಿಶಿನ, ಸಿಂಧೂರ, ಗಂಧ ಮೊದಲಾದವನ್ನು ಬಳಸಲಾಗುವುದು. ಬಳಿಕ ಪ್ರಸಾದ ವಿನಿಯೋಗವೂ ನಡೆಯಲಿದೆ ಎಂದು ತಿಳಿಸಿದರು.


ಬೆಟ್ಟದ ನಂದಿ ಮಾರ್ಗದ ದುರಸ್ತಿ ವಿಚಾರವಾಗಿ ಜಿಲ್ಲಾಡಳಿತ, ಪುರಾತತ್ವ ಇಲಾಖೆ ಸೇರಿದಂತೆ ಎಲ್ಲಾ ಅಧಿಕಾರಿಗಳ ಬಳಿ ಮನವಿ ಸಲ್ಲಿಸಿದ್ದು, ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರ ಬಳಿ ಮಾಹಿತಿ ಪಡೆದಾಗ ಅನುದಾನದ ಕೊರತೆಯಿಂದ ನಿಧಾನಗತಿಯಲ್ಲಿ ಕಾಮಗಾರಿ ಸಾಗುತ್ತಿದೆ ಎಂದು ಹೇಳಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಕಾಶ್, ಸುಂದರ್, ಶಂಕರ್, ಮಹದೇವ್ ಉಪಸ್ಥಿತರಿದ್ದರು.

ಶ್ರೀ ವೈಷ್ಣವ ಸಮಾವೇಶದ ಪೂರ್ವಭಾವಿ ಸಭೆ ಇಂದು

ಮೈಸೂರು,ನ.14–ಯತಿರಾಜ ಮಠದ ಜಗತ್ ಗುರುಗಳಾದ ಶ್ರೀ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್‌ರವರ ಆಶಯ ಹಾಗೂ ಸಂಕಲ್ಪದಂತೆ ಶ್ರೀ ಯತಿರಾಜ ಮಠ ಹಾಗೂ ಅಖಿಲ ಕರ್ನಾಟಕ ಶ್ರೀ ವೈಷ್ಣವ ಮಹಾಸಭಾ ವತಿಯಿಂದ ನ.24ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಶ್ರೀ ರಾಮಾನುಜ ವಿಶ್ವವಿಜಯೋತ್ಸವ ನಮ್ಮ ನಡೆ ರಾಮಾನುಜರೆಡೆಗೆ ಎಂಬ ವೇದ ವಾಕ್ಯದೊಂದಿಗೆ ನಡೆಯುತ್ತಿರುವ ಬೃಹತ್ ಶ್ರೀ ವೈಷ್ಣವ ಸಮಾವೇಶದ ಪೂರ್ವಭಾವಿ ಸಭೆಯನ್ನು ಸರಸ್ವತಿಪುರಂನಲ್ಲಿರುವ ನಾಳೆ (ನ.15) ಸಂಜೆ 5 ಗಂಟೆಗೆ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ವಿಪ್ರ ಮುಖಂಡರು ಹಾಗೂ ಶ್ರೀವೈಷ್ಣವ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯಕಾರಿ ಸಮಿತಿ ಎಲ್ಲಾ ಪದಾಧಿಕಾರಿಗಳು ಮತ್ತು ಯುವ ಮುಖಂಡರು ಸಭೆಗೆ ಆಗಮಿಸಿ ಸಮಾವೇಶದ ಸಲಹೆಗಳನ್ನು ನೀಡಬೇಕೆಂದು ಸಮಾವೇಶದ ಸಂಚಾಲಕ ಪುಟ್ಟಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾನು ಸೋತರೆ ಜನ ಪಕ್ಷಾಂತರ ಮಾಡಿದ್ದನ್ನು ಒಪ್ಪಲಿಲ್ಲ ಅಂದ್ಕೋಬೇಕಾಗುತ್ತೆ...

ಮತದಾನದ ಮಾರನೇ ದಿನವೇ ಚನ್ನಪಟ್ಟಣದ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಅಚ್ಚರಿ ಹೇಳಿಕೆ; ಜಮೀರ್ ಮಾತಿಗೆ ಖಂಡನೆ



ಚನ್ನಪಟ್ಟಣ, ನ.14– ಚನ್ನಪಟ್ಟಣ ವಿಧಾನಸಭಾ ಉಪ ಚುನಾವಣೆ ಮುಗಿದ ಮಾರನೇ ದಿನವೇ ಕಾಂಗ್ರೆಸ್ ಅಭ್ಯರ್ಥಿ ಸಿಪಿ ಯೋಗೇಶ್ವರ್ ಗೆಲ್ಲುವ ವಿಶ್ವಾಸಕ್ಕಿಂತ ಹಿನ್ನೆಡೆಗೆ ಕಾರಣಗಳೇನು ಎಂಬ ಬಗ್ಗೆ ಮಾತನಾಡಿದ್ದಾರೆ. ಫಲಿತಾಂಶ ಹೀಗೋ ಹಾಗೋ ಆಗಿರಬಹುದು ಎಂದು ಹೇಳಿದ್ದಾರೆ. ಮಾತ್ರವಲ್ಲದೇ, ಸೋತರೆ ನಾನು ಪಕ್ಷಾಂತರ ಮಾಡಿದ್ದು ಒಂದು ಪ್ರಮುಖ ಕಾರಣವಾಗಿರಬಹುದು ಎಂದಿದ್ದಾರೆ.

ಚನ್ನಪಟ್ಟಣದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಸಿ.ಪಿ.ಯೋಗೇಶ್ವರ್, ಚುನಾವಣೆ ಸೋತರೆ ನಾನು ಪಕ್ಷಾಂತರ ಮಾಡಿದ್ದು ಜನ ಒಪ್ಪಲಿಲ್ಲ. ಪಕ್ಷಗಳನ್ನು ಆಗಾಗ ಬದಲಾವಣೆ ಮಾಡಿದ್ದಕ್ಕೆ ತಿರಸ್ಕಾರ ಮಾಡಿದ್ದಾರೆ ಎಂದುಕೊಳ್ಳಬಹುದು. ಜತೆಗೆ ಕಾಂಗ್ರೆಸ್‌ನ ವರ್ಚಸ್ಸು ಏನೂ ಇಲ್ಲ ಅಂದುಕೊಳ್ಳಲೂಬಹುದು ಎಂದು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಮುಖಂಡರಿಗೆ ಧನ್ಯವಾದ ತಿಳಿಸುತ್ತೇನೆ. ನನಗಾಗಿ ಈ ಚುನಾವಣೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಸೇರಿ ಹಲವು ಸಚಿವರು ಕೆಲಸ ಮಾಡಿದ್ದಾರೆ. ಸಾಕಷ್ಟು ಶಾಸಕರು ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಡಿ.ಕೆ ಸುರೇಶ್ ವಿಶೇಷವಾಗಿ ಕೆಲಸ ಮಾಡಿದ್ದಾರೆ. ನನ್ನ ರಾಜಕೀಯ ಜೀವನದ ದೊಡ್ಡ ಚುನಾವಣೆ ಇದು. ಇಷ್ಟೊಂದು ತೀವ್ರತೆ ಪಡೆಯುತ್ತೆ ಅಂದುಕೊಂಡಿರಲಿಲ್ಲ ಎಂದು ಹೇಳಿದ್ದಾರೆ.

ಇದು ಕುಮಾರಸ್ವಾಮಿ ಅವರಿಂದ ತೆರವಾದ ಕ್ಷೇತ್ರ, ಕುಟುಂಬಕ್ಕೆ ಉಳಿಸಿಕೊಳ್ಳಲು ಅವರು ಮುಂದಾದರು. ರಾಜಕೀಯ ಧುರೀಣ ದೇವೇಗೌಡರು ಮೊಮ್ಮಗನ ಗೆಲ್ಲಿಸುವ ಶಪಥ ಮಾಡಿದರು. ಕೇಂದ್ರ ಸಚಿವ ಕುಮಾರಸ್ವಾಮಿ ಪುತ್ರನನ್ನು ಗೆಲ್ಲಿಸಿಕೊಂಡು ಕ್ಷೇತ್ರ ಉಳಿಸಿಕೊಳ್ಳಲು ಹೋರಾಟ ಮಾಡಿದರು. ಎರಡು ಕಡೆಯೂ ಸಮಬಲದ ಹೋರಾಟ ಇದೆ. ಆದರೂ ಕೆಲವು ಸ್ಟೇಟ್‌ಮೆಂಟ್ ಹಾಗೂ ಮಾತುಗಳು ಜನರ ಭಾವನೆಗೆ ಘಾಸಿ ಮಾಡಿದೆ ಎಂದು ಬೇಸರ ಹೊರಹಾಕಿದ್ದಾರೆ.

ದೇವೇಗೌಡರು ದೈತ್ಯ ಶಕ್ತಿ. ಅವರಿಗೆ ಬೈದರೆ ಸಹಿಸಿಕೊಳ್ಳದ ಸಮುದಾಯ ಇದೆ. ಅವರೆಲ್ಲಾ ಒಟ್ಟಾಗಿ ನಮಗೆ ತೊಂದರೆ ಆಗಿದೆ. ಆರಂಭದಲ್ಲಿ ಸಮಬಲದ ಹೋರಾಟ ಇತ್ತು. ಆದರೂ, ಎಲ್ಲೋ ಒಂದು ಕಡೆ ಕೆಲವು ಹೇಳಿಕೆಗಳು ಒಂದಿಷ್ಟು ಜನರ ಭಾವನೆಗೆ ಹಾನಿ ಮಾಡಿದೆ. ಜಮೀರ್ ಹೇಳಿಕೆಯಿಂದ ಒಂದಿಷ್ಟು ಲಾಭವೂ ಆಗಿದೆ ನಷ್ಟವೂ ಆಗಿದೆ. ಮುಸ್ಲಿಂ ಮತಗಳನ್ನು ಸೆಳೆದರೆ, ಇನ್ನೊಂದು ಸಮುದಾಯಕ್ಕೆ ನೋವಾಗಿ ಮತ ಬಂದಿಲ್ಲದಿರಬಹುದು ಎಂದು ಹೇಳಿದ್ದಾರೆ.

ಜಮೀರ್ ಮಾತಿಗೆ ಖಂಡನೆ: ಜಮೀರ್ ಮಾತನ್ನು ವೈಯಕ್ತಿಕವಾಗಿ ಖಂಡಿಸುತ್ತೇನೆ. ಸಮುದಾಯಕ್ಕೆ ಹಾನಿಯಾಗಿದೆ. ಜೆಡಿಎಸ್‌ನವರು ನನಗೆ ಮತ ಹಾಕಬೇಕು ಎಂದು ಇದ್ದರು. ಆದರೆ, ಜಮೀರ್ ಅವರ ಹೇಳಿಕೆಯಿಂದ ಒಟ್ಟಾಗಿ ಮತ್ತೆ ಜೆಡಿಎಸ್‌ಗೆ ಮತ ಹಾಕಿದ್ದಾರೆ. ನನಗೆ ಹಿನ್ನಡೆಯಾಗಿದೆ ಎಂದು ಯೋಗೇಶ್ವರ್ ಹೇಳಿದರು.

ನಾನು ಕಾನ್ಫಿಡೆನ್ಸ್ ಕಳೆದುಕೊಂಡಿಲ್ಲ. ದೈತ್ಯ ಶಕ್ತಿ, ಒಕ್ಕಲಿಗರ ಬೆಂಬಲ ಇರುವ ವಂಶದ ಕುಡಿ ನನ್ನ ವಿರುದ್ಧ ಸ್ಪರ್ಧೆ ಮಾಡಿದೆ. ಕಳೆದ ಚುನಾವಣೆ ಕಾಂಗ್ರೆಸ್ ಪಡೆದ ಮತ 15 ಸಾವಿರ. ಈಗ ನಾವು ಒಂದು ಲಕ್ಷಕ್ಕಿಂತ ಅಧಿಕ ಮತ ಪಡೆದರೆ ಗೆಲುವು ಸಿಗುತ್ತದೆ. ಈವರೆಗೂ ನನ್ನ ಎಲ್ಲಾ ಚುನಾವಣೆಯಲ್ಲೂ 80 ರಿಂದ 90 ಸಾವಿರ ಮತಗಳ ಪಡೆಯುತ್ತಿದ್ದೆ. ಈಗ ಕಾಂಗ್ರೆಸ್ ಅಭ್ಯರ್ಥಿ ಆಗಿದ್ದೇನೆ. ಬಿಜೆಪಿ–ಜೆಡಿಎಸ್ ಎರಡರ ಮೈತ್ರಿ ಇಲ್ಲಿ ವರ್ಕ್ ಆಗಬಹುದು. ಹಾಗಂತ ಹತಾಶೆ ಇಲ್ಲ, ಸಮಬಲದ ಹೋರಾಟ ಅಷ್ಟೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಕುಮಾರಸ್ವಾಮಿ ಅವರೇ ನಾನು ಕಾಂಗ್ರೆಸ್ ಸೇರುವ ಅನಿವಾರ್ಯ ಸ್ಥಿತಿಯನ್ನು ನಿರ್ಮಾಣ ಮಾಡಿದರು. ನಾನು ಕಟ್ಟಿದ ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಸೇರುವ ಪರಿಸ್ಥಿತಿ ಬಂತು. ನಾನು ಹಿಂದೆ ಗೆದ್ದಿದ್ದು ಬಿಟ್ಟರೆ ಇಲ್ಲಿ ಕಾಂಗ್ರೆಸ್‌ಗೆ ಅಸ್ತಿತ್ವ ಇರಲಿಲ್ಲ. ಈಗ ಕಡಿಮೆ ಸಮಯದಲ್ಲಿ ನಾನು ಸಂಘಟನೆ ಮಾಡಿದ್ದೇನೆ. ನನ್ನ ರಾಜಕೀಯ ಜೀವನ ಒಂಥರಾ ಐಪಿಎಲ್ ಮ್ಯಾಚ್ ರೀತಿ ಆಗಿದೆ. ಒಂದೊಂದು ಸೀಸನ್‌ನಲ್ಲಿ ಒಂದೊಂದು ಟೀಮ್‌ನಲ್ಲಿ ಆಟ ಆಡುವಂತಾಗಿದೆ. ದೇವೇಗೌಡರಿಗೆ, ಕುಮಾರಸ್ವಾಮಿಗೆ ಬೈದರೆ ಸಹಿಸದ ಸಮುದಾಯ ಇದೆ. ಅವರನ್ನು ಮಾತ್ರ ಸಮುದಾಯದ ನಾಯಕ ಎಂದು ಗುರುತಿಸುತ್ತಾರೆ. ನಮ್ಮನ್ನು ಸಮುದಾಯದ ಲೀಡರ್ ಅಂತ ಯಾವಾಗ ಸ್ವೀಕಾರ ಮಾಡ್ತಾರೋ ಗೊತ್ತಿಲ್ಲ ಎಂದು ನುಡಿದಿದ್ದಾರೆ.

ಮೈಸೂರಿಗೆ ಕಪ್ಪುಚುಕ್ಕೆ ಇಟ್ಟ ಮುಡಾ!

ಯಾರದೋ ಭೂಮಿ, ಮತ್ತಾರಿಗೋ ನಿವೇಶನ ಮಂಜೂರು

ಎಸ್.ಟಿ.ರವಿಕುಮಾರ್

ಮೈಸೂರು, ನ.14– ಅಧಿಕೃತವಾಗಿ ನಿಯಮಾನುಸಾರ ಭೂ ಸ್ವಾಧೀನ ಪ್ರಕ್ರಿಯೆಗೊಳಪಡಿಸದೆ ವಸತಿ ಬಡಾವಣೆಗಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಬಳಸಿಕೊಂಡಿದ್ದ ಭೂಮಿಗೆ ಪರಿಹಾರಾತ್ಮಕವಾಗಿ ಅಭಿವೃದ್ಧಿಪಡಿಸಿದ ಪ್ರತಿಷ್ಠಿತ ಬಡಾವಣೆಗಳಲ್ಲಿ ಕೋಟ್ಯಾಂತರ ರೂ. ಬೆಲೆಬಾಳುವ ಸುಮಾರು 5ರಿಂದ 6 ಸಾವಿರ ನಿವೇಶನಗಳನ್ನು ಮಂಜೂರು ಮಾಡಿರುವ ಹಗರಣ ಸಂಬಂಧ ಈಗಾಗಲೇ ಹಲವು ಸಂಸ್ಥೆಗಳು ತನಿಖೆ ನಡೆಸುತ್ತಿವೆ.

ಶೇ.50:50ರಡಿ, ಪ್ರೋತ್ಸಾಹದಾಯಕ ಯೋಜನೆಯನ್ವಯ ಯಾವ ಭೂ ಮಾಲೀಕನಿಗೆ ಪರಿಹಾರ ನೀಡಿಲ್ಲವೋ ಅವರಿಗೆ ಅದೇ ಸಮಾನಾಂತರ ಬಡಾವಣೆಗಳಲ್ಲಿ ನಿವೇಶನಗಳನ್ನು ಕೊಡುವಂತೆ ಸರ್ಕಾರ ನಿರ್ಣಯ ಕೈಗೊಂಡಿದ್ದನ್ನೇ ನೆಪ ಮಾಡಿಕೊಂಡು ಸುಮಾರು 30 ವರ್ಷಗಳ ಹಿಂದೆ ಮುಡಾ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ನಿಯಮಾವಳಿಗಾಳಿಗೆ ತೂರಿ ಕಂಡಕಂಡವರಿಗೆ ಈ ಹಿಂದಿನ ಆಯುಕ್ತರು ನಿವೇಶನಗಳನ್ನು ಹಂಚಿರುವುದು ಈ ಜಗಜ್ಜಾಹೀರಾಗಿದೆ. ಇತ್ತೀಚೆಗಷ್ಟೇ ರಾಜೀನಾಮೆ ನೀಡಿದ್ದ ಮಾಜಿ ಮುಡಾ ಅಧ್ಯಕ್ಷ ಕೆ.ಮರೀಗೌಡ ಅವರು **'ಶೇ. 50:50ರಡಿ ನಿವೇಶನ ಮಂಜೂರು ಕಾನೂನು ಬಾಹಿರ. ಈ ವಿಚಾರವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಅನುಮೋದನೆ ಪಡೆದ ಬಳಿಕ ಸರ್ಕಾರಕ್ಕೆ ಕಳುಹಿಸಿ ಅನುಮತಿ ಪಡೆದ ನಂತರವಷ್ಟೇ ಈ ಪ್ರಕ್ರಿಯೆ ನಡೆಸಬೇಕು. ಇಲ್ಲಿವರೆಗೆ ಮಂಜೂರು ಮಾಡಿರುವ ನಿವೇಶನಗಳ ಮಾಹಿತಿಯೊಂದಿಗೆ ದಾಖಲಾತಿಗಳನ್ನು ನನ್ನ ಕಚೇರಿಗೆ ಸಲ್ಲಿಸಿ, ವಿವರಣೆ ನೀಡುವಂತೆ'** ಅಂದಿನ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರಿಗೆ **ಆಂತರಿಕ ಟಿಪ್ಪಣಿ** ಬರೆದು ಅದರ ಪ್ರತಿಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರಿಗೂ ರವಾನಿಸಿದ್ದರು. ಈ ಮೂಲಕ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗಿತ್ತು. ಜೊತೆಗೆ ಮುಡಾ ಪ್ರಭಾರ ಅಧ್ಯಕ್ಷರಾಗಿದ್ದ ಅಂದಿನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಹ ನಿಯಮಬಾಹಿರವಾಗಿ ಮುಡಾ ನಿವೇಶನ ಹಂಚಿಕೆ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೋರಿದ್ದನ್ನು ಸ್ಮರಿಸಬಹುದು.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ತಾಂತ್ರಿಕ ಸಮಿತಿಯೊಂದನ್ನು ರಚಿಸಿ ವರದಿ ತರಿಸಿಕೊಂಡಿತ್ತು. ಅದರಲ್ಲೂ ಮುಡಾದಲ್ಲಿ ಶೇ. 50:50ರ ಅನುಪಾತದಡಿ ನಿವೇಶನಗಳನ್ನು ಮಂಜೂರು ಮಾಡುತ್ತಿರುವುದು ಕಾನೂನಿಗೆ ವಿರುದ್ಧ ಎಂದು ವರದಿ ನೀಡಿತ್ತು. ಅಲ್ಲದೆ, ನಗರಾಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಅಧಿಕಾರಿಗಳ ಮತ್ತೊಂದು ಸಮಿತಿಯು ಮೈಸೂರಿಗೆ ಬಂದು ಮುಡಾ ಕಚೇರಿಯಲ್ಲಿ ಒಂದು ವಾರ ಕಾಲ ದಾಖಲಾತಿಗಳನ್ನು ಜಾಲಾಡುತ್ತಿರುವಾಗಲೇ ಸರ್ಕಾರವು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗವನ್ನೂ ರಚಿಸಿ, ಬೆಂಗಳೂರಿನ ಕುಮಾರಕೃಪಾ ಅತಿಥಿಗೃಹದಲ್ಲಿ ಕಚೇರಿ ಕಲ್ಪಿಸಿ ತನಿಖೆ ನಡೆಸುತ್ತಿದೆ.

ಈ ಮಧ್ಯೆ ಆರ್‌ಟಿಐ ಕಾರ್ಯಕರ್ತರಾದ ಸ್ನೇಹಮಯಿ ಕೃಷ್ಣ ಹಾಗೂ ಅಬ್ರಹಾಂ ದೂರು ಆಧರಿಸಿ ಮುಖ್ಯಮಂತ್ರಿ ವಿಚಾರಣೆಗೆ ರಾಜ್ಯಪಾಲರ ಅನುಮತಿ, ಹೈಕೋರ್ಟ್ ಹಾಗೂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಗಳ ಆದೇಶದನ್ವಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಮಂಜೂರು ಮಾಡಿರುವ 14 ನಿವೇಶನಗಳ ಕುರಿತಂತೆ ಲೋಕಾಯುಕ್ತ ಮೈಸೂರು ಎಸ್‌ಪಿ ಉದೇಶ್ ನೇತೃತ್ವದಲ್ಲಿ ಎಫ್‌ಐಆರ್ ದಾಖಲಾಗಿ, ತನಿಖೆಯೂ ನಡೆಯುತ್ತಿದೆ. ಜಾರಿ ನಿರ್ದೇಶನಾಲಯ (ಇಡಿ)ವೂ ಈ ಹಗರಣದ ತನಿಖೆಗಿಳಿದಿದ್ದು, ಮುಡಾ ಕಚೇರಿ ಸೇರಿದಂತೆ ಕೆಲ ಅಧಿಕಾರಿಗಳು, ಜನಪ್ರತಿನಿಧಿಗಳ ಮನೆ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲಿಸಿದೆ. ಒಬ್ಬೊಬ್ಬರಾಗಿ ಸಮನ್ಸ್ ನೀಡಿ ಬೆಂಗಳೂರಿನ ಕಚೇರಿಗೆ ವಿಚಾರಣೆಗೆ ಕರೆಸಿಕೊಳ್ಳುತ್ತಿದೆ.

ಆದರೆ ಈ ಹಗರಣದಲ್ಲಿ ಶೇ. 50:50ರ ಅನುಪಾತದಡಿಯ ಫಲಾನುಭವಿಗಳು ಎಷ್ಟೆಷ್ಟು ನಿವೇಶನಗಳನ್ನು ಪಡೆದಿದ್ದಾರೆ ಎಂಬುದನ್ನು ಗಮನಿಸಿದರೆ ಆಘಾತವಾಗುತ್ತದೆ. ಮೈಸೂರಿನಲ್ಲೇ ಹುಟ್ಟಿ ಬೆಳೆದರೂ, ಸೂರಿನ ಕನಸು ಹೊತ್ತು ಮುಡಾಗೆ ಅರ್ಜಿ ಹಾಕಿ ಕಳೆದ ಸುಮಾರು 30–35 ವರ್ಷಗಳಿಂದ ಕಾಯುತ್ತಿರುವ 80 ಸಾವಿರ ಮಂದಿ ಪೈಕಿ ಶೇ.20ರಷ್ಟು ಅರ್ಜಿದಾರರು ಇನ್ನಿಲ್ಲವಾಗಿದ್ದಾರೆ. ಸೂರಿಲ್ಲದ ಒಬ್ಬ ಈ ಸಾಮಾನ್ಯನಿಗೆ ಆಶ್ರಯ ಕಲ್ಪಿಸಲು ಯೋಗ್ಯತೆ ಇಲ್ಲದ ಮುಡಾ ಇಂದು ಒಬ್ಬೊಬ್ಬರಿಗೆ 30, 40, 80, 100 ನಿವೇಶನಗಳನ್ನು ಪ್ರತಿಷ್ಠಿತ ಬಡಾವಣೆಯಲ್ಲಿ ಮಂಜೂರು ಮಾಡಿರುವುದು ಮೈಸೂರು ಇತಿಹಾಸಕ್ಕೆ ಮಸಿ ಬಳಿದಂತಾಗಿದೆ.

ಶೇ.50:50ರ ಅನುಪಾತದಡಿ 10ಕ್ಕಿಂತ ಹೆಚ್ಚು ನಿವೇಶನ ಮಂಜೂರಾದವರ ಪಟ್ಟಿ ಇದು

ಮಂಜೂರಾತಿದಾರರ ಹೆಸರು, ವಿಳಾಸ	ನಿವೇಶನಗಳ ಸಂಖ್ಯೆ	ಬಡಾವಣೆ	ಗ್ರಾಮ	ಸರ್ವೆ ನಂಬರ್
ನಾಗರಾಜು ಮತ್ತು ಶ್ರೀನಿವಾಸ್, ಬೋಗಾದಿ	23	ವಿಜಯನಗರ 4ನೇ ಹಂತ	ಬೋಗಾದಿ	170,171,172 2ನೇ ಘಟ್ಟ
ಶಿವಪ್ಪ ಬಿನ್ ಲೇಟ್ ಪುಟ್ಟಬಸಪ್ಪ	13	ನಾಚನಹಳ್ಳಿ 1, 2ನೇ ಹಂತ	ನಾಚನಹಳ್ಳಿ	22/3
ಪಿ.ಮಹದೇವು ಮತ್ತು ಗೀತಾ	12	ನಾಚನಹಳ್ಳಿ 1ನೇ ಹಂತ ಡಿ–ಬ್ಲಾಕ್	ಕ್ಯಾತಮಾರನಹಳ್ಳಿ	69/2
ಅಬ್ದುಲ್ ವಾಜಿದ್ ಬಿನ್ ಪೀರ್‌ಸಾಬ್	26	ನಾಚನಹಳ್ಳಿ 2ನೇ ಹಂತ	ಬೆಲವತ್ತ	21
ಸಯ್ಯದ್ ಯೂಸೂಫ್	21	ನಾಚನಹಳ್ಳಿ 1, 2ನೇ ಹಂತ	ವೀರನಗೆರೆ	85/1
ಮಲ್ಲಪ್ಪ	19	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ ಸಿ–ಬ್ಲಾಕ್	ದೇವನೂರು	8/3ಬಿ, ಸಿ
ಸುರೇಶಮ್ಮ	11	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ ಬಿ–ಬ್ಲಾಕ್	ದೇವನೂರು	72
ರೆಘಾ। ಸ್ಟಾನಿ ಡಿ.ಅಲಮೇಡ, ಕಾರ್ಯದರ್ಶಿ ಮೆ॥ ಕ್ಯಾಥೆಡ್ರೆಲ್ ಪ್ಯಾರಿಸ್ ಸೊಸೈಟಿ	23	ನಾಚನಳ್ಳಿ–ಕುಪ್ಪಲೂರು 3ನೇ ಹಂತ ಎ–ವಲಯ	ದೇವನೂರು	180,181, 182
ಸಯ್ಯದ್ ನುಸ್ರುತ ಅಫ್ಜ, ಸೈಯ್ಯದ್ ಶಕೀರ್ ಉರ್ ಅಹಮದ್	25	ಜೆ.ಪಿ.ನಗರ 1ನೇ ಹಂತ ಎ–ಬ್ಲಾಕ್, ವಿಜಯನಗರ 4ನೇ ಹಂತ, 2ನೇ ಘಟ್ಟ	ಕ್ಯಾತಮಾರನಹಳ್ಳಿ	5
ಎಸ್.ವಿ.ವೆಂಕಟಪ್ಪ	14	ಶ್ರೀರಾಂಪುರ, 3ನೇ ಹಂತ	ಶ್ರೀರಾಂಪುರ	92/3, 92/4 ಮತ್ತು ಇತರೆ
ಆಲನಹಳ್ಳಿ ಗೃಹ ನಿರ್ಮಾಣ ಸಹಕಾರ ಸಂಘ	10	ಶ್ರೀರಾಂಪುರ 3ನೇ ಹಂತ,	ಶ್ರೀರಾಂಪುರ	222/1, 21/2
ಮಹೇಂದ್ರ, ಗುಂಗ್ರಾಲ್ ಛತ್ರ	21	ವಿಜಯನಗರ 3ನೇ ಹಂತ, ಬಿ ಮತ್ತು ಸಿ–ಬ್ಲಾಕ್	ದೇವನೂರು	81/2
ಬಿ.ಎಂ.ಪಾರ್ವತಿ ಕೋಂ ಸಿದ್ದರಾಮಯ್ಯ, ನಂ.206, 16ನೇ ಕ್ರಾಸ್, ವಿಜಯನಗರ ಬೆಂಗಳೂರು	14	ವಿಜಯನಗರ 2, 3, 4ನೇ ಹಂತ	ಕೆಸರೆ	464
ಎಂ.ಬಿ.ಶ್ರೀನಿವಾಸ್	10	ವಿಜಯನಗರ 3ನೇ ಹಂತ ಎ1–ಬ್ಲಾಕ್	ಹಿನಕಲ್	206/1ಬಿ
ಮೇರಿ ಜೋಸ್ ಮತ್ತು ಜೋಸ್ ಕೊರಿಯನ್, ಸಿದ್ದಾಪುರ, ಮಾಲ್ದಾರೆ, ಕೊಡಗು	10	ವಿಜಯನಗರ 4ನೇ ಹಂತ	ಹಿನಕಲ್	220/4, 226/ಎ
ಸರೋಜಮ್ಮ, ನಂ.4, ದೊಡ್ಡಗರುಡಿ ರಸ್ತೆ, ಅಂಬೇಡ್ಕರ್ ಕಾಲೋನಿ, ಕ್ಯಾತಮಾರನಹಳ್ಳಿ, ಮೈಸೂರು	10	ವಿಜಯನಗರ 4ನೇ ಹಂತ ಎರಡನೇ ಘಟ್ಟ	ದೇವನೂರು	216/1
ದೀಪು ರಾಜೇಂದ್ರ ಬಿನ್ ಲೇಟ್ ರಾಜೇಂದ್ರ ಶರ್ಮಾ, ಮುಡಿಗುಂಡ, ಕೊಳ್ಳೇಗಾಲ ತಾಲೂಕು	14	ವಿಜಯನಗರ 2ನೇ ಹಂತ	ಕುರುಬಾರಹಳ್ಳಿ	4 ಬ್ಲಾಕ್ 61/1
ನೀಲಮ್ಮ ಬಿನ್ ಲೇಟ್ ಮಾದಪ್ಪ, ಮಂಜೇಶ್ ಬಿನ್ ಲೇಟ್ ಶಿವನಂಜಪ್ಪ, ಬಸವಣ್ಣ ಬಿನ್ ಬಸವಣ್ಣ, ಸುತ್ತೂರು ಮುಖ್ಯ ರಸ್ತೆ, ವರುಣ ಹೋಬಳಿ	17	ದೇವನೂರು 3ನೇ ಹಂತ	ಕೆಸರೆ	446, 450, 457
ಎ.ಪಿ.ಶಿವಪ್ರಸಾದ್ ಮತ್ತು ಬಿ.ಆರ್.ವಿಷ್ಣು ಮೆ॥ ಎಸ್&ವಿ ಇಂಡಸ್ಟ್ರೀಸ್, ಕೆಆರ್‌ಎಸ್ ರಸ್ತೆ ಮೇಟಗಳ್ಳಿ	24	ಲಲಿತಾದ್ರಿ ನಗರ ಉತ್ತರ	ಮೇಟಗಳ್ಳಿ ಕೈಗಾರಿಕಾ ಬಡಾವಣೆ	
ಪಿ.ಸಂತೋಷ್ ಕುಮಾರ್ ಮಂಚಮ್ಮ ದೇವಸ್ಥಾನದ ಬಳಿ, ಮೇಟಗಳ್ಳಿ	18	ಲಲಿತಾದ್ರಿ ನಗರ ದಕ್ಷಿಣ	ಹೆಬ್ಬಾಳು	88/2
ಎಲ್.ವಿವೇಕಾನಂದ, ಜೆ.ಟಿ.ಕೊಪ್ಪಲು ಸಿ&ಡಿ ಬ್ಲಾಕ್, ವಿಶ್ವಮಾನವ ಜೋಡಿ ರಸ್ತೆ ಕುವೆಂಪುನಗರ, ಮೈಸೂರು	12	ಆರ್.ಟಿ.ನಗರ, ವಸಂತನಗರ	ಆಲನಹಳ್ಳಿ	75/2
ಸಿ.ಮಹದೇವಸ್ವಾಮಿ, ದೂರ ಗ್ರಾಮ, 2ನೇ ಬ್ಲಾಕ್, ಜಯಪುರ ಹೋಬಳಿ, ಮೈಸೂರು ತಾ.	10	ಹಂಚ್ಯಾ–ಸಾತಗಳ್ಳಿ, ಬಿ–ವಲಯ	ಕೆಸರೆ	415

ಅಬ್ದುಲ್ ಅಜೀಜ್ ಹುಟ್ಟುಹಬ್ಬ ಆಚರಣೆ





ಮೈಸೂರಿನ ಬನ್ನಿಮಂಟಪದ ಮಿಲನ್ ಕನ್ವೆಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರಿಗೆ ಶಾಸಕ ಕೆ.ಹರೀಶ್‌ಗೌಡ ಶುಭ ಕೋರಿದರು. ಮತ್ತೊಂದು ಚಿತ್ರದಲ್ಲಿ ಗಾಂಧಿನಗರದ ಯುವಕರು ಅಬ್ದುಲ್ ಅಜೀಜ್ ಅವರಿಗೆ ಬೃಹತ್ ಸೇಬಿನ ಹಾರ ಹಾಕಿದರು.

ಮೈಸೂರು, ನ.14(ಜಿಎ)–ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮೊದಲು ಶ್ರೀರಂಗಪಟ್ಟಣದಲ್ಲಿರುವ ಟಿಪ್ಪು ಸುಲ್ತಾನ್ ಸಮಾಧಿಗೆ ಅಭಿಮಾನಿಗಳೊಂದಿಗೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ನಂತರ ನಗರದ ವಿವಿಧೆಡೆ ಕಾರ್ಯಕರ್ತರು ಅಭಿಮಾನಿಗಳು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಗಾಂಧಿನಗರದ ಯುವಕರು ಬೃಹತ್ ಸೇಬಿನ ಹಾರ ಹಾಕಿ ಶುಭ ಕೋರಿದರು. ಬನ್ನಿಮಂಟಪದ ಮಿಲನ್ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ, ಪಾಲಿಕೆ ಮಾಜಿ ಸದಸ್ಯ ಮಹದೇಶ್, ಉದ್ಯಮಿ ಪ್ರದೀಪ್‌ಸಿಂಗ್, ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಮಂಜು, ಮಾರ್ಕೆಟ್ ಸಂದೀಪ್ ಸೇರಿದಂತೆ ಉದ್ಯಮಿಗಳು ಅಬ್ದುಲ್ ಅವರಿಗೆ ಶುಭ ಕೋರಿದರು.

ತಾಂತ್ರಿಕ ವರದಿಯನ್ವಯ ಸ್ಯಾಂಜೋ ಆಸ್ಪತ್ರೆಯ ಹಿಂಭಾಗ

ಸಾಹಿತ್ಯ ಸಮ್ಮೇಳನಕ್ಕೆ ಸ್ಥಳ ನಿಗದಿ



ಮಂಡ್ಯ,ನ.14– ಸಮ್ಮೇಳನಕ್ಕೆ ಸೂಕ್ತವಾದ, ವಿಶಾಲವಾದ ಹಾಗೂ ಸುರಕ್ಷಿತವಾದ ಸ್ಥಳದ ಅಗತ್ಯವಿದ್ದು, ಅದಕ್ಕಾಗಿ ಹಲವಾರು ಸ್ಥಳಗಳನ್ನು ಪರಿಶೀಲಿಸಿ, ಜೊತೆಗೆ ಸ್ಥಳ ಪರಿಶೀಲನೆಗೆ ತಾಂತ್ರಿಕ ಪರಿಣಿತರ ತಂಡದ ಮೂಲಕ ಜಾಗಗಳ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಂಡು, ಅಂತಿಮವಾಗಿ ಸಮ್ಮೇಳನ ನಡೆಸಲು ರಾಷ್ಟ್ರೀಯ ಹೆದ್ದಾರಿ–275ಕ್ಕೆ ಹೊಂದಿಕೊಂಡಂತೆ ಇರುವ ಸಾಂಜೋ ಆಸ್ಪತ್ರೆ ಹಿಂಭಾಗದ ಜಾಗವನ್ನು ಡಿ.20, 21 ಮತ್ತು 22ರಂದು ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸೂಕ್ತವೆಂದು ಗುರುತಿಸಿ, ಅಂತಿಮಗೊಳಿಸಲಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲೆಯಲ್ಲಿ ಆಚರಿಸುವ ನುಡಿ ಜಾತ್ರೆಯು ಬರಿ ನಾಡಿನ ಹಬ್ಬವಲ್ಲ ನಮ್ಮ ಮನೆ ಮನೆಯ ಹಬ್ಬವಾಗಬೇಕು. ಎಲ್ಲರೂ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಾಹಿತ್ಯ ಸಮ್ಮೇಳನಕ್ಕೆ ಮತ್ತಷ್ಟು ಮೆರುಗನ್ನು ತರಬೇಕು ಎಂಬುದೇ ಆಶಯ ಎಂದು ತಿಳಿಸಿದ್ದಾರೆ.

ಕನ್ನಡದ ಐಕ್ಯತೆಯ ದ್ಯೋತಕವಾಗಿ ನಮ್ಮ ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಚರಿಸುತ್ತಾ ಬರಲಾಗುತ್ತಿದ್ದು, ನಾಡು–ನುಡಿಯ ಬಗೆಗಿನ ಅಭಿಮಾನವನ್ನು ಜನಮನದಲ್ಲಿ ಸದಾ ಕಾಲ ಚೈತನ್ಯಶೀಲವಾಗಿಡಲು ಕನ್ನಡ ಸಾಹಿತ್ಯ ಸಮ್ಮೇಳನ ಸಹಕರಿಯಾಗಲಿದೆ ಸಹಕಾರಿಯಾಗಿದೆ ಎಂದು ಹೇಳಿದ್ದಾರೆ.

ಅತಿ ಹೆಚ್ಚು ಕನ್ನಡ ಮಾತನಾಡುವ ಜನರಿರುವ ಖ್ಯಾತಿ ಇರುವ ನಮ್ಮ ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಇದೇ ಡಿಸೆಂಬರ್ 20, 21 ಮತ್ತು 22ರಂದು ಆಚರಿಸುವ ಅವಕಾಶ ಲಭಿಸಿರುವುದು ನಾವೆಲ್ಲರೂ ಸಂಭ್ರಮಿಸಬೇಕಾದ ವಿಷಯವಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಕಾರ್ಯಚಟುವಟಿಕೆಗಳು ಪ್ರಾರಂಭವಾಗಿವೆ. ಸಮ್ಮೇಳನವನ್ನು ಯಶಸ್ವಿಯಾಗಿ ನಿರ್ವಹಿಸುವ ದೃಷ್ಟಿಯಲ್ಲಿ 28 ಸಮಿತಿಗಳನ್ನು ರಚಿಸಿದ್ದು, ಎಲ್ಲಾ ಸಮಿತಿಗಳ ಅಧ್ಯಕ್ಷತೆಯನ್ನು ಜಿಲ್ಲೆಯ ಎಲ್ಲಾ ಶಾಸಕರು ವಹಿಸಿಕೊಂಡು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವುದು ಮತ್ತಷ್ಟು ಮೆರಗು ತಂದಿದೆ ಎಂದು ತಿಳಿಸಿದ್ದಾರೆ.

ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಮನ್ವಯದೊಂದಿಗೆ ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಚಟುವಟಿಕೆಗಳು ಪ್ರಾರಂಭವಾಗಿವೆ. ಸಮ್ಮೇಳನಕ್ಕೆ ಸ್ಥಳ ಆಯ್ಕೆಗೆ ಸಂಬಂಧಿಸಿದಂತೆ ಸಾಕಷ್ಟು ಅಭಿಪ್ರಾಯಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಸೂಕ್ತವಾದ ಜಾಗವನ್ನು ಆಯ್ಕೆ ಮಾಡುವ ಸಂಬಂಧ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ ಹಾಗೂ ವಿವಿಧ ಸಮಿತಿಗಳ ಸದಸ್ಯರು, ಶಾಸಕರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನೊಟ್ಟಿಗೆ ಸಾಕಷ್ಟು ಚರ್ಚೆ ನಡೆಸಲಾಗಿದೆ ಎಂದಿದ್ದಾರೆ.

ಸಮ್ಮೇಳನದ ಯಶಸ್ವಿಗೆ ಎಲ್ಲರ ಸಹಕಾರ ಮುಖ್ಯ



ಮಾಧ್ಯಮ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡುತ್ತಿರುವ ದಿನೇಶ್ ಗೂಳಿಗೌಡ.

ಮಂಡ್ಯ,ನ.14– ನಗರದಲ್ಲಿ ಡಿಸೆಂಬರ್ 20, 21, 22ರಂದು ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡದ ಹಬ್ಬವಾಗಿದ್ದು, ಕುಟುಂಬದವರೊಂದಿಗೆ ಹಬ್ಬ ಆಚರಣೆ ಮಾಡುವಂತೆ ಜಿಲ್ಲೆಯ ಜನತೆ ಒಟ್ಟಾಗಿ ಕನ್ನಡ ಹಬ್ಬವನ್ನು ಆಚರಣೆ ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಹಾಗೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಾಧ್ಯಮ ಸಮನ್ವಯ ಸಮಿತಿ ಅಧ್ಯಕ್ಷ ದಿನೇಶ್ ಗೂಳಿಗೌಡ ಹೇಳಿದರು.

ಗುರುವಾರ ನಗರದ ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಾಧ್ಯಮ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿ, ಸಮ್ಮೇಳನದ ಯಶಸ್ವಿಗೆ ಮಾಧ್ಯಮದ ಪಾತ್ರ ಬಹಳ ಮುಖ್ಯ. ಸಾಹಿತ್ಯ ಸಮ್ಮೇಳನದ ಕುರಿತು ಮಾಧ್ಯಮದಲ್ಲಿ ವ್ಯಾಪಕ ಪ್ರಚಾರ ನೀಡುವ ಮೂಲಕ ಸಮ್ಮೇಳನದ ಯಶಸ್ವಿಗೆ ಮಾಧ್ಯಮದವರು ಸಹಕರಿಸಬೇಕು. ಇದು ಕನ್ನಡದ ಹಬ್ಬ, ನಮ್ಮ ಮನೆ ಹಬ್ಬ. ಕನ್ನಡದ ತೇರು ಎಳೆಯಲು ಎಲ್ಲರ ಸಹಕಾರ ಮುಖ್ಯ. ಮಾಧ್ಯಮದಲ್ಲಿ ಹೆಚ್ಚಿನ ಪ್ರಚಾರ ನೀಡಿ ಸಕ್ಕರೆಯ ನಾಡು ಅಕ್ಕರೆಯ ಬೀಡಿನ ಗಮಲನ್ನು ಜಗಕ್ಕೆ ಪಸರಿಸುವಂತೆ ಮಾಡಬೇಕು ಎಂದು ಹೇಳಿದರು.

ಮಂಡ್ಯ ಆತಿಥ್ಯಕ್ಕೆ ಹೆಸರುವಾಸಿ. ರಾಜ್ಯ, ಹೊರರಾಜ್ಯದಿಂದ ಆಗಮಿಸುವ ಸಾಹಿತ್ಯಾಸಕ್ತರು, ಮಾಧ್ಯಮ ಮಿತ್ರರ ಆತಿಥ್ಯಕ್ಕೆ ಯಾವುದೇ ಕುಂದುಕೊರತೆ ಉಂಟಾಗದಂತೆ ಅಧಿಕಾರಿಗಳು ಎಚ್ಚರವಹಿಸಬೇಕು. ಯಾವುದೇ ರೀತಿಯ ಗೊಂದಲಗಳಿಗೆ ಆಸ್ಪದ ನೀಡಬಾರದು. ರಾಜ್ಯ, ಜಿಲ್ಲಾ, ತಾಲೂಕು ಹಾಗೂ ಸ್ಥಳೀಯ ಪತ್ರಿಕೆ ಮತ್ತು ಟಿವಿ ಚಾನೆಲ್‌ಗಳು ಹೆಚ್ಚಿನ ಪ್ರಚಾರ ನೀಡಿ ನುಡಿ ಹಬ್ಬವನ್ನು ಯಶಸ್ವಿಗೊಳಿಸಬೇಕು. ಎನ್‌ಸಿಸಿ, ಸ್ಕೌಟ್ಸ್ ಅಂಡ್ ಗೈಡ್ಸ್, ಹಾಗೂ ಎನ್‌ಜಿಒಗಳಿಂದ ಸ್ವಯಂ ಸೇವಕರನ್ನು ನೇಮಿಸುಕೊಳ್ಳಬೇಕು. ನಮ್ಮನೆ ಕಾರ್ಯಕ್ರಮದಂತೆ ಕಾರ್ಯ ನಿರ್ವಹಿಸಬೇಕು. ಮಾಧ್ಯಮ ಸಂಸ್ಥೆಗಳಿಂದ ಸಮ್ಮೇಳನಕ್ಕೆ ಆಗಮಿಸುವವವರಿಗೆ ಸೂಕ್ತ ವಸತಿ ವ್ಯವಸ್ಥೆ, ವಾಹನ, ಊಟ, ತಿಂಡಿ ವ್ಯವಸ್ಥೆ ಆಗಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್, ಜಿಲ್ಲಾ ಕಸಾಪ ಸಂಚಾಲಕಿ ಮೀರಾ ಶಿವಲಿಂಗಯ್ಯ, ಉಪವಿಭಾಗಾಧಿಕಾರಿ ಶಿವಮೂರ್ತಿ, ವಾರ್ತಾಧಿಕಾರಿ ನಿರ್ಮಲಾ ಸೇರಿದಂತೆ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ನಿಗದಿಯಾಗಿರುವ ಸ್ಥಳದಲ್ಲೇ ಸಮ್ಮೇಳನ ನಡೆಯಲಿದೆ



ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಷಿ ಮಾತನಾಡುತ್ತಿರುವುದು.

ಮಂಡ್ಯ,ನ.14– 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಕೆಲವರು ಅನಗತ್ಯ ಗೊಂದಲಗಳನ್ನು ಸೃಷ್ಟಿಸಲು ಮುಂದಾಗಿದ್ದು, ಇದು ಸಮ್ಮೇಳನ ಹಾಗೂ ಜಿಲ್ಲೆಯ ಗೌರವಕ್ಕೆ ಕುಂದುಂಟಾಗಲಿದೆ. ಈ ನಿಟ್ಟಿನಲ್ಲಿ ಸಮ್ಮೇಳನ ನಡೆಸುವ ಜಾಗದ ವಿಚಾರಕ್ಕೆ ಏನೇ ಗೊಂದಲಗಳಿದ್ದರೂ ಸಂಬಂಧಿಸಿದ ಸಚಿವರು, ಶಾಸಕರು ಹಾಗೂ ಜಿಲ್ಲಾಡಳಿತದೊಂದಿಗೆ ಚರ್ಚಿಸಿ, ಜಾಗ ನಿಗದಿ, ಮಾಡಿದ್ದು, ನಿಗದಿಯಾದ ಜಾಗದಲ್ಲೇ ಸಮ್ಮೇಳನ ನಡೆಯಲಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಷಿ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೆಲವರು ನನ್ನನ್ನೇ ಗುರಿಯಾಗಿಟ್ಟುಕೊಂಡು ಸಮ್ಮೇಳನದ ಬಗ್ಗೆ ಇಲ್ಲ ಸಲ್ಲದ ಹೇಳಿಕೆ ನೀಡಿ ಅಪಪ್ರಚಾರ ಮಾಡುತ್ತಿದ್ದಾರೆ. ಇಂತಹ ಹೇಳಿಕೆಗಳಿಂದ ಮಂಡ್ಯ ಎಂದರೆ ಇಂಡಿಯಾ ಎಂಬ ಖ್ಯಾತಿ ಹೊಂದಿರುವ ಜಿಲ್ಲೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಪಮಾನವಾಗಲಿದೆ. ಎಲ್ಲರೂ ಸಮ್ಮೇಳನದ ಯಶಸ್ಸಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ದೇಶ ವಿದೇಶಗಳಲ್ಲಿರುವ ಕನ್ನಡಿಗರನ್ನು ಸಮ್ಮೇಳನಕ್ಕೆ ಕರೆತರಬೇಕೆನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಅಭಿಲಾಷೆಯಾಗಿದೆ. ಅದರಂತೆ ವಿಶ್ವದ ವಿವಿಧ ರಾಷ್ಟ್ರಗಳಲ್ಲಿರುವ ಎಲ್ಲ ಕನ್ನಡಿಗರನ್ನೂ ಒಟ್ಟುಗೂಡಿಸುವ ನಿಟ್ಟಿನಲ್ಲಿ ಅಮೆರಿಕಾದಲ್ಲಿ ನೆಲೆಸಿರುವ ಸರ್.ಎಂ.ವಿಶ್ವೇಶ್ವರಯ್ಯ ಅವರ ಮೊಮ್ಮಗಳನ್ನು ಸಮ್ಮೇಳನಕ್ಕೆ ಆಹ್ವಾನಿಸಿದ್ದೆ. ಆದರೆ, ಕೆಲವರು ದೇಶದಲ್ಲಿರುವವರನ್ನೇ ಕರೆಯುತ್ತಿಲ್ಲ. ದೂರದಲ್ಲಿರುವ ವರನ್ನು ಕರೆಯುತ್ತಿದ್ದಾರೆಂಬ ಕೊಂಕು ನುಡಿಗಳಿಂದ ಬೇಸತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಕಸಾಪ ಕೋಶಾಧ್ಯಕ್ಷ ಪಟೇಲ್ ಪಾಂಡು, ಜಿಲ್ಲಾ ಕಸಾಪ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ, ಪದಾಧಿಕಾರಿಗಳಾದ ಹುಸ್ಕೂರು ಕೃಷ್ಣೇಗೌಡ, ಹರ್ಷ ಪಣ್ಣೇದೊಡ್ಡಿ, ಅಪ್ಪಾಜಪ್ಪ ಗೋಷ್ಠಿಯಲ್ಲಿದ್ದರು.

ಸಮ್ಮೇಳನ ವಿಚಾರದಲ್ಲಿ ಜೋಷಿ ಸರ್ವಾಧಿಕಾರಿ ಧೋರಣೆ: ಪ್ರೊ.ಜೆಪಿ ಕಿಡಿ

ಮಂಡ್ಯ,ನ.14– 87ನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದು, ಮಂಡ್ಯ ಜಿಲ್ಲಾಡಳಿತ ಅವರ ತಾಳಕ್ಕೆ ಕುಣಿಯುತ್ತಿದೆ, ಇದರಿಂದಾಗಿ ಹಲವು ಗೊಂದಲಗಳು ಸೃಷ್ಠಿಯಾಗಿವೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಕಿಡಿಕಾರಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದ ನೇತೃತ್ವವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ನೀಡದೇ, ಜಿಲ್ಲಾ ಉಸ್ತುವಾರಿ ಮಂತ್ರಿಗಳ ನೇತೃತ್ವದಲ್ಲಿ ಸಮ್ಮೇಳನ ನಡೆಸುವುದು ಬಿಟ್ಟು, ಸಮಿತಿಗಳ ರಚನೆ ಮಾಡಿ ಸುಮ್ಮನಾಗಿರುವುದು ಗೊಂದಲಗಳಿಗೆ ಕಾರಣವಾಗಿದೆ ಎಂದರು.

ಪರಿಷತ್ತಿನ ಅಧ್ಯಕ್ಷರೊಬ್ಬರೆ ಸಾಹಿತ್ಯ ಸಮ್ಮೇಳನವನ್ನು ಮಾಡುತ್ತಿಲ್ಲ, ಅವರು ಹೇಳಿಕೆ ನೀಡುವ ಸಂದರ್ಭದಲ್ಲಿ ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಸುದ್ದಿಗೋಷ್ಠಿಗಳನ್ನು ನಡೆಸಿ ಹೇಳಿಕೆ ನೀಡಬೇಕಿತ್ತು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಡಳಿತ ಹಾಗೂ ಸರ್ಕಾರ ಮೂರು ಸಂಸ್ಥೆಗಳು ಸಮ್ಮೇಳನವನ್ನು ನಡೆಸುತ್ತಿದ್ದು, ಮೂರು ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡದೇ ಪರಿಷತ್ತೊಂದೇ ಎಲ್ಲ ತೀರ್ಮಾನ ಕೈಗೊಂಡಂತೆ ಭಾಸವಾಗುತ್ತಿದೆ ಎಂದು ಹೇಳಿದರು.

ಪರೀಕ್ಷೆಗೆ ಮುಂಚೆಯೇ ಪ್ರಶ್ನೆ ಪತ್ರಿಕೆ ಹಂಚಿರುವ ಆರೋಪ

ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಪರೀಕ್ಷೆ ಮುಂದೂಡಿಕೆ

ಮಂಡ್ಯ,ನ.14– ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿಗೆ ಮಣಿದಿರುವ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾಲೇಜುಗಳಿಗೆ ಒಂದು ವಾರ ಮುಂಚಿತವಾಗಿ ಪ್ರಶ್ನೆ ಪತ್ರಿಕೆಯನ್ನು ವಿತರಿಸಿರುವ ಆರೋಪ ಕೇಳಿ ಬಂದಿದ್ದು, ಪರೀಕ್ಷೆಯನ್ನು ಮುಂದೂಡಿರುವ ಘಟನೆ ಮಂಡ್ಯದಲ್ಲಿ ನಡೆದಿದೆ

ಪರೀಕ್ಷೆ ದಿನ ಬೆಳಿಗ್ಗೆ ವಿತರಿಸಬೇಕಾದ ಪ್ರಶ್ನೆ ಪತ್ರಿಕೆಗಳು ವಾರ ಮೊದಲೇ ವಿತರಣೆ ಮಾಡಲಾಗಿದೆ. ಮಂಡ್ಯ ನಗರದಲ್ಲಿ ನ.6ರಿಂದ ಪದವಿ ಪೂರ್ವ ಕಾಲೇಜಿನ ಮಧ್ಯ ವಾರ್ಷಿಕ ಪರೀಕ್ಷೆಗಳು ನಡೆಯುತ್ತಿವೆ. ಪರೀಕ್ಷೆ ದಿನ ಬೆಳಿಗ್ಗೆ ಕಾಲೇಜುಗಳಿಗೆ ಪ್ರಶ್ನೆ ಪತ್ರಿಕೆ ನೀಡಬೇಕಿದ್ದ ಅಧಿಕಾರಿಗಳು ಒಂದು ವಾರ ಮೊದಲೇ ಎಲ್ಲ ವಿಷಯಗಳ ಪ್ರಶ್ನೆ ಪತ್ರಿಕೆ ವಿತರಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ವಾರ್ಷಿಕ ಪರೀಕ್ಷೆ ವೇಳೆ 20 ಇಂಟರ್ನಲ್ ಮಾರ್ಕ್ಸ್ ಕೊಡುವಾಗ ಮಧ್ಯವಾರ್ಷಿಕ ಪರೀಕ್ಷೆಯ ಅಂಕ ಪರಿಗಣನೆ ಮಾಡಲಾಗುತ್ತದೆ. ಅದಕ್ಕಾಗಿ ಫಲಿತಾಂಶ ಹೆಚ್ಚಿಸಲು ಮುಂಚಿತವಾಗಿ ಪ್ರಶ್ನೆ ಪತ್ರಿಕೆ ವಿತರಿಸಿ ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸುವಂತೆ ಹುನ್ನಾರ ಮಾಡಲಾಗಿದೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದಿದೆ.

ತಮ್ಮ ಅನುಕೂಲಕ್ಕೆ ತಕ್ಕಂತೆ ನಿಗದಿತ ದಿನಕ್ಕೂ ಮೊದಲೇ ಕೆಲ ಖಾಸಗಿ ವಿದ್ಯಾಸಂಸ್ಥೆಗಳು ಪರೀಕ್ಷೆ ನಡೆಸಿವೆ. ಬುಧವಾರ ಹಾಗೂ ಗುರುವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ಎರಡು ದಿನ ಮೊದಲೇ ಮಾಡಿ ಮುಗಿಸುವ ಮೂಲಕ ನಿಯಮ ಉಲ್ಲಂಘಿಸಿವೆ. ಖಾಸಗಿ ಸಂಸ್ಥೆಗಳ ಜೊತೆ ಕೈಜೋಡಿಸಿ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಚೆಲ್ಲಾಟವಾಡುತ್ತಿದ್ದಾರೆ ಎಂದು ಪೋಷಕರು ಹಾಗೂ ಸಾರ್ವಜನಿಕರು ಕಿಡಿಕಾರಿದ್ದಾರೆ.

ಜೀವಶಾಸ್ತ್ರ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ?: ಗುರುವಾರ ಜೀವಶಾಸ್ತ್ರ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಬರೆದುಕೊಂಡು ಸ್ನೇಹಿತರೊಂದಿಗೆ ಹಂಚಿಕೊಂಡಿದ್ದಾರೆ. ಗುರುವಾರ ನಡೆಯಬೇಕಿದ್ದ ಪರೀಕ್ಷೆಯನ್ನು ಎರಡು ದಿನದ ಮುಂಚೆಯೇ ಬರೆದಿರುವ ಕೆಲವು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತೊಂದು ಕಾಲೇಜಿನ ಸ್ನೇಹಿತರಿಗೆ ಪ್ರಶ್ನೆ ಪತ್ರಿಕೆ ಹಂಚಿಕೊಂಡಿದ್ದಾರೆ. ಒಂದೆರಡು ಕಾಲೇಜುಗಳ ನಿಯಮ ಉಲ್ಲಂಘನೆಯಿಂದ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪ್ರಶ್ನೆಗಳನ್ನು ಹಂಚಿಕೊಂಡಿರುವ ಪ್ರತಿಗಳು ವೈರಲ್ ಆಗಿದ್ದು, ಇಂದಿನ ಪರೀಕ್ಷೆಯಲ್ಲಿ ಈ ಪ್ರಶ್ನೆಗಳೇ ಇರುತ್ತವೆ ಎಂದು ಕೆಲವು ವಿದ್ಯಾರ್ಥಿಗಳು ತಯಾರಿ ನಡೆಸಿದ್ದರು.

ಜೀವಶಾಸ್ತ್ರ ಪರೀಕ್ಷೆ ರದ್ದು: ಪಶ್ನೆ ಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ ಗುರುವಾರ ನಡೆಯಬೇಕಿದ್ದ ಪರೀಕ್ಷೆಯನ್ನೇ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರ ಉಪನಿರ್ದೇಶಕ ಜಯಶಂಕರಪ್ಪ ರದ್ದು ಮಾಡಿದ್ದಾರೆ. ಪರೀಕ್ಷೆ ಪ್ರಾರಂಭಕ್ಕೂ ಮುನ್ನವೇ ಜಿಲ್ಲೆಯ ಕಾಲೇಜುಗಳಿಗೆ ಎಲ್ಲ ವಿಷಯದ ಪ್ರಶ್ನೆ ಪತ್ರಿಕೆ ಹಂಚಿ ಇಲಾಖೆ ಲೋಪವೆಸಗಿದೆ ಆಯಾ ದಿನವೇ ವಿಷಯದ ಪ್ರಶ್ನೆ ಪತ್ರಿಕೆ ವಿತರಿಸಬೇಕಾಗಿತ್ತು. ಪರೀಕ್ಷೆಗೂ ಮುನ್ನವೇ ಪ್ರಶ್ನೆ ಪತ್ರಿಕೆ ವಿತರಣೆ ಮಾಡಲಾಗಿದೆ.

ಸೋರಿಕೆ ಮಾಡಿದ ಕಾಲೇಜಿಗೆ ನೋಟಿಸ್ ಜಾರಿ: ಪ್ರಥಮ ಪಿಯುಸಿ, ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಮಾಡಿದ ಖಾಸಗಿ ಕಾಲೇಜಿಗೆ ಭೇಟಿ ನೀಡಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸೋರಿಕೆ ಬಗ್ಗೆ ಪ್ರಶ್ನಿಸಿದ್ದಾರೆ. ಅಲ್ಲದೆ, ಖಾಸಗಿ ಕಾಲೇಜು ಸಂಸ್ಥೆ ಮೇಲೆ ಶಿಸ್ತು ಕ್ರಮಕ್ಕೆ ನೋಟೀಸ್ ಜಾರಿ ಮಾಡಲಾಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಮಂಡ್ಯ ಪ್ರಭಾರ ಉಪನಿರ್ದೇಶಕ ಜಯಶಂಕರಪ್ಪ ತಿಳಿಸಿದ್ದಾರೆ.

ನ.6ರಿಂದ ನ.16ರವರೆಗೆ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಇತ್ತು. ಪ್ರಶ್ನೆ ಪತ್ರಿಕೆಯನ್ನ ನೋಡಲ್ ಅಧಿಕಾರಿ ಮೂಲಕ ಹಂಚಿಕೆ ಮಾಡಲಾಗಿದೆ. ಜೀವಶಾಸ್ತ್ರ ಪರೀಕ್ಷೆ ನಡೆಯುವ ಮುನ್ನವೇ ಪ್ರಶ್ನೆ ಪತ್ರಿಕೆ ಬಹಿರಂಗವಾಗಿದೆ. ಆದ್ದರಿಂದ ನಡೆಯಬೇಕಿದ್ದ ಪರೀಕ್ಷೆ ಮುಂದೂಡಿದ್ದೇವೆ. ನ.19ರಂದು ಜೀವಶಾಸ್ತ್ರ ವಿಷಯದ ಪರೀಕ್ಷೆ ನಡೆಸುತ್ತೇವೆ. ಪ್ರಶ್ನೆ ಪತ್ರಿಕೆ ಲೀಕ್ ಆಗಿರೋದು ತನಿಖೆಯಿಂದ ಬಹಿರಂಗವಾಗಿದೆ. ಆ ಕಾಲೇಜಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ಇಂದು ವಿದ್ಯುತ್ ವ್ಯತ್ಯಯ



ನಾಗಮಂಗಲ: ಬೆಳ್ಳೂರು ಉಪ ವಿಭಾಗ ವ್ಯಾಪ್ತಿಯ ಎಫ್–5 ಬಿಳಗುಂದ ವಿದ್ಯುತ್ ಕೇಂದ್ರದಲ್ಲಿ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ನಾಳೆ(ನ.15) ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ವಡೇರಹಳ್ಳಿ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರ ಹೋಗುವ 11ಕೆ.ವಿ ಮಾರ್ಗಗಳಾದ ಕಾಳಿಂಗನಹಳ್ಳಿ,ನೆಲ್ಲಿ ಗೆರೆ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಳ್ಳೂರು ಚೆಸ್ಕಾಂ ಅಧಿಕಾರಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಒಂದನೇ ಪುಟದಿಂದ

ವಸ್ತು ಪ್ರದರ್ಶನ, ಅರಮನೆಯಲ್ಲಿ ಚಿಣ್ಣರ ಕಲರವ

ಸಿಕ್ಕಷ್ಟು ಕಡೆಲೆಕಾಯಿ, ಸೌತೆಕಾಯಿ ಹಾಗೂ ಕಿತ್ತಳೆಹಣ್ಣನ್ನು ತೆಗೆದು ಕೊಂಡು ವಸ್ತು ಪ್ರದರ್ಶನ ಮಳಿಗೆಗಳನ್ನು ವೀಕ್ಷಿಸಿ ಸಂಭ್ರಮಿಸಿದರು.

ಕುಣಿದು ಕುಪ್ಪಳಿಸಿದ ಮಕ್ಕಳು: ಬೆಳಗ್ಗೆ 10.30ರಿಂದ ದಸರಾ ವಸ್ತು ಪ್ರದರ್ಶನ ಪ್ರವೇಶಿಸಿದ ಮಕ್ಕಳು ಅಮ್ಯೂಸ್ ಮೆಂಟ್ ಪಾರ್ಕ್‌ನಲ್ಲಿರುವ ವಿವಿಧ ಆಟೋಟಗಳನ್ನು ರಿಯಾಯಿತಿ ದರದ ಟಿಕೆಟ್ ಪಡೆದು ಆಟ ಆಡಿ ಸಂಭ್ರಮಿಸಿದರು. ಜಾಯಿಂಟ್ ವೀಲ್, ಉಯ್ಯಾಲೆ, ಟ್ರೈನ್ ಸೇರಿದಂತೆ ವಿವಿಧ ಆಟಗಳನ್ನು ಆಡುವ ಮೂಲಕ ಕುಣಿದು ಕುಪ್ಪಳಿಸಿದರು.

ವಿವಿಧ ಸ್ಪರ್ಧೆ: ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ವೇಷಭೂಷಣ, ಪ್ರಬಂಧ ಸ್ಪರ್ಧೆ, ನೆಹರು ಬಗ್ಗೆ ಭಾಷಣ, ನೃತ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸ್ಪರ್ಧೆಯಲ್ಲಿ ನೂರಾರು ಮಕ್ಕಳು ಪಾಲ್ಗೊಂಡು ಗಮನ ಸೆಳೆದರು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಭಾ ಕಾರ್ಯಕ್ರಮ: ವಸ್ತು ಪ್ರದರ್ಶನದ ಆವರಣದಲ್ಲಿರುವ ಪಿ.ಕಾಳಿಂಗರಾಗ್ ಸಭಾಂಗಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರವು ಮಕ್ಕಳಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸುವುದರೊಂದಿಗೆ ತಿಂಡಿ, ಊಟದ ವ್ಯವಸ್ಥೆ ಮಾಡಿರುವುದು ಶ್ಲಾಘನೀಯ. ಗ್ರಾಮೀಣ ಭಾಗದ ಹೆಚ್ಚಿನ ಮಕ್ಕಳು ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿ ಸಂಭ್ರಮಿಸುತ್ತಿ ರುವುದು ಗಮನಕ್ಕೆ ಬಂದಿದೆ. ಮಕ್ಕಳಿಗೆ ಜವಾಹರ್ ಲಾಲ್ ನೆಹರು ಅವರ ಬಗ್ಗೆಯೂ ಮಾಹಿತಿ ನೀಡುವುದರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿರುವುದು ಪ್ರಶಂಸನೀಯ ಎಂದರು.

ನೆಹರು ಅವರ ಮಕ್ಕಳ ಪ್ರೇಮ: ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಗ್ರಾಮೀಣ ಪ್ರದೇಶದ ಸಾವಿರಾರು



ಮೈಸೂರು ಅರಮನೆಗೆ ಆಗಮಿಸಿದ ಶಾಲಾ ಮಕ್ಕಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಅರಮನೆ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಹೂವು ಹಾಗೂ ಸಿಹಿ ನೀಡಿ ಸ್ವಾಗತಿಸಿದರು

ಮಕ್ಕಳು ಆಗಮಿಸಿದ್ದಾರೆ. ಸ್ವಾತಂತ್ರ್ಯಕ್ಕಿಂತ ಮೊದಲು ನೆಹರು ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಬಳಿಕ ಸ್ವತಂತ್ರ್ಯ ಭಾರತದ ಮೊದಲ ಪ್ರಧಾನಿಯಾಗಿ ಮಕ್ಕಳ ಬಗ್ಗೆ ಒಲವು ಪ್ರದರ್ಶಿಸುತ್ತಿದ್ದರು. ಮಕ್ಕಳೇ ದೇಶದ ಆಸ್ತಿ, ಅವರಿಗೆ ಉತ್ತಮ ಶಿಕ್ಷಣ ಕೊಟ್ಟರೆ ಮುಂದಿನ ದಿನದಲ್ಲಿ ದೇಶವನ್ನು ಸುಭದ್ರವಾಗಿ ಕಟ್ಟಬಹುದು ಎಂಬ ಸಂದೇಶ ನೀಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ಮಕ್ಕಳಿಗೆ ವಿವಿಧ ಸೌಲಭ್ಯ ಒದಗಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಸಿಟಿ ಕೋ– ಆಪರೇಟಿವ್ ಬ್ಯಾಂಕ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಸರಾ ವಸ್ತು ಪ್ರದರ್ಶನಕ್ಕೆ ಆಗಮಿಸಿದ ಮಕ್ಕಳಿಗೆ ಸಿಟಿ ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಉಚಿತವಾಗಿ 5 ಸಾವಿರ ಐಸ್‌ಕ್ರೀಮ್ ನೀಡಲಾಯಿತು.

ಸಂಜೆ ಒಂದು ಗಂಟೆ ಉಚಿತ ಸೇವೆ: ಬೆಳಗ್ಗಿನಿಂದ ಸಂಜೆ ವರೆಗೂ ದಸರಾ ವಸ್ತು ಪ್ರದರ್ಶನದಲ್ಲಿ ಮಳಿಗೆಗಳನ್ನು ವೀಕ್ಷಿಸಿ ಸಂಭ್ರಮಿಸಿದ್ದ ಮಕ್ಕಳಿಗೆ ಸಂಜೆ 4ರಿಂದ 5 ಗಂಟೆವರೆಗೆ ಅಮ್ಯೂಸ್ ಮೆಂಟ್ ಪಾರ್ಕ್‌ನಲ್ಲಿ ಆಟ ಆಡಲು ಉಚಿತ ಅವಕಾಶ ಕಲ್ಪಿಸಲಾಗಿತ್ತು.

ಅರಮನೆ: ಮೈಸೂರು ಅರಮನೆಗೂ ಮಕ್ಕಳು ದಂಡು ಪ್ರವೇಶಿಸಿತ್ತು. ಅರಮನೆಗೆ ಬಂದ ಶಾಲಾ ಮಕ್ಕಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ಹೂವು ಹಾಗೂ ಸಿಹಿ ನೀಡಿ ಬರಮಾಡಿಕೊಂಡರು.

ಮೃಗಾಲಯ: ಮೃಗಾಲಯಕ್ಕೂ ಭೇಟಿ ನೀಡಿದ ಮಕ್ಕಳ ಸಂಖ್ಯೆ ಹೆಚ್ಚಾಗಿತ್ತು. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲಾಯಿತು. ಶಾಲೆ ಗುರುತಿನಿ ಚೀಟಿ ತಂದ ವಿದ್ಯಾರ್ಥಿಗಳನ್ನು ಮೃಗಾಲಯ ಪ್ರವೇಶಕ್ಕೆ ಅವಕಾಶ ನೀಡಲಾಯಿತು. ಮಧ್ಯಾಹ್ನದವರೆಗೂ ಮೃಗಾಲಯಕ್ಕೆ ಭೇಟಿ ನೀಡಲು ಬಂದ ಮಕ್ಕಳ ಸಂಖ್ಯೆ ಹೆಚ್ಚಾಗಿತ್ತು.

ಚಾಮುಂಡಿ ಬೆಟ್ಟಕ್ಕೂ ಭೇಟಿ: ಮೈಸೂರಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ಬಳಿಕ ಮಕ್ಕಳು ಚಾಮುಂಡಿ ಬೆಟ್ಟಕ್ಕೆ ತೆರಳಿದರು. ಇದರಿಂದ ಬೆಟ್ಟದಲ್ಲೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದರು.

ಶಕ್ತಿ ಯೋಜನೆಯ ವರದಾನ: ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸಲು ಶಕ್ತಿ ಯೋಜನೆ ನೆರವಾಯಿತು. ಇದರಿಂದ ವಿದ್ಯಾರ್ಥಿನಿಯರು ಮೈಸೂರಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಸಂತಸಪಟ್ಟರು. ಪ್ರೀತಿ





ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮಕ್ಕಳಿಗಾಗಿ ಇಟ್ಟಿದ್ದ ಕಡಲೆಕಾಯಿ, ಕಿತ್ತಳೆಹಣ್ಣನ್ನು ತೆಗೆದುಕೊಳ್ಳುತ್ತಿರುವ ಚಿಣ್ಣರು.

ತನಿಖೆಗೆ SIT ರಚನೆ

ಉಡುಪಿ ಜಿಲ್ಲಾ ಆಸ್ಪತ್ರೆಗಳಲ್ಲಿ 39.37 ಕೋಟಿ ರೂ. ವೆಚ್ಚದಲ್ಲಿ ತಲಾ 50 ಹಾಸಿಗೆಗಳ ತೀವ್ರ ನಿಗಾ ಆರೈಕೆ ಘಟಕಗಳ ಸ್ಥಾಪನೆಗೆ ಅನುಮೋದನೆ ನೀಡಿದೆ.

ತುರ್ತು ಚಿಕಿತ್ಸಾ ಘಟಕ: ಇದೇ ಯೋಜನೆಯಡಿ ಮೈಸೂರು, ಮಂಡ್ಯ, ಶಿವಮೊಗ್ಗ, ಹಾಸನ, ಬಳ್ಳಾರಿ, ಚಿಕ್ಕಮಗಳೂರು ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ 149 ಕೋಟಿ ರೂ. ವೆಚ್ಚದಲ್ಲಿ ತಲಾ 50 ಹಾಸಿಗೆಗಳ ತುರ್ತು ಚಿಕಿತ್ಸಾ ಘಟಕಗಳ ಸ್ಥಾಪನೆಗೆ ಸಭೆ ಅನುಮೋದನೆ ನೀಡಿದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ರಾಜ್ಯದ 69,919 ಅಂಗನವಾಡಿ ಕೇಂದ್ರಗಳಿಗೆ ತಲಾ ಮೂರು ಸಾವಿರ ರೂ. ವೆಚ್ಚದಲ್ಲಿ ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳ ಖರೀದಿಗೆ ಒಪ್ಪಿಗೆ ನೀಡಲಾಗಿದೆ ಎಂದರು.

ಮದ್ಯ ಮಾರಾಟ ಬಂದ್

ಶುಲ್ಕ ವಿಧಿಸಿ ನೀಡುವಂತೆ, ಮದ್ಯ–ಬಿಯರ್ ಪಾರ್ಸೆಲ್‌ಗೆ ಅನುಮತಿ ನೀಡುವಂತೆ ಒತ್ತಾಯಿಸಿ ಒಂದು ದಿನದ ಸಾಂಕೇತಿಕ ಮದ್ಯ ಮಾರಾಟ ಬಂದ್ ಮಾಡುತ್ತಿರುವುದಾಗಿ ತಿಳಿಸಿದರು.

ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರ ನಿಗ್ರಹ ಹಾಗೂ ಈ ಇಲಾಖೆಯನ್ನು ಹಣಕಾಸು ಸಚಿವರೇ ನಿರ್ವಹಣೆ ಮಾಡಬೇಕೆಂಬ ಬೇಡಿಕೆಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ಕರೆಯುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಅಧಿಕಾರಿಗಳು ವರ್ಗಾವಣೆ ಮತ್ತು ಬಡ್ತಿಗಾಗಿ ಮೇಲಿನವರಿಗೆ ಲಂಚ ನೀಡಿದ್ದೇವೆಂದು ನಮ್ಮ ಬಳಿ ವಸೂಲಿಗೆ ನಿಂತಿದ್ದಾರೆ. ಲೈಸೆನ್ಸ್ ನವೀಕರಣಕ್ಕೆ ಲಂಚ ನೀಡುವಂತೆ ತುಂಬಾ ಒತ್ತಾಯ ಮಾಡುತ್ತಾರೆ, ಆರ್ಥಿಕ ನಿರ್ವಹಣೆ ಮಾಡುವವರೇ ಇಲಾಖೆ ನಿರ್ವಹಣೆ ಮಾಡಿದರೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದು. ನಾವು ಎಲ್ಲಿಯೂ 500 ರಿಂದ 700 ಕೋಟಿ ರೂ. ಲಂಚದ ಬಗ್ಗೆ ಮಾತನಾಡಿಲ್ಲ. ಆದರೆ, ಮಾನ್ಯ ಪ್ರಧಾನಿ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದರೆಂಬ ಬಗ್ಗೆ ತಿಳಿಯದು. ಇದಕ್ಕೂ ನಮಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಕಳಪೆಯಲ್ಲಿ ಕಳಪೆ

ಕಳಪೆಯಲ್ಲಿ ಕಳಪೆ ಜಿಲ್ಲೆಯಾಗುತ್ತಿದೆ. ಕೆಲಸ ಮಾಡದ ಅಧಿಕಾರಿಗಳಿಗೆ ಮನುಷ್ಯತ್ವ ಇದೆಯಾ, ನಿಮಗೆ ಯಾವ ಭಾಷೆಯಲ್ಲಿ ಹೇಳಬೇಕು, ನಾಚಿಕೆ ಆಗಲ್ವ ಎಂದು ಕಿಡಿಕಾರಿದರು. ಬಗರ್ ಹುಕುಂ ಅರ್ಜಿ ವಿಲೇ, ನಮೂನೆ 1–5 ಹಾಗೂ ನಮೂನೆ 6–10 ದುರಸ್ಥಿ ಕೆಲಸ ಹಾಗೂ ತಹಶೀಲ್ದಾರ್ ತಕರಾರು ಅರ್ಜಿ ವಿಲೇ ಕೆಲಸದಲ್ಲೂ ಮೈಸೂರು ಸಾಕಷ್ಟು ಹಿಂದೆ ಬಿದ್ದಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ತಹಶೀಲ್ದಾರ್‌ಗಳ ಕಾರ್ಯಶೈಲಿ ವಿರುದ್ಧ ಅಸಮಾಧಾನ ಹೊರ ಹಾಕಿದರು.

ತಹಶೀಲ್ದಾರ್‌ರಿಗೆ ನ.25ರ ಗಡುವು

ತಹಶೀಲ್ದಾರರು, ಬಡವರ ಕೆಲಸದ ಬಗ್ಗೆ ಅಸಡ್ಡೆ ಧೋರಣೆ ತೋರುತ್ತಿರುವುದು ವಿಷಾದನೀಯ. ಬಡವರ ಕೆಲಸದ ಬಗ್ಗೆ ಅಧಿಕಾರಿ ವರ್ಗದಿಂದ ಈ ಮಟ್ಟದ ಅಸಡ್ಡೆ ನಿರೀಕ್ಷಿಸಿರಲಿಲ್ಲ. ರಾಜ್ಯದಲ್ಲಿ ಒಟ್ಟಾರೆ 14 ಲಕ್ಷ ರೈತರು ಬಗರ್ ಹುಕುಂ ಅಡಿ ಭೂ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇವುಗಳ ಪೈಕಿ ಅರ್ಹ ಅರ್ಜಿ ಯಾವುದು ಎಂದು ಪರಿಶೀಲಿಸಲು ಅಧಿಕಾರಿಗಳಿಗೆ ಒಂದೂವರೆ ವರ್ಷ ಬೇಕಾ ಎಂದು ಪ್ರಶ್ನಿಸಿದರು.

ಇದೇ ತಿಂಗಳ 25ರೊಳಗೆ ತಹಶೀಲ್ದಾರರು ಅರ್ಹ–ಅನಗತ್ಯ ಅರ್ಜಿಗಳನ್ನು ವಿಂಗಡಿಸಿ ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು 26ರ ಬೆಳಗ್ಗೆಯೇ ಇಡೀ ಜಿಲ್ಲೆಯ ಪಟ್ಟಿ ಒಂದುಗೂಡಿಸಿ ನನಗೆ ಸಲ್ಲಿಸಬೇಕು ಹಾಗೂ ಡಿಸೆಂಬರ್ ಮೊದಲ ವಾರದಲ್ಲಿ ಶಾಸಕರ ನೇತೃತ್ವದಲ್ಲಿ ಸಭೆ ನಡೆಸಿ ಅರ್ಹರಿಗೆ ಡಿಜಿಟಲ್ ಭೂ ಸಾಗುವಳಿ ಚೀಟಿ ನೀಡಬೇಕು ಎಂದು ತಾಕೀತು ಮಾಡಿದರು. ರಾಜ್ಯಾದ್ಯಂತ ಬಗರ್ ಹುಕುಂ ಅಡಿ ಭೂ ಮಂಜೂರಾತಿ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಅನರ್ಹ ಅರ್ಜಿಗಳ ಸಂಖ್ಯೆಯೇ ಅಧಿಕವಾಗಿದೆ. ಅನರ್ಹ ಎಂದು ನಿರ್ಧರಿಸಲು ಕೆಲವು ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅರ್ಜಿದಾರರು ನಿರ್ದಿಷ್ಟ ಪ್ರದೇಶದಲ್ಲಿ ಸಾಗುವಳಿ ಮಾಡುತ್ತಿಲ್ಲ, ಗೋಮಾಳ ಭೂಮಿ ಅಧಿಕ ಇಲ್ಲ, ಅರಣ್ಯ ಭೂಮಿ ಕೋರಿ ಸಾಗುವಳಿಗೆ ಅರ್ಜಿ ಸಲ್ಲಿಸಿದ್ದರೆ, ಅರ್ಜಿದಾರರ ಹೆಸರಿನಲ್ಲಿ ಈಗಾಗಲೇ 4.38 ಎಕರೆಗೂ ಅಧಿಕ ಜಮೀನು ಇದ್ದರೆ, ಅರ್ಜಿದಾರರು ಭೂಮಿ ಕೋರಿ ಅರ್ಜಿ ಸಲ್ಲಿಸಿರುವ ಪ್ರದೇಶದಲ್ಲಿ ವಾಸ ಇಲ್ಲದಿದ್ದರೆ, ಅರ್ಜಿಯೇ ನಕಲು ಆಗಿದ್ದರೆ ಅಥವಾ ಅರ್ಜಿದಾರರು ಅಧಿಕಾರಿಗಳ ಕೈಗೆ ಸಿಗದಿದ್ದರೆ, ಅಂತಹ ಅರ್ಜಿಗಳನ್ನು ಅನರ್ಹ ಎಂದು ಪರಿಗಣಿಸಲಾಗುವುದು.

ಇದರ ಹೊರತಾಗಿ ಬೇರೆ ಸ್ವರೂಪದ ಸಮಸ್ಯೆಗಳು ಕಂಡುಬಂದರೆ ಅವುಗಳನ್ನೂ ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ನೀಡುವಂತೆ ಸಚಿವರು ಸೂಚಿಸಿದರು.

ಸಮರ್ಥವಾಗಿ ಬಗರ್ ಹುಕುಂ ಕೆಲಸ ನಿರ್ವಹಿಸುವ ತಹಶೀಲ್ದಾರರುಗಳಿಗೆ ಪ್ರಶಂಸಾಪತ್ರ ನೀಡಿ ಸನ್ಮಾನಿಸಲಾಗುವುದು.

ಮರೀಗೌಡ ಇಡಿ ವಿಚಾರಣೆಗೆ ಹಾಜರು

ಪ್ರಕರಣ ಸೇರಿದಂತೆ ಮುಡಾದಲ್ಲಿ ನಡೆದಿರುವ ಶೇಕಡ 50:50 ಅನುಪಾತದ ನಿವೇಶನ ಮಂಜೂರಾತಿ, ಬದಲಿ ನಿವೇಶನ, ಪ್ರೋತ್ಸಾಹಕ ನಿವೇಶನ ಅಕ್ರಮ ಮಂಜೂರು ಸೇರಿದಂತೆ ಹಲವು ಹಗರಣ ಬಯಲಾಗಲು ಮರೀಗೌಡರು ಬರೆದ ಆ ಒಂದು ಟಿಪ್ಪಣಿ ಮೂಲ ಕಾರಣವಾದ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಇವರ ವಿಚಾರಣೆ ನಡೆಸಿದರು.

ಶೇಕಡ 50:50 ಅನುಪಾತದಲ್ಲಿ ನಿವೇಶನ ಮಂಜೂರು ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇನ್ನು ಮುಂದೆ ಇಂತಹ ಮಂಜೂರಾತಿಯನ್ನು ಮುಡಾ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. ತರುವಾಯ ಸರ್ಕಾರಕ್ಕೆ ಕಳುಹಿಸಿ ಅನುಮತಿ ಪಡೆದ ನಂತರವಷ್ಟೆ ಈ ಪ್ರಕ್ರಿಯೆ ಮಾಡಬೇಕು. ನೀವು ಮಂಜೂರು ಮಾಡುತ್ತಿರುವ ನಿವೇಶನಗಳು ಕಾನೂನುಬಾಹಿರವಾಗಿದೆ. ಈ ಕುರಿತಂತೆ ನನ್ನ ಕಚೇರಿಗೆ ಮಾಹಿತಿಯೊಂದಿಗೆ ಕಡತ ಹಿಂತಿರುಗಿಸಿ ವಿವರಣೆ ನೀಡಿ. ಯಾವುದೇ ಕಾರಣಕ್ಕೂ ಇನ್ನು ಮುಂದೆ ಶೇಕಡ 50:50 ಅನುಪಾತದ ನಿವೇಶನಗಳನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನಾ ಪತ್ರ ಹೊರಡಿಸಬಾರದು ಎಂದು ಮರೀಗೌಡರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿದ್ದ ಜಿ.ಟಿ. ದಿನೇಶ್ ಕುಮಾರ್ ಅವರಿಗೆ ಆಂತರಿಕ ಟಿಪ್ಪಣಿ ಬರೆದಿದ್ದರು. ಅದರ ಪ್ರತಿಯನ್ನು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗೂ ಮರೀಗೌಡರು ರವಾನಿಸಿದ್ದರು.

ಇದೇ ಆಂತರಿಕ ಟಿಪ್ಪಣಿ ಇಡೀ ಮುಡಾ ನಿವೇಶನ ಹಗರಣ ಬಯಲಿಗೆ ಬರಲು ಮೂಲ ಕಾರಣವಾಗಿತ್ತು ಎಂಬ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಮರೀಗೌಡ ಅವರನ್ನು ಕರೆದು ಮಾಹಿತಿ ಸಂಗ್ರಹಿಸಿದರು. ಮುಡಾ ಪ್ರಕರಣದ ಬಗ್ಗೆ ಇಡಿ ಅಧಿಕಾರಿಗಳು ತನಿಖೆ ತೀವ್ರಗೊಳಿಸಿದ್ದಾರೆ. ಮೈಸೂರಿನ ಕೆಸರೆ ಸರ್ವೆ ನಂಬರ್ 464 ರ 3.16 ಎಕರೆ ಭೂಮಿ ಮಾರಾಟ ಮಾಡಿದ ಮುಡಾ ಹಗರಣದ ಎ4 ಆರೋಪಿ ದೇವರಾಜು ಅವರನ್ನು ಈಗಾಗಲೇ ವಿಚಾರಣೆ ಮಾಡಿದ್ದು, ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ಹಾಲಿ ರಾಯಚೂರು ಸಂಸದ ಕುಮಾರ್ ನಾಯಕ್ ಕೂಡ ವಿಚಾರಣೆಗೊಳಪಡಿಸಿದ್ದರು.

ಇವರಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಹಾಯಕ ಸಿ.ಟಿ. ಕುಮಾರ್ ಕೂಡ ಇಡಿ ಅಧಿಕಾರಿಗಳ ವಿಚಾರಣೆಗೆ ಒಳಪಟ್ಟಿದ್ದು, ಶೀಘ್ರದಲ್ಲೆ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಅವರನ್ನು ಕೂಡ ವಿಚಾರಣೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ವಿಷ ಗಾಳಿ, ಧೂಳಿನ ಕಾರಣದಿಂದ ವರುಣಾದ ಜೈವಿಕ ತ್ಯಾಜ್ಯ ವಿಲೇವಾರಿ ಘಟಕ ಸ್ಥಳಾಂತರಕ್ಕೆ ಮನವಿ

ಮೈಸೂರು, ನ.14(ಜಿಎ)–ವರುಣಾ ಗ್ರಾಮದ ಸರ್ವೆ ನಂಬರ್ 25ರಲ್ಲಿ ಶ್ರೀ ಕನ್ಸಲ್ಟೆಂಟ್ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಜೈವಿಕ ತ್ಯಾಜ್ಯ ವಿಲೇ ವಾರಿ ಘಟಕದಿಂದ ವಿಷ ಗಾಳಿ ಹಾಗೂ ಧೂಳಿನ ಕಾರಣ ತೀವ್ರ ಅನಾರೋಗ್ಯ ಭೀತಿ ಕಾಡುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಬೇರೆಡೆಗೆ ಸ್ಥಳಾಂತರಿಸಬೇಕೆಂದು ಕ್ಯಾಲಿಬರ್ ಬಡಾವಣೆ ಸಮುದಾಯದ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಪ್ರದೀಪ್ ಕೃಪಾಕರ್ ಮಾತನಾಡಿ, ಶ್ರೀ ಕನ್ಸಲ್ಟೆಂಟ್ ಘಟಕದಲ್ಲಿ ಆಸ್ಪತ್ರೆಗಳಿಂದ ಸಂಗ್ರಹಿಸಿದ ತ್ಯಾಜ್ಯದ ಜೊತೆಗೆ ಛೇದನ ಮಾಡಿದ ಅಂಗಗಳನ್ನೂ ಸುಡಲಾಗುತ್ತಿದೆ. ಈ ಪ್ರದೇಶದದಲ್ಲಿ ಘಟಕ ಸ್ಥಾಪನೆಯಾದಾಗ ಇದು ಜನವಸತಿ ಪ್ರದೇಶ ಆಗಿರಲಿಲ್ಲ. ಈಗ ಇಲ್ಲಿ ಬಡಾವಣೆ, ಶಾಲೆ, ಗ್ರಾಮಗಳು ಕಟ್ಟಡಗಳು ತಲೆಯೆತ್ತಿವೆ. ಈ ಘಟಕ ಯಾವುದೇ ಅನುಮತಿ ಪಡೆಯದೇ ಕಾರ್ಯ ನಿರ್ವಹಿಸುತ್ತಿದೆ ಎಂಬ ಮಾಹಿತಿಯೂ ಇದೆ. ಈ ಘಟಕದಿಂದ ಆಗು ತ್ತಿರುವ ಸಮಸ್ಯೆ ಕುರಿತು ಮಾಲಿನ್ಯ ನಿಯಂತ್ರಣ ಮಂಡಳಿ ಗಮನ ಸೆಳೆದರೂ ಪ್ರಯೋಜನವಾಗಿಲ್ಲ ಎಂದ ಬೇಸರ ವ್ಯಕ್ತಪಡಿಸಿದರು.

ಆಸ್ಪತ್ರೆಗಳ ತ್ಯಾಜ್ಯವನ್ನು ಘಟಕದಲ್ಲಿ ದಿನದ 24 ಗಂಟೆಯೂ ಸುಡಲಾಗುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಹಲವಾರು ಬಾರಿ ನೋಟಿಸ್ ನೀಡಿದ್ದು, ಅವರು ಪರಿಶೀಲನೆಗೆ ಬಂದಾಗ ಯಾವುದೇ ಮಾಲಿನ್ಯ ಬಾರದಂತೆ ನೋಡಿಕೊಂಡು ನಂತರ ಅದೇ ರೀತಿಯ ಕಾರ್ಯ ನಿರ್ವಹಣೆ ಮುಂದುವರಿಸುತ್ತಿದ್ದಾರೆ. ಇದರಿಂದಾಗಿ ವರುಣ, ದಂಡಿಕೆರೆ, ಪಿಲ್ಲಳ್ಳಿ ವರುಣಾ ಗ್ರಾಮದ ಜನರಿಗೆ ಅನಾರೋಗ್ಯ ಭೀತಿ ಕಾಡುತ್ತಿದೆ. ಹೀಗಾಗಿ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಇತ್ತ ಗಮನಹರಿಸಿ ಅದರ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಪ್ರದೀಪ್ ಕೃಪಾಕರ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ್ ಮತ್ತಿತರು ಉಪಸ್ಥಿತರಿದ್ದು.

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ ಶುಕ್ರವಾರ 15 ನವೆಂಬರ್ 2024

ವಿಶ್ವ ಮಧುಮೇಹ ದಿನ: ಜನ ಜಾಗೃತಿ ಜಾಥಾ

ಮಧುಮೇಹದಿಂದ ಬಳಲುತ್ತಿರುವವರಿಗೆ ಸೂಕ್ತ ಚಿಕಿತ್ಸೆ ಅಗತ್ಯ



ವಿಶ್ವ ಮಧುಮೇಹ ದಿನದ ಅಂಗವಾಗಿ ಭಾನವಿ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಸಾರ್ವಜನಿಕರ ಜಾಗೃತಿ ಜಾಥಾಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ನ.14(ಜಿಎ)–ವಿಶ್ವ ಮಧುಮೇಹ ದಿನದ ಅಂಗವಾಗಿ ಭಾನವಿ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಸಾರ್ವಜನಿಕರ ಜಾಗೃತಿ ಜಾಥಾಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ದೇಶದಲ್ಲಿ ಹೆಚ್ಚು ಜನರು ಮಧುಮೇಹ ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಸೂಕ್ತ ಸಮಯಕ್ಕೆ ಉತ್ತಮ ಚಿಕಿತ್ಸೆ ಪಡೆದರೆ ಮಧುಮೇಹವನ್ನು ನಿಯಂತ್ರಣಕ್ಕೆ ತರಬಹುದು. ಈ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವವರು ಸೂಕ್ತ ಸಮಯಕ್ಕೆ ಚಿಕಿತ್ಸೆ ಪಡೆಯದಿದ್ದರೆ ಮೂತ್ರಪಿಂಡ ವೈಫಲ್ಯ ಹಾಗೂ ಕಣ್ಣಿನ ಮೇಲೆ ಪರಿಣಾಮ ಬೀರುತ್ತದೆ. ಅದಕ್ಕಾಗಿ ವೈದ್ಯರ ಸಲಹೆಯಂತೆ ಉತ್ತಮ ಜೀವನ ಶೈಲಿ, ಆಹಾರ ಕ್ರಮ ಮತ್ತು ಕಾಲಕಾಲಕ್ಕೆ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಚಿಕಿತ್ಸೆ ಹಾಗೂ ಪರಿಹಾರ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಭಾನವಿ ಆಸ್ಪತ್ರೆ ವತಿಯಿಂದ ಈ ಕಾರ್ಯಕ್ರಮ ನಡೆಸುತ್ತಿರುವುದು ಪ್ರಶಂಸನೀಯ. ರೋಗ ಬರದ ರೀತಿಯಲ್ಲಿ ತಡೆಯುವುದು ಹಾಗೂ ಬಂದ ನಂತರದ ತೀವ್ರವಾಗದ ನಿಟ್ಟಿನಲ್ಲಿ ಚಿಕಿತ್ಸೆ ಪಡೆಯುವ ವಿಧಾನಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಆಸ್ಪತ್ರೆ ಮುಂಭಾಗದಿಂದ ಆರಂಭವಾದ ಜಾಥಾವು ವಿಜಯ ಬ್ಯಾಂಕ್ ವೃತ್ತದಿಂದ ಎ2 ಜೆಡ್ ಮಾರ್ಗವಾಗಿ ಮರಳಿ ಆಸ್ಪತ್ರೆ ತಲುಪಿತ್ತು. ಈ ವೇಳೆ ವೈದ್ಯರಾದ ಡಾ.ವಿಜಯ್, ಡಾ.ಚಂದನ್ ಸೇರಿದಂತೆ ಭಾನವಿ ಆಸ್ಪತ್ರೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಐಎಎಸ್ ಅಧಿಕಾರಿ ಸಿ.ಶಿಖಾ ಕೇಂದ್ರ ಸೇವೆಗೆ



ಬೆಂಗಳೂರು: ರಾಜ್ಯ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿ, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಾದ ಸಿ.ಶಿಖಾ ಅವರು ಕೇಂದ್ರ ಸೇವೆಗೆ ವರ್ಗಾವಣೆಗೊಂಡಿದ್ದಾರೆ.

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ಕಾರ್ಯದರ್ಶಿಯಾಗಿ ಸಿ.ಶಿಖಾ ನೇಮಕವಾಗಿದ್ದು, ಶೀಘ್ರವೇ ಅಧಿಕಾರ ವಹಿಸಿಕೊಳ್ಳಲಿದ್ದಾರೆ. 2004ರ ಐಎಎಸ್ ಅಧಿಕಾರಿಯಾಗಿರುವ ಶಿಖಾ ಅವರು ಮೈಸೂರು ಜಿಲ್ಲಾಧಿಕಾರಿ, ಸೆಸ್ಕಾಂ ಎಂಡಿ, ಬೆಸ್ಕಾಂ ಎಂಡಿ, ಪಿಯು ಬೋರ್ಡ್ ನಿರ್ದೇಶಕಿ, ಬಿಎಂಟಿಸಿ, ವಾಣಿಜ್ಯ ತೆರಿಗೆ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ಪತಿ ಅಜಯ್ ನಾಗಭೂಷಣ್ ಕೂಡ ಐಎಎಸ್ ಅಧಿಕಾರಿಯಾಗಿದ್ದಾರೆ

ರಾಜ್ಯ, ಹೊರರಾಜ್ಯಗಳ ನಾಟಕಗಳಿಗೆ ಆಹ್ವಾನ

ಮೈಸೂರು,ನ.14– ಜನವರಿ 14 ರಿಂದ 19 ರವರೆಗೆ ರಂಗಾಯಣದ ಆವರಣದಲ್ಲಿ ಬಹುರೂಪಿ ನಾಟಕೋತ್ಸವ ನಡೆಯಲಿದ್ದು, ರಾಜ್ಯದ ಮತ್ತು ಹೊರರಾಜ್ಯದ ರಂಗತಂಡ ಗಳಿಂದ ಕನ್ನಡ ಮತ್ತು ಇತರೆ ಭಾಷೆಗಳ ನಾಟಕಗಳನ್ನು ಆಹ್ವಾನಿಸಲಾಗಿದೆ. ಈ ವರ್ಷದ ಬಹುರೂಪಿಯಲ್ಲಿ ಮುಖ್ಯ ನಾಟಕಗಳೊಂದಿಗೆ ಮಕ್ಕಳಿಗಾಗಿ ಪ್ರದರ್ಶಿಸುವ ನಾಟಕಗಳನ್ನು ಆಹ್ವಾನಿಸಲಾಗಿದೆ. ನಾಟಕೋತ್ಸವದಲ್ಲಿ ಭಾಗವಹಿಸಲು ಇಚ್ಛೆಯುಳ್ಳ ರಂಗತಂಡಗಳು www.rangayanamysore. karnataka.gov.inನಲ್ಲಿ ನಾಟಕದ ವಿವರಗಳನ್ನು ಭರ್ತಿ ಮಾಡಿ ನ.30ರೊಳಗಾಗಿ ರಂಗಾಯಣಕ್ಕೆ ಸಲ್ಲಿಸಬೇಕು.

ಮಕ್ಕಳ ದಿನಾಚರಣೆ ಪ್ರಯುಕ್ತ ಉಪಾಹಾರ ವಿತರಣೆ...



ಮಕ್ಕಳ ದಿನಾಚರಣೆ ಪ್ರಯುಕ್ತ ಮೈಸೂರು ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಅಶ್ವಿನಿ ಎಂಟರ್‌ಪ್ರೈಸಸ್ ಮತ್ತು ಬಿಲ್ಡರ್ಸ್ ವತಿಯಿಂದ ಮಕ್ಕಳಿಗೆ ವೆಜಿಟೆಬಲ್ ಪಲಾವ್, ಕೇಸರಿ ಬಾತ್ ವಿತರಿಸಲಾಯಿತು. ಈ ವೇಳೆ ಪ್ರಾಧಿಕಾರದ ಸಿಇಓ ರುದ್ರೇಶ್, ಅಶ್ವಿನಿ ಎಂಟರ್ ಪ್ರೈಸಸ್ ಮಾಲೀಕರಾದ ಜಿ.ಮಂಜುಗೌಡ, ಜೆಪಿಎ ಮಲ್ಲಿಕಾರ್ಜುನ್, ಮಲ್ಲಿಗೆ ಇಡ್ಲಿ ನಾತಿಕ್, ಸಂಪತ್, ಅಸ್ಲಾಂ ಖಾನ್, ಪ್ರಾಧಿಕಾರದ ಅಧಿಕಾರಿಗಳು, ಮಳಿಗೆದಾರರು ಇದ್ದರು.


ನಾಳೆ ಒಡನಾಡಿ ಮಕ್ಕಳಿಗೆ ಸೈಕಲ್ ಜಾಥಾ

ಮೈಸೂರು,ನ.14(ಬಿಎಲ್‌ಯು)–ಒಡನಾಡಿ ಸಂಸ್ಥೆಯ ಮಕ್ಕಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ನ.16ರಂದು ಸೈಕಲ್ ಜಾಥಾ ಆಯೋಜಿಸಲಾಗಿದೆ. ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಅಂದು ಬೆಳಗ್ಗೆ 6ರಿಂದ 8 ಗಂಟೆವರೆಗೆ ಈ ವಿಭಿನ್ನ ಕಾರ್ಯಕ್ರಮ ಆಯೋಜಿಸಲಾಗಿದೆ. ಒಡನಾಡಿ ಸಂಸ್ಥೆಯ ಮಕ್ಕಳನ್ನು ಸೈಕಲ್‌ನಲ್ಲಿ ಕರೆದುಕೊಂಡು ಹೋಗಿ ಕೆರೆಯನ್ನು ಸಣ್ಣ ಪ್ರಮಾಣದಲ್ಲಿ ಸ್ವಚ್ಛಗೊಳಿಸಿ, ಗಿಡ ನೆಡಲಾಗುವುದು. ಜೊತೆಗೆ ಸುತ್ತಲಿನ ಪ್ರಾಣಿ–ಪಕ್ಷಿಗಳ ಬಗ್ಗೆ ಮಕ್ಕಳಿಗೆ ತಿಳುವಳಿಕೆ ನೀಡಲಾಗುವುದು. ಆ ವೇಳೆ ಮಕ್ಕಳು ಪರಿಸರದ ಗೀತೆಗಳನ್ನು ಹಾಡಲಿದ್ದಾರೆ. ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ ಮತ್ತು ಪರಶು ಈ ಕಾರ್ಯಕ್ರಮ ಆಯೋಜಿಸಿದ್ದಾರೆ.

ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ

ಸಹಕಾರ ಪದವೀಧರರಿಗೆ ಸಹಕಾರಿ ಸಂಘ–ಸಂಸ್ಥೆಗಳ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಿ

ಸಹಕಾರ ಸಚಿವರಲ್ಲಿ ರಾಜ್ಯ ಸಹಕಾರ ಮಹಾಮಂಡಲದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ಮನವಿ



ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ ಮಾಡಿದ್ದನ್ನು ಕಾಣಬಹುದು.

ಮೈಸೂರು,ನ.14(ಪಿಎಂ)– ಸಹಕಾರ ವಿಷಯದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಸಹಕಾರಿ ಸಂಘ–ಸಂಸ್ಥೆಗಳಲ್ಲಿ ಉದ್ಯೋಗ ದೊರಕಲು ಮೀಸಲಾತಿ ಕಲ್ಪಿಸಬೇಕೆಂದು ಸಹಕಾರ ಸಚಿವರಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು, ಮಾಜಿ ಸಚಿವರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಲದ ಅಧ್ಯಕ್ಷ ಜಿ.ಟಿ. ದೇವೇಗೌಡರು ಮನವಿ ಮಾಡಿದರು.

ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಗುರುವಾರ ನಡೆದ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವೈದ್ಯ ವಿಷಯದಲ್ಲಿ ಪದವಿ ಪಡೆದವರು ವೈದ್ಯರಾದರೆ, ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದವರು ಇಂಜಿನಿಯರ್ ಆಗುತ್ತಾರೆ. ಅದೇ ರೀತಿ ಸಹಕಾರ ವಿಷಯದಲ್ಲಿ ಶಿಕ್ಷಣ ಪಡೆದವರಿಗೆ ಸಹಕಾರ ಕ್ಷೇತ್ರದ ಸಂಘ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಹೆಚ್ಚಿನ ಅವಕಾಶ ಕಲ್ಪಿಸಬೇಕು. ಹಾಗಾಗಿ ಮೀಸಲಾತಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದರು.

ರಾಜ್ಯದಲ್ಲಿರುವ 47 ಸಾವಿರ ಸಹಕಾರ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಲು ಅವಕಾಶವಿದೆ. ಸಹಕಾರ ವಿಷಯದಲ್ಲಿ ಶಿಕ್ಷಣ ಪಡೆದವರಿಗೆ ಸಹಕಾರ ಸಂಘ ಸಂಸ್ಥೆಗಳ ಉದ್ಯೋಗದಲ್ಲಿ ಮೊಟ್ಟ ಮೊದಲ ಆದ್ಯತೆ ನೀಡಲು ಮೀಸಲಾತಿ ಸಹಕಾರಿ. ಅಲ್ಲದೆ, ಹೆಚ್ಚು ಯುವ ಜನರು ಸಹಕಾರ ಶಿಕ್ಷಣ ಪಡೆಯಲು ಉತ್ತೇಜನ ನೀಡಲೂ ಈ ಮೀಸಲಾತಿ ಜಾರಿ ಸೂಕ್ತ ಎಂದು ತಿಳಿಸಿದರು. ಯಾವುದೇ ಸರ್ಕಾರದಿಂದ ಸರ್ವರ ಅಭಿವೃದ್ಧಿ ಅಸಾಧ್ಯ. ನಿಗಮಗಳ ಮೂಲಕ ಕೆಲ ಫಲಾನುಭವಿಗಳಿಗೆ ಸಹಾಯಧನ ನೀಡಬಹುದು. ಆದರೆ ಸಹಕಾರ ಸಂಸ್ಥೆಗಳಲ್ಲಿ ಹಸು ಸಾಲ, ಗುಡಿ ಕೈಗಾರಿಕೆ ಸಾಲ, ಬೀದಿ ಬದಿ ವ್ಯಾಪಾರ ಸಾಲ, ಶಿಕ್ಷಣ ಸಾಲ ಸೇರಿದಂತೆ ಹಲವು ವಿಧದ ಸಾಲಸೌಲಭ್ಯ ಲಭ್ಯವಿದೆ. ಈ ರೀತಿಯ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಹಾಗಾಗಿ ಸಹಕಾರಿಗಳು ತಾವೊಬ್ಬ ಸಹಕಾರಿ ಎಂಬುದಕ್ಕೆ ಹೆಮ್ಮೆಪಡಬೇಕು ಎಂದು ಹೇಳಿದರು.

ನಬಾರ್ಡ್‌ನಿಂದ ಸಾಲದ ಮೊತ್ತ ಇಳಿಕೆ: ರಿಯಾಯಿತಿ ಬಡ್ಡಿ ದರದಲ್ಲಿ ನೀಡುತ್ತಿದ್ದ ಸಾಲದ ಮೊತ್ತವನ್ನು ನಬಾರ್ಡ್ ಇಳಿಕೆ ಮಾಡಿದ್ದು, ಕಳೆದ ಸಾಲಿಗೆ ಹೋಲಿಸಿದರೆ 2024–25ನೇ ಸಾಲಿನಲ್ಲಿ ಶೇ.58ರಷ್ಟು ಕಡಿಮೆ ಮಾಡಲಾಗಿದೆ. ಇದರಿಂದ ರಾಜ್ಯದಲ್ಲಿ ಕೃಷಿ ಸಾಲ ವಿತರಣೆಗೆ ಹಣದ ಕೊರತೆ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹೀಗಾಗಿ ಕೃಷಿ ಪತ್ತಿನ ಸಹಕಾರ ಸಂಘ, ಡಿಸಿಸಿ ಬ್ಯಾಂಕ್‌ಗಳು ಹಾಗೂ ರೈತರು ಸಂಕಷ್ಟಕ್ಕೆ ಸಿಲುಕುತ್ತಿವೆ. ಈ ರೀತಿಯ ಸಾಲದ ಮೊತ್ತವನ್ನು ಕಡಿಮೆ ಮಾಡದಂತೆ ಮುಖ್ಯಮಂತ್ರಿಗಳು ಮತ್ತು ಸಹಕಾರ ಸಚಿವರು ಕೇಂದ್ರಕ್ಕೆ ಪತ್ರ ಮುಖೇನ ಮನವಿ ಮಾಡಿದ್ದು, ಅಷ್ಟು ಮಾತ್ರಕ್ಕೆ ಸೀಮಿತವಾಗದೆ, ಸಹಕಾರಿಗಳೆಲ್ಲರೂ ಸಂಘಟಿತರಾಗಿ ದೊಡ್ಡ ಚಳುವಳಿ ಮೂಲಕ ರೈತರು, ಕೃಷಿಕರು ಹಾಗೂ ಸಹಕಾರ ಸಂಘ ಸಂಸ್ಥೆಗಳ ಉಳಿವಿಗಾಗಿ ಹೋರಾಡಬೇಕಾಗಿದೆ ಎಂದು ನುಡಿದರು.

1856ರಲ್ಲಿ ಇಂಗ್ಲೆಂಡ್‌ನಲ್ಲಿ ರಾಬರ್ಟ್ ಓವೆನ್ ಅವರು ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ ಶೋಷಣೆ ಆಗುತ್ತಿದ್ದನ್ನು ತಪ್ಪಿಸಲು ಚಳುವಳಿ ಪ್ರಾರಂಭಿಸಿದರು. ಇದು ಸಹಕಾರ ಚಳುವಳಿಯ ಉದಯಕ್ಕೆ ನಾಂದಿ ಹಾಡಿತು. ಜೊತೆಗೆ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ಹಾಲಿನ ಕೇಂದ್ರ ಸ್ಥಾಪಿಸಬೇಕೆಂದು ಕನಸು ಕಂಡು ಹಲವು ಕಾರ್ಯಕ್ರಮಗಳನ್ನು ರೂಪಿಸಿದರು. ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಮಂತ್ರಿಯಾಗಿದ್ದ ಕಡಿಮೆ ಅವಧಿಯಲ್ಲೇ ಸಚಿವರಾಗಿದ್ದ ತ್ರಿಭುವನ್ ದಾಸ್ ಪಟೇಲ್ ಅವರ ಮೂಲಕ ಗುಜರಾತ್‌ನ ಮೇಡಕ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಸಹಕಾರ ಸಂಘ ಪ್ರಾರಂಭಿಸಿದರು. ಜೊತೆಯಲ್ಲೇ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯನ್ನು (ಎನ್‌ಡಿಡಿಬಿ) ಸಹ ಪ್ರಾರಂಭ ಮಾಡಿದ್ದರು. ಈ ಮಂಡಳಿಯ ಅಧ್ಯಕ್ಷರಾಗಿ ಡಾ.ವರ್ಗಿಸ್ ಕುರಿಯನ್ ದೇಶದಲ್ಲಿ ಕ್ಷೀರ ಕ್ರಾಂತಿ ಉಂಟು ಮಾಡಿದರು ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ ಮಾಡಲಾಯಿತು. ಸಹಕಾರ ಸಚಿವ ಕೆ.ಎನ್.ರಾಜಣ್ಣ, ಮಾಜಿ ಸಚಿವ ಎಸ್.ಟಿ.ಸೋಮಶೇಖರ್, ಸಹಕಾರ ಇಲಾಖೆ ನಿಬಂಧಕ ಟಿ.ಹೆಚ್.ಎಂ. ಕುಮಾರ್, ಗ್ರಾಹಕರ ಮಹಾಮಂಡಳದ ಅಧ್ಯಕ್ಷ ಜಿ.ಪಿ.ಪಾಟೀಲ್, ಬೆಂಗಳೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷ ವಿಜಯ್‌ದೇವ್, ಬಮೂಲ್ ಅಧ್ಯಕ್ಷ ವಿಜಯ್‌ಕುಮಾರ್, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಜಗದೀಶ್, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ನವೀನ್, ಮಹಾಮಂಡಳದ ನಿರ್ದೇಶಕರು, ಕೆಎಂಎಫ್ ನಿರ್ದೇಶಕರು, ವಸತಿ ಮಹಾಮಂಡಳದ ನಿರ್ದೇಶಕರು, ಡಿಸಿಸಿ ಬ್ಯಾಂಕ್ ನಿರ್ದೇಶಕರು, ಸಹಕಾರ ಇಲಾಖೆ ಅಧಿಕಾರಿಗಳು, ಹಿರಿಯ ಸಹಕಾರಿಗಳು ಪಾಲ್ಗೊಂಡಿದ್ದರು.

ಪ್ರತಿದಿನ ಕೋಟಿ ಲೀ. ಹಾಲು ಉತ್ಪಾದನೆ; 30 ಕೋಟಿ ಸಂದಾಯ

ಕರ್ನಾಟಕದಲ್ಲಿಂದು ಪ್ರತಿದಿನ ಸುಮಾರು 1 ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತಿದ್ದು, ಹಾಲು ಉತ್ಪಾದಕರಿಗೆ ಪ್ರತಿದಿನ 30 ಕೋಟಿ ಹಣ ಸಂದಾಯವಾಗುತ್ತಿದೆ. ನಮ್ಮ ರಾಜ್ಯದ ಕೆಎಂಎಫ್ ಕೂಡ ಎತ್ತರಕ್ಕೆ ಬೆಳೆದಿದೆ ಎಂದು ಜಿ.ಟಿ.ದೇವೇಗೌಡರು ಸಂತಸ ವ್ಯಕ್ತಪಡಿಸಿದರು. ಜವಾಹರ್‌ಲಾಲ್ ನೆಹರು ಪ್ರಧಾನಿಯಾಗಿದ್ದಾಗ ಪಂಚವಾರ್ಷಿಕ ಯೋಜನೆ ಮೂಲಕ ಸಹಕಾರ ಕ್ಷೇತ್ರಕ್ಕೆ ಹಲವು ಯೋಜನೆಗಳನ್ನು ಕೊಟ್ಟರು. ಆ ಮೂಲಕ ಆಹಾರ ಉತ್ಪಾದನೆ, ಗೊಬ್ಬರ ಉತ್ಪಾದನೆ, ವ್ಯಾಪಾರ ವಹಿವಾಟು, ಕೈಗಾರಿಕಾಭಿವೃದ್ಧಿಗೆ ಒತ್ತು ಕೊಟ್ಟರು. ಅದರ ನೆನಪಿಗಾಗಿಯೇ ಅವರ ಜನ್ಮದಿನದಂದು ದೇಶದಾದ್ಯಂತ ಸಹಕಾರ ಸಪ್ತಾಹ ಆಚರಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು.

ಮಹಾತ್ಮಗಾಂಧಿ ಅವರು ದೂರದೃಷ್ಟಿ ಇಟ್ಟುಕೊಂಡು ರಾಮರಾಜ್ಯವಾಗಬೇಕೆಂದು ಹೇಳಿದ್ದಾರೆ. ಹಳ್ಳಿಯಲ್ಲಿ ಒಂದು ಸಹಕಾರ ಸಂಘ ತೆರೆದರೆ ರೈತರ ಕಲ್ಯಾಣ ಕಾರ್ಯಕ್ರಮಗಳು ಜರುಗಲಿವೆ. ರೈತರಿಗೆ ಕೃಷಿ ಸಲಕರಣೆ, ಗೊಬ್ಬರ, ಕ್ರಿಮಿನಾಶಕ ಸೇರಿದಂತೆ ಅಗತ್ಯ ಸವಲತ್ತುಗಳನ್ನು ಸಹಕಾರ ಸಂಘಗಳ ಮೂಲಕ ನೀಡಬಹುದು. ಅದೇ ರೀತಿ ಹಳ್ಳಿಯಲ್ಲಿ ಒಂದು ಶಾಲೆ ತೆರೆದರೆ ಪ್ರತಿಯೊಬ್ಬರಿಗೆ ಶಿಕ್ಷಣ ದೊರಕುತ್ತದೆ. ಹಾಗೆ ಗ್ರಾಮ ಪಂಚಾಯಿತಿ ಇದ್ದರೆ ಆ ಗ್ರಾಮಕ್ಕೆ ಕುಡಿಯುವ ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ಅಗತ್ಯ ಮೂಲಸೌಲಭ್ಯ ದೊರಕಲಿದೆ. ಜೊತೆಗೆ ನೈರ್ಮಲ್ಯ ಕಾಪಾಡಬಹುದು. ಹೀಗಿದ್ದಾಗ ಮಾತ್ರ ರಾಮರಾಜ್ಯ ಕಾಣಲಿಕ್ಕೆ ಸಾಧ್ಯ. ಆದ್ದರಿಂದ ಸಹಕಾರಿಗಳಾದ ನಾವೆಲ್ಲರೂ ಕೈ ಜೋಡಿಸಿ ಕೆಲಸ ಮಾಡಬೇಕೆಂದು ಸಭೆಯಲ್ಲಿದ್ದ ಸಾವಿರಾರು ಸಹಕಾರಿಗಳಲ್ಲಿ ಮನವಿ ಮಾಡಿದರು.

ಕಾಸ್ಮೋಪಾಲಿಟನ್ ಕ್ಲಬ್‌ನ ನೂತನ ಕಮಿಟಿ ಸದಸ್ಯರು



ಮೈಸೂರಿನ ಪ್ರತಿಷ್ಠಿತ ಕಾಸ್ಮೋಪಾಲಿಟನ್ ಕ್ಲಬ್‌ನ ನೂತನ ಆಡಳಿತ ಮಂಡಳಿ ಆಯ್ಕೆ ಮಾಡಲಾಗಿದೆ. ಕ್ಲಬ್‌ನ ಅಧ್ಯಕ್ಷರಾಗಿ ಎಂ.ವಿ.ಶ್ರೀನಿವಾಸ್, ಉಪಾಧ್ಯಕ್ಷರಾಗಿ ಕೆ.ಬಿ.ನಾಗೇಂದ್ರ, ನಿಕಟಪೂರ್ವ ಅಧ್ಯಕ್ಷ ಹೆಚ್.ಎಸ್.ವೆಂಕಟೇಶ್, ಗೌರವ ಕಾರ್ಯದರ್ಶಿ ಎಂ.ಎನ್.ನಂದೀಶ್, ಖಜಾಂಚಿ ಬಿ.ಎನ್.ಶೇಷಾದ್ರಿ, ಕಮಿಟಿ ಸದಸ್ಯರಾಗಿ ಆರ್.ಆನಂದ್, ಎಂ.ಎನ್.ಘನವಂತ, ಜೆ.ಎ.ಕುಮಾರ್, ಕೆ.ಮಹೇಶ್, ಎಂ.ರಾಜೀವ್, ಹೆಚ್.ರಾಜೇಂದ್ರಕುಮಾರ್, ಆರ್.ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಸಿಬಿಐ ತನಿಖೆಗೆ ನಿರಾಕರಿಸಿದ ಆರು ಸೇರಿ 10 ಅಕ್ರಮ ಗಣಿಗಾರಿಕೆ ಪ್ರಕರಣ ಲೋಕಾಯುಕ್ತಕ್ಕೆ

ಬೆಂಗಳೂರು, ನ.14– ಸಿಬಿಐ ತನಿಖೆಗೆ ನಿರಾಕರಿಸಿರುವ 6 ಸೇರಿದಂತೆ ಒಟ್ಟು 10 ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಲೋಕಾಯುಕ್ತ ವಿಶೇಷ ತನಿಖಾ ತಂಡಕ್ಕೆ ವಹಿಸಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ಸಚಿವ ಎಚ್.ಕೆ ಪಾಟೀಲ್ ತಿಳಿಸಿದರು.

ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿದ 'ಸಿ' ವರ್ಗದ 10 ಗಣಿ ಗುತ್ತಿಗೆದಾರರ ಪ್ರಕರಣಗಳನ್ನು ಸಹ ಈಗಿನ ಎಸ್‌ಐಟಿ ತನಿಖೆಗೆ ವಹಿಸಲು ನಿರ್ಣಯಿಸಲಾಗಿದೆ ಎಂದು ಸಚಿವರು ವಿವರಿಸಿದರು. ಮೆ. ಮೈಸೂರು ಮ್ಯಾಂಗನೀಸ್ ಕಂಪನಿ, ಮೆ. ಎಂ.ದಶರಥ ರಾಮಿರೆಡ್ಡಿ, ಮೆ. ಅಲ್ಲಂ ವೀರಭದ್ರಪ್ಪ, ಮೆ. ಕರ್ನಾಟಕ ಲಿಂಪೊ, ಮೆ. ಅಂಜನಾ ಮಿನರಲ್ಸ್, ಮೆ. ರಾಜೀಯ ಖಾನುಂ, ಮೆ. ಮಿಲನ ಮಿನರಲ್ಸ್ (ಮಹಾಲಕ್ಷ್ಮಿ ಅಂಡ್ ಕೈನಿ), ಮೆ. ಎಂ.ಶ್ರೀನಿವಾಸುಲು, ಮೆ. ಚನ್ನಕೇಶವರೆಡ್ಡಿ (ಲಕ್ಷ್ಮೀನರಸಿಂಹ ಮೈನಿಂಗ್ ಕಂಪನಿ ಮತ್ತು ಮೆ. ಜಿ.ರಾಯಶೇಖರ್ ಕಂಪನಿಗಳು ಅಕ್ರಮ ಗಣಿಗಾರಿಕೆಗಳಾಗಿದ್ದು, ಮಂಜೂರಾದ ಗುತ್ತಿಗೆ ಪ್ರದೇಶದ ಹೊರಗೆ ಶೇ.10ಕ್ಕಿಂತ ಹೆಚ್ಚು ಗಣಿಗಾರಿಕೆ ಹೊಂಡಗಳು ಮತ್ತು ಮಂಜೂರಾದ ಗುತ್ತಿಗೆಗಿಂತ ಹೆಚ್ಚು ಎಂದು ಕಂಡುಬಂದಿರುವ ಹಿನ್ನೆಲೆಯಲ್ಲಿ ಮತ್ತು ಅರಣ್ಯ ಸಂರಕ್ಷಣೆ ಕಾಯ್ದೆಯ ಉಲ್ಲಂಘನೆಯಲ್ಲಿ ತೊಡಗಿರುವ ಗುತ್ತಿಗೆಗಳು ಮತ್ತು ಇತರೆ ಗುತ್ತಿಗೆ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿರುವುದನ್ನು ಒಳಗೊಂಡಿರುತ್ತದೆ. ಆದ್ದರಿಂದ ಈ ಮೇಲ್ಕಂಡ ಕಂಪನಿಗಳ ಗಣಿ ಗುತ್ತಿಗೆಗಳ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವ ಸಂಬಂಧ ಲೋಕಾಯುಕ್ತದ ವಿಶೇಷ ತನಿಖಾ ದಳಕ್ಕೆ ವಹಿಸಲು ಸಚಿವ ಸಂಪುಟ ತೀರ್ಮಾನಿಸಿದೆ ಎಂದು ಸಚಿವರು ವಿವರಿಸಿದರು.

ಗೋವಾದ ಮರ್ಮಗೋವಾ ಮತ್ತು ಪಣಜಿ, ತಮಿಳುನಾಡಿನ ಎನ್ನೋರ್ ಮತ್ತು ಚೆನ್ನೈ, ಕರ್ನಾಟಕದ ನವ ಮಂಗಳೂರು ಮತ್ತು ಕಾರವಾರ ಬಂದರುಗಳಲ್ಲಿ ಹಾಗೂ ಆಂಧ್ರಪ್ರದೇಶದ ಕೃಷ್ಣಪಟ್ಟಣಂ, ಕಾಕಿನಾಡ ಮತ್ತು ವಿಶಾಖಪಟ್ಟಣಂ ಬಂದರುಗಳಲ್ಲಿ ಅಕ್ರಮ ಅದಿರು ಸಾಗಾಣಿಕೆ ಪ್ರಕರಣಗಳನ್ನು ಸಿಬಿಐ ವಾಪಸ್ ಕಳುಹಿಸಿರುವ ಹಿನ್ನೆಲೆಯಲ್ಲಿ ಆ ಪ್ರಕರಣಗಳ ಬಗ್ಗೆ ಲೋಕಾಯುಕ್ತ ವಿಶೇಷ ತನಿಖಾ ತಂಡದಿಂದ ತನಿಖೆ ಮಾಡಿಸಲು ನಿರ್ಣಯಿಸಲಾಗಿದೆ ಎಂದರು.

ಅಪಘಾತದಲ್ಲಿ ಗಾಯಗೊಂಡ ಹಸು–ಕರು ರಕ್ಷಣೆಗೆ ಮುಂದಾದವರ ಮೇಲೆ ಹಲ್ಲೆ: ಪ್ರಕರಣ ದಾಖಲು

ಮೈಸೂರು, ನ.14(ಎಸ್‌ಬಿಡಿ)– ವಾಹನ ಡಿಕ್ಕಿ ಹೊಡೆದು ಗಾಯಗೊಂಡಿದ್ದ ಹಸು–ಕರುವನ್ನು ಚಿಕಿತ್ಸೆಗೆ ಸಾಗಿಸಲು ಮುಂದಾದವರ ಮೇಲೆ ಹಲ್ಲೆ ನಡೆಸಿ, ಹಸು–ಕರುವನ್ನು ಆಟೋದಲ್ಲಿ ಎಲ್ಲಿಗೋ ಸಾಗಿಸಿದ ಘಟನೆ ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ನಡೆದಿದೆ. ನಗರದ ಎನ್‌ಜಿಓವೊಂದರ ಸಿಬ್ಬಂದಿ ನೀಡಿದ ದೂರಿನನ್ವಯ ಉದಯಗಿರಿ ಠಾಣೆ ಪೊಲೀಸರು ಘಟನೆ ಸಂಬಂಧ ಬುಧವಾರ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ನ.10ರಂದು ರಾತ್ರಿ ವಾಹನ ಡಿಕ್ಕಿ ಹೊಡೆದ ಪರಿಣಾಮ ಹಸು–ಕರು ಗಾಯಗೊಂಡು ನರಳುತ್ತಿದ್ದವು. ತೀವ್ರ ರಕ್ತಸ್ರಾವವನ್ನು ಗಮನಿಸಿದ ವ್ಯಕ್ತಿಯೊಬ್ಬರು ನೆರವಿಗಾಗಿ ಎನ್‌ಜಿಓ ಸಿಬ್ಬಂದಿಗೆ ಕರೆ ಮಾಡಿದರು. ಕೂಡಲೇ ಅವರು ಇಬ್ಬರು ಮಹಿಳಾ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿದರು. ಆ ವ್ಯಕ್ತಿ ಹಾಗೂ ಇಬ್ಬರು ಎನ್‌ಜಿಓ ಸಿಬ್ಬಂದಿ, ಗಾಯಗೊಂಡಿದ್ದ ಹಸು–ಕರುವನ್ನು ಚಿಕಿತ್ಸೆಗೆ ಸಾಗಿಸಲು ಆಂಬುಲೆನ್ಸ್ ವ್ಯವಸ್ಥೆ ಮಾಡುವ ವೇಳೆ ಆಟೋ ಹಾಗೂ ಬುಲೆಟ್ ಬೈಕ್‌ನಲ್ಲಿ ಬಂದ ಮೂರ್‍ನಾಲ್ಕು ಮಂದಿ, ಎನ್‌ಜಿಓಗೆ ಕರೆ ಮಾಡಿದ್ದ ವ್ಯಕ್ತಿ ಮೇಲೆ ಹಲ್ಲೆ ನಡೆಸಿ ಹಸು–ಕರುವನ್ನು ಆಟೋದಲ್ಲಿ ಎಲ್ಲಿಗೋ ಸಾಗಿಸಿದ್ದಾರೆ. ನಂತರ ಘಟನೆ ಬಗ್ಗೆ ದೂರು ನೀಡಲೆಂದು ಮೂವರೂ ಉದಯಗಿರಿ ಪೊಲೀಸ್ ಠಾಣೆಗೆ ತೆರಳುವಾಗಲೂ ಹಲ್ಲೆ ನಡೆಸಿದ್ದವರ ಸ್ನೇಹಿತರು ಹಾಗೂ ಸಂಬಂಧಿಕರು ಬೆದರಿಕೆ ಹಾಕಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರನ್ನು ಕಿರಣ್‌ಕುಮಾರ್, ಅಪ್ಪಿ, ಕುಮಾರ್, ಚಾರ್ಲ್ಸ್, ಧನಂಜಯ್, ಮಂಜು, ಇನ್ನಿತರರು ಸನ್ಮಾನಿಸಿ, ಶುಭಾಶಯ ಕೋರಿದರು.

ದೇಶ - ವಿದೇಶ

ಇಸ್ರೇಲ್ ವೈಮಾನಿಕ ದಾಳಿ; ಬೈರುತ್‌ನಲ್ಲಿ 28 ಮಂದಿ ಸಾವು



ಬೈರುತ್: ಲೆಬನಾನ್‌ನಲ್ಲಿ ಇಸ್ರೇಲ್ ಸೇನೆಯ ದಾಳಿ ಮತ್ತೆ ಮುಂದುವರೆದಿದೆ. ಬುಧವಾರ ಇಸ್ರೇಲ್ ಸೈನ್ಯವು ಲೆಬನಾನಿನ ರಾಜಧಾನಿ ಬೈರುತ್ ಬಳಿಯ ಹಳ್ಳಿಯೊಂದರಲ್ಲಿ ಬಾಂಬ್ ಸ್ಫೋಟ ನಡೆಸಿದೆ. ಇಸ್ರೇಲ್ ನಡೆಸಿದ ಈ ದಾಳಿಯಲ್ಲಿ 7 ಮಕ್ಕಳು ಸೇರಿದಂತೆ 28 ಮಂದಿ ಸಾವನ್ನಪ್ಪಿದ್ದು, 6 ಮಂದಿ ಗಾಯಗೊಂಡಿದ್ದಾರೆ. ಸ್ಥಳೀಯ ಮಾಧ್ಯಮಗಳ ಪ್ರಕಾರ, ಲೆಬನಾನ್‌ನ ಬೈರುತ್‌ನ ಉತ್ತರದಲ್ಲಿರುವ ಅಲ್ಮಾಟ್ ಗ್ರಾಮದ ಮೇಲೆ ಇಸ್ರೇಲ್ ಈ ದಾಳಿ ನಡೆಸಿದೆ. ಇಸ್ರೇಲ್ ದಾಳಿಯಿಂದ ಹಲವು ಕಟ್ಟಡಗಳಿಗೆ ಹಾನಿಯಾಗಿದೆ. ಇಸ್ರೇಲ್ ಈಗ ತನ್ನ ನಾಗರಿಕರನ್ನು ಗುರಿಯಾಗಿಸಿಕೊಂಡಿದೆ ಎಂದು ಲೆಬನಾನ್ ಸರ್ಕಾರ ಆರೋಪಿಸಿದೆ. ದಾಳಿಗೊಳಗಾದ ಗ್ರಾಮದಲ್ಲಿ ಹಿಜ್ಬುಲ್ಲಾದ ಯಾವುದೇ ನೆಲೆ ಇರಲಿಲ್ಲ ಅಥವಾ ಅದರ ಯಾವುದೇ ಸದಸ್ಯರು ಅಲ್ಲಿ ವಾಸಿಸುತ್ತಿರಲಿಲ್ಲ. ಈ ಗ್ರಾಮದಲ್ಲಿ ನಡೆದ ಇಸ್ರೇಲ್‌ನ ದಾಳಿಯಲ್ಲಿ ಸತ್ತವರೆಲ್ಲರೂ ಸಾಮಾನ್ಯ ಜನರಾಗಿದ್ದಾರೆ ಎಂದು ತಿಳಿದು ಬಂದಿದೆ. ಮತ್ತೊಂದೆಡೆ ಇಸ್ರೇಲ್ ಹಿಜ್ಬುಲ್ಲಾದ ನೆಲೆಗಳನ್ನು ಗುರಿಯಾಗಿಟ್ಟುಕೊಂಡು ಈ ದಾಳಿ ನಡೆಸಿದೆ ಎಂದು ಹೇಳಿದೆ.

ವೈದ್ಯರ ಎಡವಟ್ಟು; ಬಾಲಕನ ಎಡಗಣ್ಣಿನ ಬದಲು ಬಲಗಣ್ಣಿಗೆ ಆಪರೇಷನ್



ದೆಹಲಿ: ಕಣ್ಣಿನ ಶಸ್ತ್ರಚಿಕಿತ್ಸೆ ವೇಳೆ ಬೇಜವಾಬ್ದಾರಿತನ ತೋರಿರುವ ವೈದ್ಯರು 7 ವರ್ಷದ ಬಾಲಕನಿಗೆ ತಪ್ಪಾದ ಕಣ್ಣಿಗೆ ಆಪರೇಷನ್ ಮಾಡಿದ್ದಾರೆ. ಗ್ರೇಟರ್ ನೋಯ್ಡಾ ಆಸ್ಪತ್ರೆಯೊಂದರಲ್ಲಿ ಏಳು ವರ್ಷದ ಬಾಲಕನ ಎಡಗಣ್ಣಿನ ಬದಲು ಬಲಗಣ್ಣಿಗೆ ಆಪರೇಷನ್ ಮಾಡಲಾಗಿದೆ. ಈ ಶಸ್ತ್ರಚಿಕಿತ್ಸೆಗೆ 45,000 ರೂ. ಬಿಲ್ ಹಾಕಿದ್ದಾರೆ. ತಮ್ಮ ಮಗ ಎಡಗಣ್ಣಿನ ಶಸ್ತ್ರಚಿಕಿತ್ಸೆಗೆ ಹೋಗಿದ್ದಾನೆ. ಆದರೆ ವೈದ್ಯರು ಬಲಭಾಗದಲ್ಲಿ ಶಸ್ತ್ರಚಿಕಿತ್ಸೆ ಮಾಡಿದ್ದಾರೆ ಎಂದು ಆರೋಪಿಸಿ ಬಾಲಕ ಯುಧಿಷ್ಠಿರನ ಪೋಷಕರು ದೂರು ದಾಖಲಿಸಿದ್ದಾರೆ.

ಸೆಕ್ಟರ್ ಗಾಮಾ 1ರ ಆನಂದ್ ಸ್ಪೆಕ್ಟ್ರಮ್ ಆಸ್ಪತ್ರೆಯಲ್ಲಿ ನ.12ರಂದು ಅಪ್ರಾಪ್ತ ವಯಸ್ಕನ ಎಡಗಣ್ಣಲ್ಲಿ ಆಗಾಗ್ಗೆ ನೀರು ಬರುತ್ತಿದ್ದರಿಂದ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ವೈದ್ಯರು ಬಾಲಕನ ಕಣ್ಣಿನಲ್ಲಿ ವಸ್ತುವನ್ನು ಪತ್ತೆಹಚ್ಚಿದ್ದಾರೆ. ಅದಕ್ಕಾಗಿ ಚಿಕಿತ್ಸೆಗಾಗಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕೆಂದು ಸೂಚಿಸಿದ್ದಾರೆ. ಪೋಷಕರು ಒಪ್ಪಿದ ನಂತರ ವೈದ್ಯರು ಅದೇ ದಿನ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಮನೆಗೆ ಹಿಂದಿರುಗಿದ ನಂತರ, ಅವರ ಹೆತ್ತವರು ತಮ್ಮ ಮಗನ ಎಡಗಣ್ಣಿಗೆ ಆಪರೇಷನ್ ಮಾಡಿಲ್ಲ ಎಂದು ಅರಿತುಕೊಂಡಿದ್ದಾರೆ. ತಕ್ಷಣವೇ ಅವರು ಮತ್ತೊಂದು ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡಿದಾಗ ಎಡಗಣ್ಣಿಗೆ ಯಾವುದೇ ಶಸ್ತ್ರಕ್ರಿಯೆ ನಡೆದಿಲ್ಲ ಎಂದು ದೃಢಪಡಿಸಿದರು

ಭಾರತ ಮೂಲದ ತುಳಸಿ ಗಬ್ಬಾರ್ಡ್ ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ



ವಾಷಿಂಗ್‌ಟನ್: ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಡೊನಾಲ್ಡ್ ಟ್ರಂಪ್, ರಾಷ್ಟ್ರೀಯ ಗುಪ್ತಚರ ನಿರ್ದೇಶಕರಾಗಿ (ಡಿಎನ್‌ಐ) ಡೆಮಾಕ್ರಟಿಕ್ ಪಕ್ಷದ ಮಾಜಿ ಸದಸ್ಯೆ ತುಳಸಿ ಗಬ್ಬಾರ್ಡ್ ಅವರನ್ನು ನೇಮಕ ಮಾಡಲು ನಿರ್ಧರಿಸಿದ್ದಾರೆ.

ಮಾಜಿ ಕಾಂಗ್ರೆಸ್‌ನ ಲೆಫ್ಟಿನೆಂಟ್ ಕರ್ನಲ್ ತುಳಸಿ ಗಬ್ಬಾರ್ಡ್ ಡಿಎನ್‌ಐ ಆಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಘೋಷಿಸಲು ನನಗೆ ತುಂಬಾ ಸಂತೋಷವಾಗಿದೆ. ಎರಡು ದಶಕಗಳಿಗೂ ಹೆಚ್ಚು ಕಾಲ, ತುಳಸಿ ನಮ್ಮ ದೇಶದ ಮತ್ತು ಎಲ್ಲಾ ಅಮೆರಿಕನ್ನರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ಇದೀಗ ಭಾರತ ಮೂಲದ ಮತ್ತೊಬ್ಬರಿಗೆ ಉನ್ನತ ಹುದ್ದೆಯೊಂದು ದೊರೆತಂತಾಗಿದೆ. ತುಳಸಿ ಅಮೆರಿಕದ ಮೊದಲ ಹಿಂದೂ ಮಹಿಳಾ ಸಂಸದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳನ್ನು ಅವರು ಆಗಾಗ ಖಂಡಿಸಿದ್ದಾರೆ. ಗಬ್ಬಾರ್ಡ್ ಅಮೆರಿಕದಲ್ಲಿ ಜನಿಸಿದರು. ಅವರ ತಾಯಿ ತನ್ನ ಮಕ್ಕಳನ್ನು ಹಿಂದೂ ಸಂಸ್ಕೃತಿಯಂತೆ ಬೆಳೆಸಿದರು, ಅವರು ಸಸ್ಯಾಹಾರಿ. ಭಗವದ್ಗೀತೆಯ ಮೇಲೆ ಕೈ ಇಟ್ಟು ಕಾಂಗ್ರೆಸ್ ಸದಸ್ಯೆ ಎಂದು ಪ್ರಮಾಣ ವಚನ ಸ್ವೀಕರಿಸಿದ್ದರು.

ಬ್ಯಾರಕ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳಾ ಕಾನ್‌ಸ್ಟೇಬಲ್ ಪತ್ತೆ

ಸಮಸ್ತಿಪುರ: ಬಿಹಾರದ ಸಮಸ್ತಿಪುರ ಜಿಲ್ಲೆಯಲ್ಲಿ ಮಹಿಳಾ ಪೊಲೀಸ್ ಪೇದೆಯೊಬ್ಬರು ತಮ್ಮ ಬ್ಯಾರಕ್‌ನ ಬಾತ್ ರೂಮ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಮೃತರನ್ನು ವೈಶಾಲಿ ಜಿಲ್ಲೆಯ ನಿವಾಸಿ ಚಾಂದನಿ ಕುಮಾರಿ ಎಂದು ಗುರುತಿಸಲಾಗಿದೆ. ಚಾಂದನಿ ಕುಮಾರಿ ಮುಸ್ರಿಘರಾರಿ ಪೊಲೀಸ್ ಠಾಣೆಯ 2ನೇ ಮಹಡಿಯಲ್ಲಿ ಬ್ಯಾರಕ್‌ನಲ್ಲಿ ತಂಗಿದ್ದರು. ಬಾತ್‌ರೂಂ ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿರುವುದನ್ನು ಇನ್ನೋರ್ವ ಮಹಿಳಾ ಕಾನ್‌ಸ್ಟೆಬಲ್ ನೋಡಿದ್ದಾರೆ. ನಂತರ ಇತರ ಕಾನ್‌ಸ್ಟೆಬಲ್‌ಗಳ ಸಹಾಯದಿಂದ ಬಾಗಿಲು ತೆರೆದಾಗ ಆಕೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದರು.

ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಆಕೆ ಸಾವನ್ನಪ್ಪಿರುವುದಾಗಿ ವೈದ್ಯರು ಘೋಷಿಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಆಕೆಯ ಕುಟುಂಬ ಸದಸ್ಯರಿಗೆ ಮಾಹಿತಿ ನೀಡಲಾಗಿದೆ ಎಂದು ಉಪವಿಭಾಗೀಯ ಪೊಲೀಸ್ ಅಧಿಕಾರಿ ಸಂಜಯ್ ಕುಮಾರ್ ಪಾಂಡೆ ಸುದ್ದಿಗಾರರಿಗೆ ತಿಳಿಸಿದರು. ಆಕೆಯ ಬ್ಯಾರಕ್‌ನಿಂದ ಮೊಬೈಲ್ ಫೋನ್ ಮತ್ತು ಡೈರಿಯನ್ನು ವಶಪಡಿಸಿಕೊಂಡು ವಿಶ್ಲೇಷಿಸಲಾಗುತ್ತಿದೆ. ಈ ಕುರಿತು ಹೆಚ್ಚಿನ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಎಸ್‌ಡಿಪಿಒ ತಿಳಿಸಿದ್ದಾರೆ.

ಚಿನ್ನದ ಲೇಪನವಿದ್ದ ಟಿಪ್ಪು ಖಡ್ಗ 3.4 ಕೋಟಿ ರೂ.ಗೆ ಹರಾಜು



ಲಂಡನ್: ಟಿಪ್ಪು ಸುಲ್ತಾನ್ 1799ರಲ್ಲಿ ಶ್ರೀರಂಗಪಟ್ಟಣ ಕದನದಲ್ಲಿ ಬಳಸಿದ್ದ ಎನ್ನಲಾದ ಖಡ್ಗ ಲಂಡನ್‌ನಲ್ಲಿ 3.4 ಕೋಟಿ ರೂ.ಗೆ ಹರಾಜಾಗಿದೆ. ಖಡ್ಗವು ವಿಶಿಷ್ಟವಾದ ಡುಬ್ರಿ (ಹುಲಿ ಪಟ್ಟೆ) ವಿನ್ಯಾಸವನ್ನು ಹೊಂದಿದೆ. ಖಡ್ಗದ ಮೇಲೆ ಚಿನ್ನದ ಲೇಪನ ಇದ್ದು, ಅರೇಬಿಕ್ ಭಾಷೆಯಲ್ಲಿ 'ಹ' ಎಂದು ಕೆತ್ತಲಾಗಿದೆ. ಇದು ಟಿಪ್ಪು ತಂದೆ ಹೈದರ್ ಅಲಿ ಹೆಸರನ್ನು ಸೂಚಿಸುತ್ತದೆ ಎಂದು ಇತಿಹಾಸಕಾರರು ವಿಶ್ಲೇಷಿಸಿದ್ದಾರೆ.

ಯುದ್ಧದಲ್ಲಿ ಬ್ರಿಟಿಷ್ ಸೇನೆಗೆ ಕೊಡುಗೆ ನೀಡಿದ್ದ ಕಾರಣಕ್ಕೆ ಕ್ಯಾಪ್ಟನ್ ಜೇಮ್ಸ್ ಆಂಡ್ರ ಡಿಕ್ ಎಂಬ ಅಧಿಕಾರಿಗೆ ಬ್ರಿಟಿಷ್ ಸರ್ಕಾರ ಟಿಪ್ಪು ಸುಲ್ತಾನ್ ಬಳಸಿದ್ದ ಈ ಖಡ್ಗವನ್ನು ಉಡುಗೊರೆಯಾಗಿ ನೀಡಿತ್ತು. 2024ರವರೆಗೂ ಈ ಖಡ್ಗವನ್ನು ಡಿಕ್ ಕುಟುಂಬಸ್ಥರು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಇದೀಗ ಈ ಖಡ್ಗವನ್ನು ಹರಾಜು ಹಾಕಲಾಗಿದೆ. ಕ್ಯಾಪ್ಟನ್ ಜೇಮ್ಸ್ ಆಂಡ್ರ ಡಿಕ್ ಶ್ರೀರಂಗಪಟ್ಟಣದ 75ನೇ ರೆಜಿಮೆಂಟ್‌ನಲ್ಲಿ ಸೇವೆ ಸಲ್ಲಿಸಿದ್ದ. ಶತ್ರು ಪಡೆಗಳ ಕೋಟೆಯ ಗೋಡೆಗಳನ್ನು ಭೇದಿಸಿ ಒಳ ನುಗ್ಗುವುದು ಈ ರೆಜಿಮೆಂಟಿನ ಕೆಲಸವಾಗಿತ್ತು. ಶ್ರೀರಂಗಪಟ್ಟಣದ ಕೋಟೆಯನ್ನು ಭೇದಿಸಿ ಒಳನುಗ್ಗಲು ಬ್ರಿಟಿಷ್ ಸೇನೆಗೆ ಡಿಕ್ ನೇತೃತ್ವದ ಪಡೆ ಸಹಾಯ ಮಾಡಿತ್ತು. ಹೀಗಾಗಿ ಟಿಪ್ಪುವಿನ ಮರಣದ ನಂತರ ಖಡ್ಗವನ್ನು ಡಿಕ್‌ಗೆ ಉಡುಗೊರೆಯಾಗಿ ನೀಡಲಾಗಿತ್ತು.

ಮೈಸೂರು ಮಿತ್ರ

ಶುಕ್ರವಾರ 15 ನವೆಂಬರ್ 2024

ಸಹಕಾರ ಸಂಘಗಳ ಬಲವರ್ಧನೆಗೆ ಮತ್ತಷ್ಟು ಶ್ರಮಿಸಿ

• ಮಾಜಿ ಸಚಿವ ಎಂ.ಸಿ.ನಾಣಯ್ಯ ಸಲಹೆ • ಮಡಿಕೇರಿಯಲ್ಲಿ ಸಹಕಾರ ಸಪ್ತಾಹ



ಮಡಿಕೇರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆವರಣದಲ್ಲಿ ಏರ್ಪಡಿಸಿದ್ದ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಮಾಜಿ ಸಚಿವ ಎಂ.ಸಿ.ನಾಣಯ್ಯ ಉದ್ಘಾಟಿಸಿದರು.

> ಸಹಕಾರ ಕ್ಷೇತ್ರದಲ್ಲಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ ಹೀಗೆ ವಿವಿಧ ರೀತಿಯ ಉದ್ಯೋಗಾವಕಾಶಗಳು ದೊರೆಯಲಿವೆ. ಹೊಸ ಹೊಸ ತಂತ್ರಜ್ಞಾನ ಅಳವಡಿಸಿಕೊಂಡು ಸಹಕಾರ ಕ್ಷೇತ್ರವನ್ನು ಮತ್ತಷ್ಟು ಸುಧಾರಿಸಬೇಕು. ಸಮಗ್ರ ಗ್ರಾಮೀಣ ಅಭಿವೃದ್ಧಿ ಸಾಧಿಸುವುದೇ ಸಹಕಾರ ಕ್ಷೇತ್ರದ ಮೂಲ ಉದ್ದೇಶ.
>
> –ಎಂ.ಎಂ.ಶ್ಯಾಮಲಾ, ನಿವೃತ್ತ ಪ್ರಾಂಶುಪಾಲೆ, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆ

ಮಡಿಕೇರಿ, ನ.14–ಸಹಕಾರ ಸಂಘಗಳು ಆರ್ಥಿಕ ಪ್ರಗತಿಯನ್ನು ಮತ್ತಷ್ಟು ವೃದ್ಧಿಸಿಕೊಂಡು, ಕೃಷಿಕರು ಹಾಗೂ ಬಡವರಿಗೆ ಸಾಲ ಸೌಲಭ್ಯ ಕಲ್ಪಿಸಿ ಆರ್ಥಿಕ ಬೆಳವಣಿಗೆಗೆ ಸಹಕರಿಸಬೇಕು ಎಂದು ಹಿರಿಯ ಸಹಕಾರಿ ಹಾಗೂ ಮಾಜಿ ಸಚಿವ ಎಂ.ಸಿ.ನಾಣಯ್ಯ ಸಲಹೆ ನೀಡಿದರು.

ನಗರದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆವರಣದ ಪಂದ್ಯಂಡ ಬೆಳ್ಯಪ್ಪ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಹಕಾರ ಕ್ಷೇತ್ರದಲ್ಲಿ ಯಾವುದೇ ಹಸ್ತಕ್ಷೇಪ ಇರಬಾರದು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಇದ್ದಲ್ಲಿ ಸಂಘಗಳ ಬಲವರ್ಧನೆ ಸಾಧ್ಯ ಎಂದರು.

ಸಹಕಾರ ಸಂಘಗಳಿಗೆ ದೇಶದಲ್ಲಿ ತಮ್ಮದೇ ಸ್ಥಾನವಿದ್ದು, ಸಂಪತ್ತನ್ನು ಎಲ್ಲರೂ ಹಂಚಿಕೊಂಡು ಸಮಾನವಾಗಿ ಬದುಕುವುದು ಸಹಕಾರದ ಧ್ಯೇಯೋದ್ದೇಶವಾಗಿದೆ. ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಮತ್ತು ದಕ್ಷತೆ ಇದ್ದಲ್ಲಿ ಸಂಘಗಳನ್ನು ಮತ್ತಷ್ಟು ಬಲಪಡಿಸಬಹುದು. ಆ ನಿಟ್ಟಿನಲ್ಲಿ ಸಹಕಾರ ಸಂಘಗಳು ಪಕ್ಷಾತೀತವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಹಕಾರ ಸಂಘದಲ್ಲಿ ಲಕ್ಷಾಂತರ ಜನರು ಸದಸ್ಯತ್ವವನ್ನು ಹೊಂದಿದ್ದಾರೆ. ಸಹಕಾರ ಕ್ಷೇತ್ರಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಬೇಕು. ರಾಜಕೀಯ ರಹಿತವಾಗಿರಬೇಕು. ರಾಜ್ಯದಲ್ಲಿ 21 ಕೇಂದ್ರ ಸಹಕಾರ ಬ್ಯಾಂಕ್‌ಗಳು ಇದ್ದು, ಕೊಡಗು ಜಿಲ್ಲೆಯ ಸಹಕಾರ ಬ್ಯಾಂಕ್ ಅತ್ಯುತ್ತಮವಾಗಿ ಆರ್ಥಿಕ ಚಟುವಟಿಕೆ ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಹಕಾರ ಕೇಂದ್ರ ಬ್ಯಾಂಕ್ ಜಿಲ್ಲಾಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ ಮಾತನಾಡಿ, ಕೊಡಗು ಡಿಸಿಸಿ ಬ್ಯಾಂಕ್ ವತಿಯಿಂದ 3 ರಿಂದ 5 ಲಕ್ಷ ರೂ.ವರೆಗೆ ಶೂನ್ಯ ಬಡ್ಡಿದರದಲ್ಲಿ ಕೃಷಿಕರಿಗೆ ಸಾಲ ನೀಡಲಾಗುತ್ತಿದೆ. ಕೃಷಿಕರ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ಸಹಕಾರ ಕಾಯ್ದೆ ತಿದ್ದುಪಡಿಯಿಂದ ಸಂಘಗಳ ಬೆಳವಣಿಗೆ ಕಷ್ಟಸಾಧ್ಯ. ನೂತನ ಸಹಕಾರ ಕಾಯ್ದೆ ಜಾರಿಗೊಂಡಲ್ಲಿ ಸಂಘಗಳು ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆ ನಿವೃತ್ತ ಪ್ರಾಂಶುಪಾಲೆ ಎಂ.ಎಂ.ಶ್ಯಾಮಲಾ ಮಾತನಾಡಿ, ಸಹಕಾರ ಸಪ್ತಾಹದಲ್ಲಿ ಸಂಘಗಳ ಪ್ರಗತಿ ಬಗ್ಗೆ ವಿಮರ್ಶೆಗಳು ನಡೆಯಬೇಕು. ಸಹಕಾರ ಚಳುವಳಿಯನ್ನು ಬಲಪಡಿಸಿ ಸಾಮೂಹಿಕ ಪ್ರಯತ್ನದಿಂದ ಪ್ರಗತಿ ಸಾಧಿಸುವುದು ಸಹಕಾರದ ತತ್ವವಾಗಿದೆ. ಸಹಕಾರ ಕ್ಷೇತ್ರದ ಆರ್ಥಿಕ ಬೆಳವಣಿಗೆಗೆ ಸಾಕಷ್ಟು ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಕೇಟೋಳಿರ ಎಸ್.ಪೂವಯ್ಯ, ನಿರ್ದೇಶಕರಾದ ಹೊಟ್ಟೆಂಗಡ ಎಂ.ರಮೇಶ್, ಹೊಸೂರು ಸತೀಶ್ ಕುಮಾರ್, ಕೆ.ಅರುಣ್ ಭೀಮಯ್ಯ, ಕಾಂಗೀರ ಎನ್.ಸತೀಶ್, ಪೊಳಂಡ ಪಿ.ಪೆಮ್ಮಯ್ಯ, ಎಚ್.ಕೆ.ಮಾದಪ್ಪ ಎಸ್.ಸಿ.ಶರತ್ ಶೇಖರ್, ಟಿ.ಆರ್.ಶರವಣ ಕುಮಾರ್, ಗುಮ್ಮಟ್ಟೀರ ಎಸ್.ಕಿಲನ್ ಗಣಪತಿ, ಜಲಜಾ ಶೇಖರ್, ವೃತ್ತಿಪರ ನಿರ್ದೇಶಕ ಮುಂಡಂಡ ಸಿ.ನಾಣಯ್ಯ, ಡಿಸಿಸಿ ಬ್ಯಾಂಕಿನ ಸಿಇಓ ಪ್ರವೀಣ್ ಬಿ.ನಾಯಕ್, ಪ್ರಧಾನ ವ್ಯವಸ್ಥಾಪಕಿ ಜಿ.ಎಂ.ಬೋಜಮ್ಮ ಇತರರು ಇದ್ದರು.

ಇರ್ಪು ಜಲಪಾತದಲ್ಲಿ ಪ್ರವಾಸಿಗರ ಮೋಜು ಮಸ್ತಿ

• ಪಾಚಿ ಕಟ್ಟಿದ ಬಂಡೆಗಳ ಮೇಲೆ ಹುಚ್ಚು ಸಾಹಸ • ಜೀವದ ಜೊತೆ ಚೆಲ್ಲಾಟ



ಇರ್ಪು ಜಲಪಾತದ ನೀರಿನಲ್ಲಿ ಆಟವಾಡುತ್ತಿರುವ ಪ್ರವಾಸಿಗರು.

ಮಡಿಕೇರಿ, ನ.14–ಪೊನ್ನಂಪೇಟೆ–ದಕ್ಷಿಣ ಕೊಡಗಿನ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾದ ಶ್ರೀಮಂಗಲ ಸಮೀಪದ ಇರ್ಪು ಜಲಪಾತದಲ್ಲಿ ಪ್ರವಾಸಿಗರು ಎಗ್ಗಿಲ್ಲದೆ ಮೋಜು ಮಸ್ತಿ ತೊಡಗಿರುವುದು ಕಂಡು ಬಂದಿದೆ.

ಜಲಪಾತದ ನೀರು ಬೀಳುವ ಸ್ಥಳಕ್ಕಿಳಿದು ನೀರಿನಲ್ಲಿ ಆಟವಾಡುವ ಮೂಲಕ ಪ್ರವಾಸಿಗರು ತಮ್ಮ ಜೀವದ ಜೊತೆಯೇ ಚೆಲ್ಲಾಟವಾಡುತ್ತಿದ್ದಾರೆ. ಪಾಚಿ ಕಟ್ಟಿದ ಬಂಡೆಗಳ ಮೇಲೇರುವ ಹುಚ್ಚು ಸಾಹಸ ಪ್ರದರ್ಶಿಸುವುದಲ್ಲದೇ, ಅಲ್ಲೇ ಮೊಬೈಲ್‌ಗಳಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಂಡು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ನೂರಾರು ಅಡಿಗಳ ಮೇಲಿಂದ ಧುಮ್ಮಿಕ್ಕುವ ಜಲಪಾತ ಕೆಳಭಾಗದಲ್ಲಿ ಆಳವಾದ ಗುಂಡಿಯನ್ನೂ ಸೃಷ್ಟಿಸಿದ್ದು, ಇದರ ಪರಿವೇ ಇಲ್ಲದೆ ಪ್ರವಾಸಿಗರು ನೀರಿಗೆ ಇಳಿದಿರುವುದು ಎಷ್ಟು ಸರಿ ಎನ್ನುವ ಆತಂಕದ ಪ್ರಶ್ನೆ ಹುಟ್ಟು ಹಾಕಿದೆ.

ಹಚ್ಚ ಹಸಿರಿನ ಪ್ರಕೃತಿಯ ರಮಣೀಯ ತಾಣ ಬ್ರಹ್ಮಗಿರಿಯ ತಪ್ಪಲಿನಲ್ಲಿ ಲಕ್ಷ್ಮಣ ತೀರ್ಥ ನದಿಯಿಂದ ಸೃಷ್ಟಿಯಾಗಿರುವ ಇರ್ಪು ಜಲಪಾತದ ತಳ ಭಾಗಕ್ಕೆ ಹೋಗುವುದನ್ನು ನಿರ್ಬಂಧಿಸಲಾಗಿತ್ತು. ಇರ್ಪು ಜಲಪಾತದಲ್ಲಿ ಸಿಬ್ಬಂದಿ ಕೊರತೆ ಹಾಗೂ ಪ್ರವಾಸಿಗರು ನೀರು ಬೀಳುವ ಸ್ಥಳಕ್ಕೆ ಹೋಗಬಾರದೆಂದು ಗೇಟ್ ಅಳವಡಿಸಿರುವುದನ್ನು ಲೆಕ್ಕಿಸದೆ, ಮೇಲಿಂದ ನೀರು ಬೀಳುವ ಸ್ಥಳಕ್ಕೆ ಹೋಗಿ, ತಾವು ತಂದಿರುವ ತಿಂಡಿ ತಿನಿಸುಗಳನ್ನು ಅಲ್ಲೇ ತಿಂದು ಪ್ಲಾಸ್ಟಿಕ್ ಸೇರಿದಂತೆ ನೀರಿನ ಬಾಟಲ್‌ಗಳನ್ನು ಅಲ್ಲೇ ಎಸೆದು ಮೋಜು ಮಸ್ತಿ ಮಾಡಿರುವುದು ಕಂಡು ಬಂದಿದೆ.

ಅಲ್ಲದೆ, ಅರಣ್ಯ ಇಲಾಖೆ ಸಿಬ್ಬಂದಿ ಗೇಟಿನಲ್ಲಿ ಸರಿಯಾದ ರೀತಿ ತಪಾಸಣೆ ಮಾಡದೆ ಪ್ರವಾಸಿಗರನ್ನು ಒಳಗೆ ಬಿಡುತ್ತಿರುವುದೇ ಈ ಅವಾಂತರಗಳಿಗೆ ಕಾರಣವಾಗಿದೆ ಎಂಬ ಆರೋಪಗಳು ಕೇಳಿ ಬರುತ್ತಿದೆ. ಸ್ವಚ್ಛತೆ ಕಾಪಾಡಿ ಎಂದು ಬೋರ್ಡ್ ಅಳವಡಿಸಿದ್ದರೂ ಅದು ನಿಷ್ಪ್ರಯೋಜಕವಾಗಿದೆ. ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳದೆ ಹೋದಲ್ಲಿ ಮೋಜು ಮಸ್ತಿಯ ಹೆಸರಲ್ಲಿ ಪ್ರವಾಸಿಗರು ಜೀವ ಕಳೆದುಕೊಳ್ಳುವ ಎಲ್ಲಾ ಲಕ್ಷಣಗಳಿವೆ.

ಬಾಳುಗೋಡುವಿನಲ್ಲಿ ನ.28ರಿಂದ ಕೊಡವ ನಮ್ಮೆ ಕ್ರೀಡಾಕೂಟ



ಸುದ್ದಿಗೋಷ್ಠಿಯಲ್ಲಿ ಕೊಡವ ನಮ್ಮೆ ಕ್ರೀಡಾಕೂಟ ಅಧ್ಯಕ್ಷ ತಂಬುಕುತ್ತಿರಮಧು ಮಂದಣ್ಣ ಮಾತನಾಡಿದರು.

ವಿರಾಜಪೇಟೆ, ನ.14–ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ಬಾಳುಗೋಡುವಿನಲ್ಲಿ ನ.28ರಿಂದ ಡಿ.1ರವರೆಗೆ 11ನೇ ಕೊಡವ ನಮ್ಮೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕ್ರೀಡಾಕೂಟದ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.28ರಂದು ಬೆಳಗ್ಗೆ 10 ಗಂಟೆಗೆ ಕೊಡವ ಸಮಾಜಗಳ ನಡುವಿನ ನಾಕೌಟ್ ಹಾಕಿ ಪಂದ್ಯಾವಳಿಗೆ ಚಾಲನೆ ನೀಡಲಾಗುವುದು. 29ರಂದು ಬೆಳಗ್ಗೆ 9.30ಕ್ಕೆ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ, 30ರಂದು ಬೆಳಗ್ಗೆ 9 ಗಂಟೆಗೆ ಹಾಕಿ ಮೊದಲ ಸೆಮಿಫೈನಲ್, ಮಹಿಳೆಯರು ಮತ್ತು ಪುರುಷರ ಹಗ್ಗಜಗ್ಗಾಟ ಸ್ಪರ್ಧೆ ಹಾಗೂ 11 ಗಂಟೆಗೆ ಯುದ್ಧ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಮಧ್ಯಾಹ್ನ 2 ಗಂಟೆಗೆ ಹಾಕಿ 2ನೇ ಸೆಮಿಫೈನಲ್ ನಡೆಯಲಿದ್ದು, 3 ಗಂಟೆಗೆ ಗುಂಡು ಎಸೆತ ಫೈನಲ್ ನಡೆಯಲಿದೆ. ಡಿ.1ರಂದು ಬೆಳಗ್ಗೆ 9ಕ್ಕೆ ಮಂದ್‌ಮರಿಯುವೊ, 9.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 2 ಗಂಟೆಗೆ ಹಾಕಿ ಹಾಗೂ ಹಗ್ಗಜಗ್ಗಾಟ ಫೈನಲ್ ನಡೆಯಲಿದೆ. ವಿಜೇತರಿಗೆ ಟ್ರೋಫಿ ನೀಡಲಾಗುವುದು. ಆಸಕ್ತ ಕೊಡವ ಸಮಾಜದವರು ನ.20ರೊಳಗೆ ಹೆಸರು ನೋಂದಾಯಿಕೊಳ್ಳಬೇಕು. ಮಾಹಿತಿಗೆ ಮೊ.ಸಂ: 9448647273 ಅಥವಾ 8050269012 ಅನ್ನು ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕ್ರೀಡಾ ಸಮಿತಿ ಸಂಚಾಲಕ ಕಂಜೀರಂಡ ಕಿಟ್ಟು ಕಾಳಪ್ಪ, ಗೌರವ ಕಾರ್ಯದರ್ಶಿ ಕೋಟೇರ ರಘು ಕಾರ್ಯಪ್ಪ, ಮಾದೇಯಂಡ ಸಂಪಿ ಪೂಣಚ್ಚ ಕುಪ್ಪಂಡ ರಾಜೀವ್ ಕಾರ್ಯಪ್ಪ, ಕುಂಜಿಲಂಡ ದೊರೆ ಪೂಣಚ್ಚ ಬೇರೆರ ಬೆಳ್ಳಿಯಪ್ಪ ಅಮ್ಮಣಿಚಂಡ ರತ್ನ ಸುಬ್ರಮಣಿ, ಕೇಕಡ ರೋಮಿ ಇದ್ದರು.

ಕೂಡಿಗೆ ಕ್ರೀಡಾ ಶಾಲೆ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ



ಅಥ್ಲೆಟಿಕ್ ಕ್ರೀಡಾಕೂಟದ ಕೂಡಿಗೆ ಕ್ರೀಡಾ ಶಾಲೆ ವಿದ್ಯಾರ್ಥಿಗಳನ್ನು ಶಾಸಕ ಡಾ.ಮಂತರ್‌ಗೌಡ ಅಭಿನಂದಿಸಿದರು.

ಮಡಿಕೇರಿ, ನ.14–ಕೋಲಾರದಲ್ಲಿ ನಡೆದ 17 ವರ್ಷದೊಳಗಿನ ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದ 4X400 ರಿಲೇ ಸ್ಪರ್ಧೆಯಲ್ಲಿ ಕೂಡಿಗೆ ಕ್ರೀಡಾ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಡಿ.ಕೆ.ಭವಿಷ್ಯಾ ನೇತೃತ್ವದ ತಂಡ ಪ್ರಥಮ ಸ್ಥಾನ ಪಡೆದು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ನ.26ರಿಂದ ಡಿ.1ರವರೆಗೆ ಉತ್ತರ ಪ್ರದೇಶದ ಲಕ್ನೋದಲ್ಲಿ ರಾಷ್ಟ್ರೀಯ ಮಟ್ಟದ ಸ್ಪರ್ಧೆ ನಡೆಯಲಿದೆ. ದೈಹಿಕ ಶಿಕ್ಷಣ ಶಿಕ್ಷಕ ಮಂಜುನಾಥ್ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಡಿ.ಕೆ.ಭವಿಷ್ಯಾ ಮುತ್ತಾರುಮುಡಿಯ ದೇರಾಜೆ ಮನೆಯ ಕಿರಣ್ ಹಾಗೂ ಗೀತಾ ದಂಪತಿ ಪುತ್ರಿ. ಡಿ.ಕೆ.ಭವಿಷ್ಯಾ ಹಾಗೂ ತಂಡವನ್ನು ಶಾಸಕ ಡಾ.ಮಂತರ್‌ಗೌಡ ಅಭಿನಂದಿಸಿ, ರಾಷ್ಟ್ರೀಯ ಮಟ್ಟದಲ್ಲಿ ಗೆಲುವು ಸಾಧಿಸುವಂತೆ ಶುಭ ಹಾರೈಸಿದರು.

ಈ ವೇಳೆ ಫೀ.ಮಾ.ಕಾರ್ಯಪ್ಪ ಕಾಲೇಜು ಪ್ರಾಂಶುಪಾಲ ಮೇಜರ್ ಡಾ.ಬಿ.ರಾಘವ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಮೋಹನ್ ಜಿ.ಗೌಡ, ಪ್ರಮುಖರಾದ ಕವನ್ ಕೊತ್ತೋಳಿ, ದಿನೇಶ್ ಶೆಟ್ಟಿ, ಹರಿಪ್ರಸಾದ್ ಕೋಚನ ಉಪಸ್ಥಿತರಿದ್ದರು.

ಮಹಿಳೆ ಆತ್ಮಹತ್ಯೆ

ಸಿದ್ದಾಪುರ: ಕಿರುಕುಳದಿಂದ ಮನನೊಂದು ಮಹಿಳೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಹಿಂಜಲಗೆರೆ ಕಲ್ಲುಕೊರೆ ಗ್ರಾಮದಲ್ಲಿ ಗುರುವಾರ ನಡೆದಿದೆ.

ಇಂಜಲಗೆರೆ ನಿವಾಸಿ ಶಫೀಕ್ ಪತ್ನಿ ತಸ್ನಿ(36) ಮೃತ ಮಹಿಳೆ. ಈಕೆಯ ಆತ್ಮಹತ್ಯೆಗೆ ಕಾರಣನಾದ ಶಮೀರ್‌ನನ್ನು ಪೊಲೀಸರು ಬಂಧಿಸಿದ್ದಾರೆ. ನಮ್ಮ ಚಿಕ್ಕಪ್ಪನ ಮಗ ಶಮೀರ್ ನನ್ನ ಪತ್ನಿ ತಸ್ನಿಗೆ ನಗ್ನಚಿತ್ರಗಳು ಇರುವುದಾಗಿ ಬ್ಲಾಕ್‌ಮೇಲ್ ಮಾಡುತ್ತಿದ್ದ. ಈ ಕಿರುಕುಳ ತಾಳಲಾರದೆ ಪತ್ನಿ ಮನೆಯಲ್ಲಿ ಯಾರು ಇಲ್ಲದ ವೇಳೆ ಡೀಸೆಲ್ ಸುರಿದುಕೊಂಡು ಬೆಂಕಿ ಹಚ್ಚಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಪತ್ನಿ ಆತ್ಮಹತ್ಯೆಗೆ ಕಾರಣನಾದ ಶಮೀರ್‌ನನ್ನು ಬಂಧಿಸುವಂತೆ ಶಫೀಕ್ ಸಿದ್ದಾಪುರ ಠಾಣೆಗೆ ದೂರು ನೀಡಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ.ರಾಜು, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರಸ್ಥಳ ಪರಿಶೀಲಿಸಿ, ಶಮೀರ್‌ನನ್ನು ಬಂಧಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನ್ಯಾಷನಲ್ ಹಾಕಿ ತಂಡಕ್ಕೆ ಲಿಪ್ಸಿಕಾ ಕಾಳಪ್ಪ ಆಯ್ಕೆ



ಮಡಿಕೇರಿ, ನ.14–ನ್ಯಾಷನಲ್ ಸಬ್ ಜೂನಿಯರ್ ಮಹಿಳಾ ಹಾಕಿ ತಂಡಕ್ಕೆ ಮಡಿಕೇರಿಯ ಸಾಯಿ ಕ್ರೀಡಾ ವಸತಿ ನಿಲಯದ ವಿದ್ಯಾರ್ಥಿನಿ ಚಟ್ಟಂಡ ಲಿಪ್ಸಿಕಾ ಕಾಳಪ್ಪ ಆಯ್ಕೆಯಾಗಿದ್ದಾರೆ.

ನ.22ರಿಂದ ತೆಲಂಗಾಣದಲ್ಲಿ ನಡೆಯಲಿರುವ 14ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಮಹಿಳಾ ನ್ಯಾಷನಲ್ ಚಾಂಪಿಯನ್‌ಶಿಪ್–2024 ತಂಡದಲ್ಲಿ ಗೋಲ್ ಕೀಪರ್ ಆಗಿ ಲಿಪ್ಸಿಕಾ ಕಾಳಪ್ಪ ಭಾಗವಹಿಸಲಿದ್ದಾರೆ. ಈಕೆ ಟಿ.ಶೆಟ್ಟಿಗೇರಿ ಗ್ರಾಮದ ಚಟ್ಟಂಡ ಕಿರಣ್ ಕಾಳಪ್ಪ ಮತ್ತು ಕೃತಿಕಾ ಕಾಳಪ್ಪ ದಂಪತಿ ಪುತ್ರಿ.

6 ತಿಂಗಳೊಳಗೆ ಮಧ್ಯರಂಗ ದರ್ಶನಕ್ಕೆ ಅವಕಾಶ



ರಂಗನಾಯಕಿ ಅಮ್ಮನವರ ದೇಗುಲ ಜೀರ್ಣೋದ್ಧಾರ ಕಾಮಗಾರಿಗೆ ಮಂಜುನಾಥ್ ಚಾಲನೆ.

ಕೊಳ್ಳೇಗಾಲ: ಆರು ತಿಂಗಳೊಳಗೆ ಶಿವನಸಮುದ್ರ ಸಮೂಹ ದೇವಾಲಯಗಳ ರಂಗನಾಯಕಿ ಅಮ್ಮನವರು ಮತ್ತು ಮಧ್ಯರಂಗನಾಥಸ್ವಾಮಿ ದರ್ಶನಕ್ಕೆ ಭಕ್ತರಿಗೆ ಅವಕಾಶ ನೀಡಲಾಗುವುದು ಶಾಸಕ ಎಂ.ಆರ್.ಮಂಜುನಾಥ್ ಹೇಳಿದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಿವನಸಮುದ್ರ ಸಮೂಹ ದೇವಾಲಯ ರಂಗನಾಯಕಿ ಅಮ್ಮನವರ ದೇಗುಲ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮಧ್ಯರಂಗನಾಥಸ್ವಾಮಿ ದೇವಾಲಯ ಕಾಮಗಾರಿ ಈಗಾಗಲೇ ಮುಕ್ತಾಯದ ಹಂತದಲ್ಲಿದ್ದು, ದೇವರ ದರ್ಶನಕ್ಕೆ ಆರು ತಿಂಗಳೊಳಗೆ ಭಕ್ತರಿಗೆ ಅವಕಾಶ ಮಾಡಲಾಗುವುದು. ಈ ನಿಟ್ಟಿನಲ್ಲಿ ಭಕ್ತ ಸಮೂಹ ಸಹಕರಿಸಬೇಕು ಎಂದರು.

ದೇಗುಲ ನವೀಕರಣವನ್ನು ದಾನಿಗಳೇ ಸ್ವತಃ ಕೈಗೊಂಡಿದ್ದಾರೆ. ಎಎಂಆರ್ ಇಂಡಿಯಾ ಸಂಸ್ಥೆ ಈದೇಗುಲ ಅಭಿವೃದ್ಧಿಗೆ ಅಂದಾಜು ತಯಾರಿಸಿ, ಹಣ ಭರಿಸುತ್ತಿದ್ದಾರೆ. ಅಗತ್ಯವಿರುವ ಹಣವನ್ನು ಮುಜರಾಯಿ ಇಲಾಖೆಯಿಂದ ಬಳಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಶಿಲ್ಪನಾಗ್, ಉಪವಿಭಾಗಾಧಿಕಾರಿ ಮಹೇಶ್, ಸಮೂಹ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಸುರೇಶ್, ಧಾನಿ ಮಹೇಶ ಕುಮಾರ ರೆಡ್ಡಿ, ಗ್ರಾಪಂ ಅಧ್ಯಕ್ಷ ಕೆಂಪರಾಜು, ಉಪಾಧ್ಯಕ್ಷೆ ಸುವರ್ಣ, ಶಾಸಕರ ಆಪ್ತ ಕಾರ್ಯದರ್ಶಿ ಮುರುಗೇಶ ಇನ್ನಿತರರಿದ್ದರು.

ಮಹದೇಶ್ವರಬೆಟ್ಟದಲ್ಲಿ ವೈಜ್ಞಾನಿಕ ಸಮಗ್ರ ತ್ಯಾಜ್ಯ ನಿರ್ವಹಣೆ ನೂತನ ಯೋಜನೆ

ಗ್ರೀನ್ ಟುಮಾರೊ, ಎಂಎಂ ಹಿಲ್ ಅನುಷ್ಠಾನಕ್ಕೆ ಒಡಂಬಂಡಿಕೆ



ಜಿಲ್ಲಾಧಿಕಾರಿ ಶಿಲ್ಪನಾಗ್, ತ.ಮ.ವಿಜಯ ಭಾಸ್ಕರ್, ಮೋನಾ ರೋತ್ ಸಮ್ಮುಖದಲ್ಲಿ ಗ್ರೀನ್ ಟುಮಾರೊ, ಎಂಎಂ ಹಿಲ್ ಮಹತ್ತರ ಯೋಜನೆ ಅನುಷ್ಠಾನಕ್ಕೆ ಒಡಂಬಂಡಿಕೆ ಮಾಡಿಕೊಳ್ಳಲಾಯಿತು.

> ಮಹದೇಶ್ವರಬೆಟ್ಟಕ್ಕೆ ರಾಜ್ಯದ ವಿವಿಧ ಭಾಗ ಅಲ್ಲದೆ, ತಮಿಳುನಾಡಿನಿಂದಲೂ ಸಾಕಷ್ಟು ಭಕ್ತರು ಬರುತ್ತಿದ್ದಾರೆ. ಜಾತ್ರಾ ಸಂದರ್ಭದಲ್ಲಂತು ತ್ಯಾಜ್ಯ ನಿರ್ವಹಣೆ ಬಹು ಸವಾಲಿನ ಕಾರ್ಯವಾಗಿದೆ. ಇದೀಗ ಮೈ ಕಾಪ್ಸ್ ಸಂಸ್ಥೆ ತ್ಯಾಜ್ಯ ನಿರ್ವಹಣೆ ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವುದು ಉಪಯೋಗಿ ಕಾರ್ಯವಾಗಿದೆ.
>
> –ಶಿಲ್ಪನಾಗ್, ಜಿಲ್ಲಾಧಿಕಾರಿ

ಚಾಮರಾಜನಗರ, ನ.14–ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆಮಹದೇಶ್ವರ ಬೆಟ್ಟದಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಸಮಗ್ರ ತ್ಯಾಜ್ಯ ನಿರ್ವಹಣೆ ಉದ್ದೇಶದ ಸಲುವಾಗಿ 'ಹಸಿರು ನಾಳೆ, ಮಹದೇಶ್ವರಬೆಟ್ಟ' (ಗ್ರೀನ್ ಟುಮಾರೊ, ಎಂಎಂ ಹಿಲ್) ಎಂಬ ಮಹತ್ತರ ಯೋಜನೆ ಅನುಷ್ಠಾನಕ್ಕಾಗಿ ತ್ರಿಪಕ್ಷೀಯ ಒಡಂಬಂಡಿಕೆ ಮಾಡಿಕೊಳ್ಳಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಧಿಕಾರಿ ಶಿಲ್ಪನಾಗ್, ಮೈಸೂರು ಕಾವೇರಿ ಪ್ರಾದೇಶಿಕ ಸಂಸ್ಥೆ (ಎಂವೈಕೆಎಪಿಎಸ್–ಮೈಕಾಪ್ಸ್) ಉಪಾಧ್ಯಕ್ಷ ತ.ಮ.ವಿಜಯ ಭಾಸ್ಕರ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಸಮ್ಮುಖದಲ್ಲಿ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು, ಎಂವೈಕೆಎಪಿಎಸ್–ಮೈಕಾಪ್ಸ್ ಕಾರ್ಯನಿರ್ವಾಹಕ ನಿರ್ದೇಶಕ ಅಶ್ರಫ್ ಉಲ್ ಹಸನ್ ಹಾಗೂ ಮಹದೇಶ್ವರಬೆಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಿರಣ್ ಯೋಜನೆ ಅನುಷ್ಠಾನದ ಒಪ್ಪಂದಕ್ಕೆ ಸಹಿ ಹಾಕಿದರು.

ಗ್ರೀನ್ ಟುಮಾರೊ, ಎಂಎಂ ಹಿಲ್ ಯೋಜನೆ ಮೂರು ವರ್ಷಗಳದಾಗಿದ್ದು, ತ್ಯಾಜ್ಯ ನಿರ್ವಹಣೆ ಎಲ್ಲಾ ವಿಭಾಗಗಳಲ್ಲಿ ಸಮರ್ಪಕವಾಗಿ ಯೋಜನೆ ಅನುಷ್ಠಾನವಾಗಲಿದೆ. ಎಲ್‌ಐಸಿ ಹೆಚ್‌ಎಫ್‌ಎಲ್ ಸಂಸ್ಥೆ ಯೋಜನೆಗೆ ಅಗತ್ಯ ಅನುದಾನದ ನೆರವು ನೀಡಲಿದ್ದು, ಮೈಕಾಪ್ಸ್ ಸಂಸ್ಥೆ ಯೋಜನೆ ಅನುಷ್ಠಾನ ನಿರ್ವಹಣೆ ಹೊತ್ತಿದೆ. ಮಹದೇಶ್ವರಬೆಟ್ಟವನ್ನು ಹಸಿರುಮಯವಾಗಿಸುವ ಖಾತರಿಯೊಂದಿಗೆ ಅಗತ್ಯ ಸಮಗ್ರ ತ್ಯಾಜ್ಯ ನಿರ್ವಹಣೆ ಯೋಜನೆ, ತ್ಯಾಜ್ಯ ಸಂಗ್ರಹ ವ್ಯವಸ್ಥೆಯನ್ನು ಸುಸ್ಥಿರಗೊಳಿಸುವ, ಇದರಿಂದ ಬರುವ ಆದಾಯವನ್ನು ಸ್ಥಳೀಯವಾಗಿ ನೀಡುವುದು ಸೇರಿದಂತೆ ಒಟ್ಟಾರೆ ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಉದ್ದೇಶ ಹೊಂದಿದೆ.

ಇದೇ ವೇಳೆ ಮಾತನಾಡಿದ ಮೈಕಾಪ್ಸ್ ಸಂಸ್ಥೆ ಉಪಾಧ್ಯಕ್ಷ ತ.ಮ.ವಿಜಯ ಭಾಸ್ಕರ್, ಕಾವೇರಿ ಪ್ರಾದೇಶಿಕ ಸಂಸ್ಥೆ ಕಾವೇರಿ ನದಿ ಹರಿಯುವ ಜಿಲ್ಲೆಗಳಲ್ಲಿ ಬಹುಮುಖ್ಯ ಯೋಜನೆಗಳನ್ನು ಜಾರಿಗೆ ತರುವಲ್ಲಿ ಮುಂದಾಗಿದೆ. ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆಗೆ ಅನುಕೂಲವಾಗುವ ಇನ್ನೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲಿದ್ದೇವೆ. ಅಧಿಕ ಕೆಲಸ ಕಾರ್ಯಗಳನ್ನು ಜಿಲ್ಲೆಯಲ್ಲಿ ಕೈಗೊಳ್ಳಲಿದ್ದೇವೆ ಎಂದರು.

ಮೈಸೂರು ಕಾವೇರಿ ಪ್ರಾದೇಶಿಕ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ಅಶ್ರಫ್ ಉಲ್ ಹಸನ್ ಮಾತನಾಡಿ, ಈಗಾಗಲೇ ಯೋಜನೆ ಸಂಬಂಧ ಭಾಗೀದಾರರ ಸಭೆ ನಡೆಸಲಾಗಿದೆ. ಸರ್ವೇ ಕಾರ್ಯ ಆರಂಭಿಸಲಾಗಿದೆ. ನಮ್ಮ ಸಂಸ್ಥೆಯಿಂದ ಸ್ಥಳೀಯರನ್ನು ಸಿಬ್ಬಂದಿಯಾಗಿ ನಿಯೋಜಿಸಿಕೊಂಡಿದ್ದೇವೆ. ಯೋಜನೆಗಾಗಿ ಅಗತ್ಯವಿರುವ ಸಹಕಾರ ಬಯಸುವುದಾಗಿ ತಿಳಿಸಿದರು.

ಇದೇ ವೇಳೆ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಕಿರಣ್ ಪಡ್ನೇಕರ್, ಮೈಕಾಪ್ಸ್ ಸಂಸ್ಥೆ ಕಾರ್ಯಕ್ರಮ ಅಧಿಕಾರಿ ಕೆ.ಎಸ್.ವಿಶ್ವಕಿರಣ್ ಇತರರು ಉಪಸ್ಥಿತರಿದ್ದರು.

ಭತ್ತ, ರಾಗಿ ಖರೀದಿ ಕೇಂದ್ರಗಳ ಸ್ಥಾಪನೆ

ಚಾಮರಾಜನಗರ, ನ.14–ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2024–25ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿಗೆ ಕೇಂದ್ರ ಸರ್ಕಾರ ದರ ನಿಗದಿಪಡಿಸಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ.

ಪ್ರತಿ ಕ್ವಿಂಟಾಲ್ ಸಾಮಾನ್ಯ ಭತ್ತಕ್ಕೆ 2300 ರೂ., ಎ ಗ್ರೇಡ್ ಭತ್ತಕ್ಕೆ 2320 ರೂ. ಹಾಗೂ ರಾಗಿಗೆ 4290 ರೂ. ನಿಗದಿಪಡಿಸಲಾಗಿದೆ ಜಿಲ್ಲೆಯಲ್ಲಿ ಭತ್ತ ಮತ್ತು ರಾಗಿ ಖರೀದಿಗೆ ರಾಜ್ಯ ಸಹಕಾರ ಮಾರುಕಟ್ಟೆ ಮಹಾಮಂಡಳಿಯವರನ್ನು ಏಜೆನ್ಸಿಯಾಗಿ ನೇಮಕ ಮಾಡಲಾಗಿದೆ. ಚಾಮರಾಜನಗರ ತಾಲೂಕಿಗೆ ನಗರ ಹಾಗೂ ಸಂತೇಮರಹಳ್ಳಿ ಎಪಿಎಂಸಿ ಯಾರ್ಡ್, ಕೊಳ್ಳೇಗಾಲ ತಾಲೂಕಿಗೆ ಕೊಳ್ಳೇಗಾಲ ಎಪಿಎಂಸಿ ಯಾರ್ಡ್, ಯಳಂದೂರು ತಾಲೂಕಿಗೆ ಟಿಎಪಿಸಿಎಂಎಸ್ ಆವರಣ ಹಾಗೂ ಹನೂರು ತಾಲೂಕಿಗೆ ಹನೂರು ಎಪಿಎಂಸಿ ಯಾರ್ಡ್‌ನಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ.

ಖರೀದಿ ವೇಳೆ ಸರ್ಕಾರ ನಿಗದಿಪಡಿಸಿದ ಮಾನದಂಡಗಳನ್ವಯ ಎಫ್‌ಎಕ್ಯೂ ಗುಣಮಟ್ಟದ ಭತ್ತ ಮತ್ತು ರಾಗಿ ಖರೀದಿಸಲಾಗುವುದು. ಭತ್ತ ಬೆಳೆದ ರೈತರು ಕೃಷಿ ಇಲಾಖೆಯ ಫ್ರೂಟ್ಸ್ ದತ್ತಾಂಶದಲ್ಲಿ ನ.15 ರಿಂದ 31ರವರೆಗೆ ನೋಂದಣಿಗೆ ಅವಕಾಶವಿದೆ. ಡಿ.1ರಿಂದ ಮಾ.31ರವರೆಗೆ ಖರೀದಿ ಪ್ರಕ್ರಿಯೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ದುರ್ಗೇಶ್ ಕುಮಾರ್‌ಗೆ ಚಾಂಪಿಯನ್‌ಶಿಪ್



ಸಂತಪೌಲರ ವಿದ್ಯಾಸಂಸ್ಥೆಯ ದುರ್ಗೇಶ್ ಕುಮಾರ್‌ನನ್ನು ಶಾಲಾ ಆಡಳಿತ ಮಂಡಳಿ ವತಿಯಿಂದ ಅಭಿನಂದಿಸಲಾಯಿತು.

ಚಾಮರಾಜನಗರ, ನ.14–ನಗರದ ಸಂತಪೌಲರ ವಿದ್ಯಾಸಂಸ್ಥೆ 7ನೇ ತರಗತಿ ವಿದ್ಯಾರ್ಥಿ ದುರ್ಗೇಶ್ ಕುಮಾರ್ 14 ವರ್ಷದೊಳಗಿನ 100 ಮೀ. ಓಟ ಹಾಗೂ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನಗಳಿಸಿ ವೈಯಕ್ತಿಕ ಚಾಂಪಿಯನ್‌ಶಿಪ್ ಗಳಿಸಿದ್ದಾನೆ.

ಶಿವಮೊಗ್ಗದಲ್ಲಿ ನಡೆಯುವ ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಗೆ ಆಯ್ಕೆಯಾಗಿರುವ ಈತನನ್ನು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

ಡಿ.4ರಿಂದ ರಥಯಾತ್ರೆ ಸಂಚಾರ

ಚಾಮರಾಜನಗರ: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಜ್ಯೋತಿ ರಥಯಾತ್ರೆ ಜಿಲ್ಲೆಯಾದ್ಯಂತ ಡಿ.4 ರಿಂದ 6ರವರೆಗೆ ಸಂಚರಿಸಿ ನಾಡು, ನುಡಿ ಬಗ್ಗೆ ಜಾಗೃತಿ ಮೂಡಿಸಲಿದೆ. ರಥಯಾತ್ರೆ ಡಿ.4 ರಂದು ಹನೂರು, 5ರಂದು ಕೊಳ್ಳೇಗಾಲ, ಯಳಂದೂರು ತಾಲೂಕು, 6ರಂದು ಚಾಮರಾಜನಗರ, ಗುಂಡ್ಲುಪೇಟೆಯಲ್ಲಿ ಸಂಚರಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂವಿಧಾನದಿಂದ ಎಲ್ಲರಿಗೂ ಸಾಮಾಜಿಕ ನ್ಯಾಯ



ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಉದ್ಘಾಟಿಸಿದರು.

ಚಾಮರಾಜನಗರ, ನ.14–ಅಂಬೇಡ್ಕರ್ ಅವರ ದೂರದೃಷ್ಟಿಯ ಫಲವಾಗಿ ಭಾರತದಂತಹ ಬೃಹತ್ ರಾಷ್ಟ್ರಕ್ಕೆ ಉತ್ತಮ ಸಂವಿಧಾನ ರಚನೆಯಾಗಿದ್ದು, ಇದರಿಂದ ದೇಶದ ಪ್ರತಿಯೊಬ್ಬ ನಾಗರಿಕರಿನಿಗೂ ಸಾಮಾಜಿಕ ನ್ಯಾಯ ಸಿಕ್ಕಿದೆ ಎಂದು ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಅಭಿಪ್ರಾಯಪಟ್ಟರು.

ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಜನಹಿತಾ ಶಕ್ತಿ ಹೋರಾಟ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಗುರುವಾರ ನಡೆದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಪ್ರಪಂಚದ ನಾನಾ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಭಾರತದ ಅಭಿವೃದ್ಧಿಗೆ ಪೂರಕವಾದ ಸುಭದ್ರ ಸಂವಿಧಾನ ರಚಿಸಿದ್ದಾರೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲೇ ಸಂವಿಧಾನ ಅಧ್ಯಯನ ಮಾಡಬೇಕು. ಜೊತೆಗೆ ಸಮಯಪ್ರಜ್ಞೆ ರೂಢಿಸಿಕೊಳ್ಳಬೇಕು. ಮುಂದೆ ತಾನೇನಾಗಬೇಕು ಎಂಬುದರ ಗುರಿಯಿಟ್ಟುಕೊಳ್ಳಬೇಕು. ನಿಮ್ಮ ಭವಿಷ್ಯ ನಿರ್ಧರಿಸುವ ರೂವಾರಿಗಳು ನೀವಾಗಬೇಕು ಎಂದರು.

ಯುವ ವಿಜ್ಞಾನಿ ನವೀನ್ ಮೌರ್ಯ ಮಾತನಾಡಿದರು. ಜನಹಿತಾ ಶಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿದರು. ತೆರಕಣಾಂಬಿ ಠಾಣೆ ಉಪನಿರೀಕ್ಷಕ ಕೆ.ಎಂ.ಮಹೇಶ್ ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಗ್ರಾಪಂ ಸದಸ್ಯ ಗುರುಪ್ರಸಾದ್, ಶಶಿಕುಮಾರ್, ಮುಖಂಡ ಪ್ರಶಾಂತ್, ಪ್ರಾಂಶುಪಾಲ ಸಿ.ಲಿಂಗಯ್ಯ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಚಾಮರಾಜನಗರ ಸಿದ್ಧಾರ್ಥ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಸಿ.ರಂಗಸ್ವಾಮಿ, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

ಅಮಚವಾಡಿ ಪದವಿಪೂರ್ವ ಕಾಲೇಜಿನಲ್ಲಿ ಮಕ್ಕಳ ದಿನಾಚರಣೆ



ಅಮಚವಾಡಿ ಸರ್ಕಾರಿ ಪಪೂ ಕಾಲೇಜಿನಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉಪನ್ಯಾಸಕರಾದ ಮೂರ್ತಿ, ಸುರೇಶ್ ಎನ್.ಎಂ.ಋಗ್ವೇದಿ ಉದ್ಘಾಟಿಸಿದರು.

ಚಾಮರಾಜನಗರ, ನ.14–ತಾಲೂಕಿನ ಅಮಚವಾಡಿ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಗುರುವಾರ ಮಕ್ಕಳ ದಿನ ಆಚರಿಸಲಾಯಿತು.

ಹಿರಿಯ ಉಪನ್ಯಾಸಕ ಮೂರ್ತಿ ಮಾತನಾಡಿ, ಮಾಜಿ ಪ್ರಧಾನಿ ಜವಾಹರ್ ಲಾಲ್ ನೆಹರು ಜನ್ಮ ದಿನಾಚರಣೆ ಅಂಗವಾಗಿ ದೇಶದ ಎಲ್ಲೆಡೆ ಮಕ್ಕಳ ದಿನ ಆಚರಿಸಲಾಗುತ್ತದೆ. ನೆಹರು ದೇಶದ ಶಿಕ್ಷಣ, ನೀರಾವರಿ, ವಿಜ್ಞಾನ, ಬಡತನ ನಿರ್ಮೂಲನೆಗಾಗಿ ಅಪಾರ ಶ್ರಮಪಟ್ಟಿದ್ದಾರೆ. ಸರ್ಕಾರ ಮಕ್ಕಳ ವಿಕಾಸಕ್ಕೆ ಹಲವಾರು ಕಾರ್ಯಕ್ರಮ ರೂಪಿಸಿದೆ ಎಂದರು.

ಇತಿಹಾಸ ಉಪನ್ಯಾಸಕ ಸುರೇಶ್ ಎನ್.ಎಂ.ಋಗ್ವೇದಿ ಮಾತನಾಡಿ, ಮಕ್ಕಳು ದೇವರ ಸಮಾನ. ಮಕ್ಕಳಲ್ಲಿ ಮುಗ್ಧತೆ, ಪ್ರೀತಿ, ಹಸನ್ಮುಖಿ, ಕರುಣೆ, ವಾತ್ಸಲ್ಯ ಗುಣಗಳು ಇರುತ್ತವೆ. ಮಕ್ಕಳಲ್ಲಿ ಭಗವಂತನನ್ನು ಕಾಣುವ ಮೂಲಕ ಗೌರವ ಸಲ್ಲಿಸೋಣ. ಅವರ ಸಾಧನೆಗೆ ನಿರಂತರವಾದ ಮಾರ್ಗದರ್ಶನ ನೀಡುವ ಮೂಲಕ ಸದೃಢ ರಾಷ್ಟ್ರ ನಿರ್ಮಿಸಬೇಕು ಎಂದು ತಿಳಿಸಿದರು.

ಅರ್ಥಶಾಸ್ತ್ರ ಉಪನ್ಯಾಸಕ ಬಸವಣ್ಣ ಮಾತನಾಡಿದರು. ವಿದ್ಯಾರ್ಥಿ ಪ್ರತಿನಿಧಿ ಕುಮಾರಿ ಬೇಬಿ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಉಪನ್ಯಾಸಕ ರಮೇಶ್ ಕುವೆಂಪು ಗೀತೆಗಳನ್ನು ಹಾಡಿದರು. ವಿದ್ಯಾರ್ಥಿ ಪ್ರತಿನಿಧಿಗಳಾದ ಪ್ರಸಾದ್, ಶ್ರೀನಿವಾಸ್, ರಾಧಾ, ಸಂಜನಾ, ಗೀತಾ ಉಪಸ್ಥಿತರಿದ್ದರು.

ಇಂದಿನಿಂದ 250ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ

ಭೈರತಿ ರಣಗಲ್



ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಶ್ರೀಮುರುಳಿ ಅಭಿನಯಿಸಿದ್ದ ಮಫ್ತಿ 2017ರಲ್ಲಿ ತೆರೆಕಂಡಿತ್ತು, ಆ ಚಿತ್ರದಲ್ಲಿ ಶಿವಣ್ಣ ಅವರ ಭೈರತಿ ರಣಗಲ್ ಪಾತ್ರ ಇಂಟರ್‌ವೆಲ್ ವೇಳೆಗೆ ಎಂಟ್ರಿಯಾಗಿತ್ತು. ಶಿವಣ್ಣ ಅವರ ಹೊಸಲುಕ್, ಕಪ್ಪು ಪಂಚೆ ಹಾಕಿದ ಗೆಟಪ್ ಪ್ರೇಕ್ಷಕರಿಗೆ ಇಷ್ಟವಾಗಿತ್ತು, ಶಿವಣ್ಣ ಪಾತ್ರದ ಹೆಸರೇ ತುಂಬಾ ವಿಶೇಷವಾಗಿತ್ತು.

ಹೀಗೆ ಎಲ್ಲದರಲ್ಲೂ ಹೊಸತನದಿಂದ ಕೂಡಿದ್ದ ಆ ಪಾತ್ರದ ಹಿನ್ನೆಲೆ ಏನು? ಆ ವ್ಯಕ್ತಿಗೆ ಭೈರತಿ ರಣಗಲ್ ಎಂಬ ಹೆಸರು ಯಾಕೆ ಬಂತು? ಆತ ಯಾಕೆ ಸದಾ ಕಪ್ಪುಬಣ್ಣದ ಶರ್ಟ್, ಪಂಚೆ ಧರಿಸುತ್ತಾನೆ? ಈ ಎಲ್ಲ ಪ್ರಶ್ನೆಗಳು ಪ್ರಶೆಗಳಾಗೇ ಉಳಿದಿದ್ದವು, ಆ ಪಾತ್ರವನ್ನು ಅಷ್ಟೊಂದು ಡೀಪಾಗಿ ತೋರಿಸಲು ಚಿತ್ರಕಥೆಯಲ್ಲಿ ಅವಕಾಶ ಇರಲಿಲ್ಲ. ಮಫ್ತಿ ಸಿನಿಮಾ ಸೂಪರ್‌ಹಿಟ್ ಆಯ್ತು, ಆನಂತರ ಚಿತ್ರ ನೋಡಿದವರೆಲ್ಲ ನಿರ್ದೇಶಕ ನರ್ತನ್‌ಗೆ ಭೈರತಿ ರಣಗಲ್ ಪಾತ್ರದ ಬಗ್ಗೆಯೇ ಪ್ರಶ್ನೆ ಮಾಡುತ್ತಿದ್ದರು. ಏಕೆಂದರೆ ಜನರ ಮನಸಿನ ಮೇಲೆ ಆ ಪಾತ್ರ ಅಷ್ಟೊಂದು ಗಾಢ ಪರಿಣಾಮ ಬೀರಿತ್ತು, ಆಗ ನರ್ತನ್ ಆ ಪಾತ್ರವನ್ನೇ ಇಟ್ಟುಕೊಂಡು ಕಥೆ ಹೆಣೆಯುತ್ತಾ ಹೋದರು. ಅಲ್ಲೊಂದು ಅದ್ಭುತವಾದ ಕಾನ್ಸೆಪ್ಟ್ ಹುಟ್ಟಿಕೊಂಡಿತು. ಹೀಗೆ ಪ್ರಾರಂಭವಾದ ಭೈರತಿ ರಣಗಲ್ ಸುತ್ತ ಅನೇಕ ಪಾತ್ರಗಳು ಸೇರುತ್ತಾ ಹೋದವು, ಅದೇ ಚಿತ್ರವೀಗ ಅದ್ಧೂರಿಯಾಗಿ ಬಿಡುಗಡೆಯಾಗುತ್ತಿದೆ. ರಾಜ್ಯಾದ್ಯಂತ ಸುಮಾರು 250ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಭೈರತಿ ರಣಗಲ್ ತೆರೆ ಕಾಣುತ್ತಿದೆ. ಈಗಾಗಲೇ ಚಿತ್ರದ ಟ್ರೈಲರ್ ನೋಡಿದವರೆಲ್ಲ ಶಿವಣ್ಣ ಅವರ ಪರ್‌ಫಾರ್ಮನ್ಸ್ ಕಂಡು ಚಕಿತರಾಗಿದ್ದಾರೆ, ಟ್ರೇಲರ್‌ನಲ್ಲಿ ಚಿತ್ರ ಕಥೆಯ ಒಂದಷ್ಟು ಸುಳಿವನ್ನೂ ಸಹ ಬಿಟ್ಟು ಕೊಡಲಾಗಿದೆ, ಶಿವಣ್ಣ ಲಾಯರ್ ಆಗಿ ಕಾಣಿಸಿಕೊಂಡಿರುವುದು ಕುತೂಹಲ ಮೂಡಿಸಿದೆ. ಜನರಿಗೋಸ್ಕರ ನಾನು ಯಾರನ್ನ ಬೇಕಾದ್ರೂ ಕಳ್ಕೋತೀನಿ, ಆದರೆ ಜನರನ್ನು ಕಳ್ಕೊಳ್ಳೋಕೆ ಇಷ್ಟಪಡಲ್ಲ ಎಂದು ಶಿವಣ್ಣ ಹೇಳುವ ಖಡಕ್ ಡೈಲಾಗ್ ಅಭಿಮಾನಿಗಳನ್ನು ಹುಚ್ಚೆಬ್ಬಿಸಿದೆ. ಭೈರತಿ ರಣಗಲ್ ಆರಂಭದ ದಿನಗಳಲ್ಲಿ ಏನಾಗಿದ್ದ, ಆತನ ಬಾಲ್ಯ, ಯೌವ್ವನದ ಜೀವನ ಹೇಗಿತ್ತು, ಅವನು ಹಾಗಾಗಲು ಕಾರಣವೇನು? ಇದಕ್ಕೆಲ್ಲ ಚಿತ್ರದಲ್ಲಿ ಉತ್ತರವಿದೆ,

ಗೀತಾ ಪಿಕ್ಚರ್ಸ್ ಅಡಿ ಗೀತಾ ಶಿವರಾಜಕುಮಾರ್ ನಿರ್ಮಾಣದ ಈ ಚಿತ್ರಕ್ಕೆ ನರ್ತನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ಶಿವರಾಜಕುಮಾರ್ ಜೊತೆ ನಾಯಕಿಯಾಗಿ 'ಸಪ್ತಸಾಗರದಾಚೆ ಎಲ್ಲೋ' ಖ್ಯಾತಿಯ ರುಕ್ಮಿಣಿ ವಸಂತ್ ಕಾಣಿಸಿಕೊಂಡಿದ್ದಾರೆ. ಹಿರಿಯ ನಟ ದೇವರಾಜ್, ರಾಹುಲ್ ಬೋಸ್, ಅವಿನಾಶ್, ಛಾಯಾಸಿಂಗ್, ಡ್ಯಾನ್ಸಿಂಗ್ ರೋಸ್ ಶಬೀರ್, ಬಾಬು ಹಿರಣ್ಣಯ್ಯ, ಗೋಪಾಲಕೃಷ್ಣ ದೇಶಪಾಂಡೆ, ಪ್ರತಾಪ್, ಮಧು ಗುರುಸ್ವಾಮಿ ಮುಂತಾದವರು ಉಳಿದ ಪಾತ್ರವರ್ಗದಲ್ಲಿದ್ದಾರೆ.

ಈ ಚಿತ್ರಕ್ಕೆ ರವಿ ಬಸ್ರೂರ್ ಅವರ ಸಂಗೀತ ಸಂಯೋಜನೆ, ನವೀನ್‌ಕುಮಾರ್ ಅವರ ಛಾಯಾಗ್ರಹಣ, ಆಕಾಶ್ ಹಿರೇಮಠ ಅವರ ಸಂಕಲನ, ಗುಣ ಅವರ ಕಲಾ ನಿರ್ದೇಶನ ಹಾಗೂ ದಿಲೀಪ್ ಸುಬ್ಬರಾಯನ್, ಚೇತನ್ ಡಿಸೋಜ ಅವರ ಸಾಹಸ ಸಂಯೋಜನೆಯಿದೆ.



ರಾಜು 'ಜೇಮ್ಸ್ ಬಾಂಡ್' ಮೋಷನ್ ಪೋಸ್ಟರ್



ಈ ಹಿಂದೆ ಫಸ್ಟ್‌ರ್‍ಯಾಂಕ್ ರಾಜು ಚಿತ್ರದ ಮೂಲಕ ಕನ್ನಡಿಗರ ಮನೆ ಮಗನಾಗಿದ್ದ ಗುರುನಂದನ್, ಈಗ ಜೇಮ್ಸ್ ಬಾಂಡ್ ಅವತಾರ ಎತ್ತಿದ್ದಾರೆ. ದೀಪಕ್ ಮಧುವನಹಳ್ಳಿ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದ ರಾಜು ಜೇಮ್ಸ್ ಬಾಂಡ್ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಡಿಸೆಂಬರ್ 27ರಂದು ಬಿಡುಗಡೆಯಾಗಲಿರುವ ಈ ಚಿತ್ರವನ್ನು ಮಂಜುನಾಥ್ ವಿಶ್ವಕರ್ಮ (ಲಂಡನ್) ಮತ್ತು ಕಿರಣ್ ಭರ್ತೂರು (ಕೆನಡಾ) ಅವರು ನಿರ್ಮಾಣ ಮಾಡಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕ ದೀಪಕ್ ಮಧುವನಹಳ್ಳಿ ಮಾತನಾಡುತ್ತ, ಈ ಚಿತ್ರದಲ್ಲಿ ಫಸ್ಟ್‌ರ್‍ಯಾಂಕ್ ಸ್ಟೂಡೆಂಟ್ ಆಗಿದ್ದ ಗುರುನಂದನ್ ಅವರನ್ನು ಜೇಮ್ಸ್ ಬಾಂಡ್ ರಾಜು ಆಗಿ ಚೇಂಜ್ ಮಾಡಿದ್ದೇವೆ. ಯಾವುದೇ ಅಶ್ಲೀಲ ಸಂಭಾಷಣೆ ಇಲ್ಲದ ಪರಿಶುದ್ಧ ಮನೋರಂಜನೆಯನ್ನು ನೀಡುವಂತ ಚಿತ್ರವಿದು. ಎರಡೂ ಕಾಲು ಗಂಟೆಗಳ ಈ ಚಿತ್ರದಲ್ಲಿ ಮಕ್ಕಾಲು ಗಂಟೆ ನಗುವಿಗೇ ಮೀಸಲಿಡಬೇಕು. ರವಿಶಂಕರ್, ಚಿಕ್ಕಣ್ಣ, ಸಾಧು ಕೋಕಿಲ, ಅಚ್ಯುತಕುಮಾರ್, ಜೈಜಗದೀಶ್ ಹೀಗೆ ಎಲ್ಲಾ ಅನುಭವಿ ಕಲಾವಿದರೇ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ, ಮೃದುಲಾ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಕನ್ನಡ ಹಾಗೂ ಹಿಂದಿ ಸೇರಿ ಎರಡು ಭಾಷೆಗಳಲ್ಲಿ ಏಕಕಾಲಕ್ಕೆ ಈ ಚಿತ್ರ ಬಿಡುಗಡೆಯಾಗುತ್ತಿದೆ ಎಂದು ಹೇಳಿದರು,

ದೀಪಕ್ ಅವರು ಪರಿಶುದ್ಧ ಮನೋರಂಜನೆಯ ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಅದಕ್ಕೆ ಕಲಾವಿದರು, ತಂತ್ರಜ್ಞರು ಸಾಥ್ ನೀಡಿದ್ದಾರೆ. ನಗುವೇ ಪ್ರಧಾನವಾಗಿರುವ ಈ ನಮ್ಮ ಚಿತ್ರವನ್ನು ಪ್ರೇಕ್ಷಕರು ಮೆಚ್ಚಿಕೊಳ್ಳುತ್ತಾರೆ ಎಂಬ ಭರವಸೆಯಿದೆ. ನೋಡುಗರು ಕೊಟ್ಟ ದುಡ್ಡಿಗೆ ಯಾವುದೇ ಮೋಸವಾಗಲ್ಲ ಎಂದು ಧೈರ್ಯವಾಗಿ ಹೇಳುತ್ತೇವೆ ಎಂದು ನಿರ್ಮಾಪಕರಾದ ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಭರ್ತೂರು ಹೇಳಿದರು.

ನಾಯಕ ಗುರುನಂದನ್ ಮಾತನಾಡುತ್ತ, ನನ್ನ ಹೆಸರು ಈಗಲೂ ಎಷ್ಟೋ ಜನಕ್ಕೆ ಗೊತ್ತಿಲ್ಲ. ಫಸ್ಟ್‌ರ್‍ಯಾಂಕ್ ರಾಜು ಅಂತಲೇ ಹೋದ ಕಡೆಯಲ್ಲೆಲ್ಲಾ ಗುರುತಿಸುತ್ತಾರೆ, ಅಷ್ಟು ದೊಡ್ಡ ಹೆಸರನ್ನು ಆ ಚಿತ್ರ ತಂದುಕೊಟ್ಟಿತ್ತು, ಈ ಚಿತ್ರದ ನಿರ್ದೇಶಕರು ನನ್ನ ಹಿಂದಿನ ಜಾನರ್‌ಗೆ ಬ್ರೇಕ್ ಹಾಕಿದ್ದಾರೆ. ನನ್ನ ಕೈಯಲ್ಲಿ ಗನ್ ಹಿಡಿಸಿ, ಆಕ್ಷನ್ ಮಾಡಿಸಿದ್ದಾರೆ. ನಿರ್ಮಾಪಕರು ಯಾವುದರಲ್ಲೂ ಕೊರತೆ ಇಲ್ಲದ ಹಾಗೆ ಅದ್ಧೂರಿಯಾಗಿ ಚಿತ್ರವನ್ನು ನಿರ್ಮಿಸಿದ್ದಾರೆ ಎಂದು ಹೇಳಿದರು.

ನಾಯಕಿ ಮೃದುಲಾ ಮಾತನಾಡುತ್ತ, ಚಿತ್ರಕಥೆಯಲ್ಲಿ ನನ್ನ ಪಾತ್ರ ತುಂಬಾ ಪ್ರಮುಖವಾಗಿದೆ ಎಂದು ಹೇಳಿದರು. ನಾನು ಚಿತ್ರದ ನಾಲ್ಕು ಹಾಡುಗಳಿಗೆ ಕೊರಿಯಾಗ್ರಫಿ ಮಾಡಿದ್ದೇನೆ. ಎರಡು ಹಾಡುಗಳನ್ನು ಭಾರತದಲ್ಲಿ, ಮತ್ತೆರಡು ಹಾಡುಗಳನ್ನು ಲಂಡನ್‌ನಲ್ಲಿ ಚಿತ್ರೀಕರಿಸಿದ್ದೇವೆ ಎಂದು ನೃತ್ಯನಿರ್ದೇಶಕ ಮುರಳಿ ಹೇಳಿದರು. ಮನೋಹರ್ ಜೋಶಿ ಚಿತ್ರದ ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ.

ದಾಸ ಸಾಹಿತ್ಯಕ್ಕೆ ಮೆರುಗು ಕೊಟ್ಟವರು

ಶ್ರೀ ವಿಜಯದಾಸರು



ದಾಸ ಪರಂಪರೆ ಎಂದ ಕೂಡಲೇ ನೆನಪಿಗೆ ಬರೋದು ಶ್ರೀ ಪುರಂದರ ದಾಸರು. ಅವರಲ್ಲದೆ ಎಲೆಮರೆಯ ಕಾಯಂತೆ ಇನ್ನೂ ಅನೇಕ ದಾಸ ವರೇಣ್ಯರು ನಮ್ಮ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದ್ದಾರೆ. ಅದೇ ರೀತಿ ಹರಿದಾಸ ಪರಂಪರೆಯಲ್ಲಿ ಕಂಡುಬರುವ ಮತ್ತೊಬ್ಬರು ಎಂದರೆ ಶ್ರೀ ವಿಜಯದಾಸರು. ಈಗಾಗಲೇ ದಾಸವರೇಣ್ಯ ಶ್ರೀ ವಿಜಯದಾಸರು ಹೆಸರಲ್ಲಿ ತೆರೆಕಂಡಿದ್ದ ಚಿತ್ರ ಯಶಸ್ವಿಯಾಗಿತ್ತು. ಇದೀಗ ಅದರ ಮುಂದುವರಿದ ಭಾಗವಾಗಿ ಶ್ರೀ ವಿಜಯದಾಸರು-2 ನಿರ್ಮಾಣವಾಗುತ್ತಿದೆ, ಇತ್ತೀಚೆಗೆ ಆ ಚಿತ್ರದ ಮುಹೂರ್ತವೂ ನೆರವೇರಿದೆ.

ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಹೂರ್ತದ ದೃಶ್ಯಕ್ಕೆ ಕ್ಯಾಮೆರಾ ಚಾಲನೆ ಮಾಡಿದರು. ಎಸ್.ಪಿ.ಜೆ. ಮೂವೀಸ್ ಲಾಂಛನದಲ್ಲಿ ತ್ರಿವಿಕ್ರಮ ಜೋಷಿ ಅವರ ನಿರ್ಮಾಣದ ಈ ಚಿತ್ರಕ್ಕೆ ಮಧುಸೂದನ್ ಹವಾಲ್ದಾರ್ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ನಿರ್ಮಾಪಕ ಹಾಗೂ ನಾಯಕ ನಟರೂ ಆದ ತ್ರಿವಿಕ್ರಮ ಜೋಶಿ ಮಾತನಾಡುತ್ತಾ, ಮೊದಲ ಭಾಗಕ್ಕೆ ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ಸಿಕ್ಕಿತು, ಹಾಗಾಗಿ ಎರಡನೇ ಭಾಗಕ್ಕೆ ಕೈಹಾಕಿದ್ದೇವೆ, ಆಗಿನ ಕಾಲದಲ್ಲಿ ದಾಸ ಸಾಹಿತ್ಯಕ್ಕೆ ಎಷ್ಟು ಬೆಲೆ ಇತ್ತು, ಸದಾ ಸಾಮಾನ್ಯ ಜನರ ನಡುವೆಯೇ ಇರುತ್ತಿದ್ದ ದಾಸ ವರೇಣ್ಯರು ಸಮಾಜದ ಪರಿವರ್ತನೆಗೆ ಹೇಗೆ ಕಾರಣಕರ್ತರಾಗಿದ್ದರು ಎಂಬುದನ್ನು ಈ ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇವೆ. ಹರಿದಾಸರ ಕುರಿತಾಗಿ ಇನ್ನೂ ಹತ್ತು ಸಿನಿಮಾಗಳನ್ನು ನಿರ್ಮಿಸಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದೇನೆ. ದೇಶಕಂಡ ಸರಳ, ಸಜ್ಜನ ರಾಜಕಾರಣಿಗಳಲ್ಲಿ ಅನಂತಕುಮಾರ್ ಒಬ್ಬರು. ಅವರ ಜೀವನ, ಸಾಧನೆ ಕುರಿತಾಗಿ ಚಲನಚಿತ್ರವೊಂದನ್ನು ನಿರ್ಮಿಸಬೇಕೆಂಬ ಯೋಜನೆಯಿದೆ, ಈ ಬಗ್ಗೆ ತೇಜಸ್ವಿನಿ ಅನಂತಕುಮಾರ್ ಅವರ ಜತೆ ಚರ್ಚಿಸಿದ್ದೇನೆ, ಅವರೂ ಒಪ್ಪಿದ್ದಾರೆ. ಸದ್ಯದಲ್ಲೇ ಆ ಚಿತ್ರವನ್ನು ಆರಂಭಿಸುವುದಾಗಿಯೂ ಹೇಳಿದರು. ದಾಸವರೇಣ್ಯ ಶ್ರೀ ವಿಜಯ ದಾಸರು ಭಾಗ 2 ಚಿತ್ರದ ಚಿತ್ರೀಕರಣಕ್ಕೆ ಚಾಲನೆ ನೀಡಲಾಗಿದೆ. ಇಂದಿನಿಂದ ಚಿತ್ರೀಕರಣವೂ ಆರಂಭವಾಗಿದೆ. ನಾಲ್ಕು ತಿಂಗಳ ಒಳಗೇ ಚಿತ್ರ ಬಿಡುಗಡೆಗೆ ಸಿದ್ಧವಾಗಲಿದೆ. ಹಂಪೆ, ಆನೆಗುಂದಿ, ಹುಲಗಿ, ಶ್ರೀರಂಗಪಟ್ಟಣ, ಮೇಲುಕೋಟೆ ಮುಂತಾದ ಸ್ಥಳಗಳಲ್ಲಿ ಚಿತ್ರೀಕರಣವನ್ನು ನಡೆಸಲಾಗುವುದು ಎಂದು ನಿರ್ದೇಶಕ ಮಧುಸೂದನ್ ಹವಾಲ್ದಾರ್ ಅವರು ತಿಳಿಸಿದರು. ಶ್ರೀ ವಿಜಯದಾಸರ ಪಾತ್ರದಲ್ಲಿ ತ್ರಿವಿಕ್ರಮ ಜೋಷಿ ಕಾಣಿಸಿಕೊಂಡರೆ, ಅವರ ಪತ್ನಿ ಹರಳಮ್ಮನಾಗಿ ಶ್ರೀಲತಾ ಬಾಗೇವಾಡಿ ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ಜೆ.ಎಂ. ಪ್ರಹ್ಲಾದ್ ಅವರು ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಬರೆದಿದ್ದಾರೆ. ಒಂಭತ್ತು ಹಾಡುಗಳು ಈ ಚಿತ್ರದಲ್ಲಿರುತ್ತದೆ. ತ್ರಿವಿಕ್ರಮ ಜೋಶಿ, ಪ್ರಭಂಜನ ದೇಶಪಾಂಡೆ, ಶರತ್ ಜೋಶಿ ಸೇರಿದಂತೆ ಇನ್ನೂ ಅನೇಕ ಕಲಾವಿದರು ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

'ಆರ್‌ಪಿ' 5 ಭಾಷೆಗಳ ಥ್ರಿಲ್ಲರ್ ಕಥನ




ಇತ್ತೀಚಿನ ದಿನಗಳಲ್ಲಿ ನೈಜ ಘಟನೆಯಾಧಾರಿತ ಚಿತ್ರಗಳನ್ನು ಪ್ರೇಕ್ಷಕರು ಹೆಚ್ಚು ಇಷ್ಟಪಡುತ್ತಿದ್ದಾರೆ. ಅದೇ ಹಾದಿಯಲ್ಲಿ ಈಗ ಮತ್ತೊಂದು ಸಿನಿಮಾ ಸೆಟ್ಟೇರುತ್ತಿದೆ. ಆ ಚಿತ್ರದ ಹೆಸರು ಆರ್.ಪಿ. ಈ ಚಿತ್ರದ ಟೈಟಲ್ ಅನಾವರಣ ಸಮಾರಂಭ ಇತ್ತೀಚೆಗೆ ನೆರವೇರಿತು, ಬ್ಲಾಕ್ ಅಂಡ್ ವೈಟ್ ಎಂಬ ಅಡಿಬರಹ ಇರುವ ಈ ಚಿತ್ರದ ಟೈಟಲ್ ಟೀಸರನ್ನು ಇತ್ತೀಚೆಗೆ ಡಾ.ಆಚಾರ್ಯ ಮಹಾಮಂಡಲೇಶ್ವರ ಸ್ವಾಮೀಜಿ ಅವರು ಬಿಡುಗಡೆ ಮಾಡಿ, ಚಿತ್ರತಂಡಕ್ಕೆ ಶುಭಾಶೀರ್ವಾದ ಮಾಡಿದರು.

ಯುವರಾಜ್.ಎಸ್. ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ಡಿ.ಎಲ್.ಗ್ರೂಪ್ಸ್ ಬ್ಯಾನರ್, ಕಬ್ಬಾಳಮ್ಮ ಕ್ರಿಯೇಶನ್ ಅಡಿಯಲ್ಲಿ ಶೀಲಾ ನಾಯ್ಡು, ರಘು.ಡಿ, ಅನಿಲ್ ಗೌಡ್ರು, ಬಿ.ನಾಗೇಶ್, ಜಿ. ಲಿಂಗೇಶ್, ದೇವರಾಜು, ರಾಘವೇಂದ್ರ ಪ್ರಸಾದ್, ಶ್ರೀನಿವಾಸುಲು (ಬಳ್ಳಾರಿ), ಶ್ರೀನಿವಾಸ್. ಎನ್.ಪಿ, ಕಲ್ಪನ.ಆರ್. ಹೀಗೆ ಒಂದಷ್ಟು ಸ್ನೇಹಿತರೇ ಸೇರಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಯುವರಾಜ್ ಅವರ ಜತೆ ಸಹನಿರ್ದೇಶಕರಾಗಿ ನೃತ್ಯ ಸಂಯೋಜಕ ರಾಜ್‌ದೇವ್ ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಯುವರಾಜ್, ನನ್ನ ಗೆಳೆಯ ರಾಘವೇಂದ್ರ ಪ್ರಸಾದ್ ಅವರ ಜೀವನದಲ್ಲಿ ನಡೆದಂಥ ಒಂದಷ್ಟು ಘಟನೆಗಳನ್ನು ಇಟ್ಟುಕೊಂಡು ಈ ಚಿತ್ರದ ಕಥೆ, ಚಿತ್ರಕಥೆ ಮಾಡಿದ್ದೇವೆ, ಅವರ ಹೆಸರನ್ನೇ ಸಿನಿಮಾದ ಟೈಟಲ್ ಆಗಿಟ್ಟುಕೊಂಡಿದ್ದೇವೆ. ಮನುಷ್ಯನ 2 ಗುಣಗಳ ಪ್ರತೀಕವೇ ಆರ್‌ಪಿ. ಭಗವಂತ ನಮಗೆ ನೀಡಿದ ಪ್ರಕೃತಿಯ ಕೊಡುಗೆಯನ್ನು ನಾವು ಹೇಗೆಲ್ಲ ಹಾಳು ಮಾಡುತ್ತಿದ್ದೇವೆ, ಅದರ ಪರಿಣಾಮಗಳೇನು ಎಂಬುದನ್ನು ಈ ಚಿತ್ರದಲ್ಲಿ ಹೇಳೋ ಪ್ರಯತ್ನ ಮಾಡುತ್ತಿದ್ದೇವೆ. ಸದ್ಯದ ಪರಿಸ್ಥಿತಿಯಲ್ಲಿ ಪ್ರಕೃತಿ ನಾಶವಾಗುತ್ತಿದ್ದರೂ ಅದನ್ನು ನಾವು ಮರೆಯುತ್ತಿದ್ದೇವೆ ಎಂದು ಚಿತ್ರದ ಕಾನ್ಸೆಪ್ಟ್ ಬಗ್ಗೆ ವಿವರಿಸಿದರು. ಈಗಾಗಲೇ ಕಲಾವಿದರು, ತಂತ್ರಜ್ಞರ ಆಯ್ಕೆ ಪ್ರಕ್ರಿಯೆ ಶುರುವಾಗಿದೆ. ಚಿತ್ರದಲ್ಲಿ ಪ್ರಮುಖ ಪಾತ್ರಗಳಲ್ಲಿ ಬಾಲನಟರುಗಳಾದ ನಿಖಿಲ್ ಆರ್. ಮತ್ತು ದಕ್ಷಿತ್‌ಗೌಡ ನಟಿಸುತ್ತಿದ್ದಾರೆ. ಈ ಚಿತ್ರವು ಕನ್ನಡ ಸೇರಿದಂತೆ ತಮಿಳು, ತೆಲುಗು, ಹಿಂದಿ ಹಾಗೂ ಮಲೆಯಾಳಂ ಸೇರಿ 5 ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ.

ಸಿನಿಪದಬಂಧ-551



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.ಪದ್ಮಿನಿ ಪಿಕ್ಚರ್ ಸಂಸ್ಥೆ ನಿರ್ಮಾಣದಲ್ಲಿ ಕ್ಯಾಲೆಂಡರ್‌ನಲ್ಲಿ ಸಿಕ್ಕ ದಿನಾಂಕ! 5
5.ಕೆ. ಶಿವರಾಮ್ ಋತುವಿನಲ್ಲಿ ಬರೆದ ಪದ್ಯ! 5
8.ಧ್ರುವತಾರೆ ಚಿತ್ರದ ಕಥಾಲೇಖಕನಿಗೆ ಆರಂಭದಲ್ಲಿ ಗೆಲುವಿದೆ 7
9.ಮೂರು ಕಣ್ಣುಳ್ಳವನಿಗೆ ಪ್ರಭಾಕರ್ ಅಭಿನಯವಿದೆ 3
10.ಮಂಡ್ಯ ನಾಗರಾಜ್ ಮಾಡಿದ ಕೊಲೆ! 3
12.ನಾಯಿ ಹಿಂಬಾಲಿಸಿದ ಛಾಯೆ ಇಲ್ಲಿ ತಿರುಗಿದೆ 3
13.ಸಾಂಸ್ಕೃತಿಕ ನಗರಿಯನ್ನು ಹಾಡಿನಲ್ಲಿ ವರ್ಣಿಸಿದ ಪ್ರೇಮ್ ಚಿತ್ರ 5
16.ಸಂಪತ್ತಿಗೆ ಸವಾಲ್ ಚಿತ್ರದ ಹಾಡೊಂದರಲ್ಲಿ ಪುನೀತ್ ಚಿತ್ರ ಪ್ರತ್ಯಕ್ಷ! 6
18.ಹ್ಯಾಟ್ರಿಕ್ ಹೀರೋನನ್ನು ಪ್ರೀತಿಯಿಂದ ಕರೆದರೆ ಜಗ್ಗೇಶ್ ಚಿತ್ರ ಸಿಗಲಿದೆ 3
19.ಶ್ರೀನಾಥ್ ಆಡಿದ ಬೇಟೆ 3
20.ಅಮೃತ ವರ್ಷಿಣಿ ಚಿತ್ರದ ಹಾಡಿನಲ್ಲಿ ಬಂದ ಸಣ್ಣ ಸಣ್ಣ ಹನಿ 3

ಮೇಲಿನಿಂದ ಕೆಳಕ್ಕೆ

1.ಕನ್ನಡದ ಫಸ್ಟ್ ನೈಟ್! 5
2.ಅಂಬರೀಷ್-ಅಂಬಿಕಾ ದಶ ದಿಕ್ಕುಗಳಲ್ಲಿಯೂ ಕಂಡ ಗೆಲುವು 4
3.ಜಗ್ಗೇಶ್ ಬಿರುದಿನಲ್ಲಿ ಒಂಬತ್ತು ಬಗೆಯ ಸ್ವಾದವಿದೆ 4
4.ನಂಯಜಮಾನ್ರು ಚಿತ್ರದ ನಾಯಕಿಯರಲ್ಲಿ ಒಬ್ಬಳು 5
6.ಮಾಲಾಶ್ರೀಗೆ ಉಡುಗೊರೆ ನೀಡಿದ ಗೃಹ 5
7.ಒಳ್ಳೆಯವನು ಕೆಟ್ಟವನಾಗಲು ಸಾಹಸ ಕಲಾವಿದ ವಿಜಯ್ ನಿರ್ದೇಶನವಿದೆ 5
11.ಬಿ.ಎಸ್.ರಂಗ ನಿರ್ದೇಶನದಲ್ಲಿ ಪ್ರಭಾಕರ್ ವ್ಯಾಘ್ರನಾಗಿದ್ದಾನೆ 6
14.ಸುದರ್ಶನ್-ಶೈಲಶ್ರೀ ಅಭಿನಯದ ಚಿತ್ರ 5
15.ದರ್ಶನ್ ಹಾಡಿದ ಜೋಗುಳ ಪದ 4
17." ಒಮ್ಮೆ ನಿನ್ನನ್ನು ಕಣ್ತುಂಬಾ ಕಾಣುವಾಸೆ ಎಲ್ಲಿರುವೆ .... ", ಗೀತೆಯ ಚಿತ್ರ 4

ಸಿನಿ ಪದಬಂಧ 550ರ ಉತ್ತರ

ಹೊ	ಸ	ಕ	ಳ್ಳ	ಹ	ಳೆ	ಕು	ಳ್ಳ		ಸಿಂ	
ಯ್ಸ				ಠ		ಲ			ಗಾ	
ಳ		ಪ		ಮಾ		ವ	ನ	ಸಿ	ರಿ	
		ಲ್ಲ		ರಿ		ಧು		ಡಿ		
	ಹಾ	ವಿ	ನ	ಹೆ	ಡೆ		ಹಾ	ಲು	ಜೇ	ನು
	ವಿ			ಣ್ಣು						
	ನ		ಬೆಂ	ಕಿ	ಚಂ	ಡು		ಅ	ಮ	ಲಾ
	ದ್ವೇ			ಲಾ				ಗ್ನಿ		
	ಷ	ವಿ		ಡಿ		ಶ	ರ	ಪಂ	ಜ	ರ
				ಗಂ		ನಿ		ಜ		
ಭ	ರ್ಜ	ರಿ	ಗಂ	ಡು				ರ	ನ್ನ	

ವಿಜೇತರು: ಜವನಪ್ಪ, ನಂ. 26, 4ನೇ ಮೇನ್, 4ನೇ ಕ್ರಾಸ್, ಜಯನಗರ, ಮೈಸೂರು-570014

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ ಶುಕ್ರವಾರ 15 ನವೆಂಬರ್ 2024

ಕುಡಿಯುವ ನೀರಿನ ದರ ಹೆಚ್ಚಳ: ಬಿಜೆಪಿ ಪ್ರತಿಭಟನೆ



ಕುಡಿಯುವ ನೀರಿನ ದರ ಹೆಚ್ಚಳ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ನ.14– ಕುಡಿಯುವ ನೀರಿನ ದರ ಹೆಚ್ಚಳ ಖಂಡಿಸಿ ಮಾಜಿ ಶಾಸಕ ಬಿ.ಹರ್ಷವರ್ಧನ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು. ಇಲ್ಲಿನ ನಗರಸಭೆ ಎದುರು ಜಮಾಯಿಸಿದ ಪ್ರತಿಭಟನಾಕಾರರು ನಗರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ನಗರದ ಹಳೇ ಟೌನ್ ವ್ಯಾಪ್ತಿಯ 1 ರಿಂದ 10ನೇ ವಾರ್ಡ್ ನಿವಾಸಿಗಳಿಗೆ ನಗರಸಭೆ ಮಾಸಿಕ ಸಾವಿರಾರು ರೂ. ಮೊತ್ತದ ನೀರಿನ ಬಿಲ್ ನೀಡಿದೆ. 4 ಮಂದಿ ಸಾಮಾನ್ಯ ಕುಟುಂಬಕ್ಕೆ 63 ಸಾವಿರ ನೀರಿನ ಬಿಲ್ ನೀಡಲಾಗಿದೆ. ನಗರದ ನಿವಾಸಿಗಳು ನಿರಂತರ ನೀರು ಸರಬರಾಜು ಯೋಜನೆ ಜಾರಿಗೆ ಬಂದ ನಂತರ ನಗರಸಭೆ ನೀಡುತ್ತಿರುವ ನೀರಿನ ಬಳಕೆಯ ಬಿಲ್ ನೋಡಿ ಗಾಬರಿಯಾಗಿದ್ದಾರೆ. ಕೆಲವು ಮನೆಗಳಿಗೆ 6 ತಿಂಗಳಿಗೆ 80 ಸಾವಿರಕ್ಕೂ ಅಧಿಕ ಮೊತ್ತದ ಬಿಲ್ ನೀಡಲಾಗಿದೆ. ನಗರಸಭೆ ಅಳವಡಿಸಿರುವ ನೀರಿನ ಮೀಟರ್ ಪರಿಶೀಲಿಸಿ ಉಂಟಾಗಿರುವ ತೊಂದರೆ ನಿವಾರಿಸಬೇಕು. ಅಲ್ಲಿವರೆಗೂ ಸಾರ್ವಜನಿಕರು ನೀರಿನ ಬಿಲ್ ಕಟ್ಟಬೇಡಿ ಎಂದರು.

ನಗರಸಭೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಅಂಬೇಡ್ಕರ್ ವೃತ್ತ, ಅಶೋಕಪುರಂ ಗಳಲ್ಲಿ ಅಕ್ರಮ ಬಡಾವಣೆಗಳಿಗೆ ಪರವಾನಗಿ ನೀಡಲಾಗುತ್ತಿದೆ. ಅಂಬೇಡ್ಕರ್ ಪುತ್ಥಳಿ ಬಳಿ ಚಾಮ ರಾಜನಗರ ಬೈಪಾಸ್ ರಸ್ತೆಯಲ್ಲಿ ಚಾಮಲಾಪುರದ ಹುಂಡಿ ಬಡಾವಣೆಗಾಗಿ ಮೀಸಲಿಟ್ಟಿದ್ದ 3 ಎಕರೆ ಜಾಗಕ್ಕೆ ಬದಲಿ ನಿವೇಶನ ನೀಡದೆ ಅತಿಕ್ರಮಣ ಮಾಡಿ ನಿಯಮಬಾಹಿರವಾಗಿ ಖಾಸಗಿಯವರಿಗೆ ಕಟ್ಟಡ ನಿರ್ಮಾಣ ಮಾಡಲು ಪರವಾನಗಿ ನೀಡಲಾಗಿದೆ. ಒಂದೂವರೆ ವರ್ಷದ ಹಿಂದೆ ಅಧಿಕಾರಕ್ಕೆ ಬಂದ ಶಾಸಕರು ನಗರಸಭೆಯಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡುವುದಾಗಿ ಹೇಳಿದ್ದರು. ಆದರೆ ಕೇವಲ 1 ವರ್ಷದಲ್ಲಿ ನಗರಸಭೆಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ನಗರಸಭೆ ಅಧಿಕಾರಿಗಳು ಅಕ್ರಮಗಳನ್ನು ಸರಿಪಡಿಸಿಕೊಳ್ಳದಿದ್ದರೆ ನಗರಸಭೆಗೆ ಬೀಗ ಜಡಿದು ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಗರಸಭೆ ಸದಸ್ಯ ಕಪಿಲೇಶ್ ಮಾತನಾಡಿ, 8 ಸಾವಿರ ಲೀಟರ್‌ವರೆಗೆ ನೀರಿನ ಬಿಲ್ ಉಚಿತ ಎಂದು ಹೇಳಲಾಗುತ್ತದೆ. ಅದೆಲ್ಲಾ ಸುಳ್ಳು. ಬದಲಿಗೆ ಅತೀ ಹೆಚ್ಚು ನೀರಿನ ಬಿಲ್ ನೀಡಲಾಗುತ್ತಿದೆ. ಅಳವಡಿಸುವ ಎಲ್ಲಾ ನೀರಿನ ಮೀಟರ್‌ಗಳು ದೋಷಪೂರಿತವಾಗಿದ್ದು, ಹೆಂಚಿನ ಮನೆಗಳಿಗೂ 10ರಿಂದ 15 ಸಾವಿರ ಬಿಲ್ ಬರುತ್ತಿದೆ. ಕನಿಷ್ಠ 1500 ವರೆಗೆ ನೀರಿನ ಬಿಲ್ ನೀಡಲಾಗುತ್ತಿದೆ. ಅಲ್ಲದೆ ಕಳೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ಆಡಳಿತಾಧಿಕಾರಿಗಳ ಅವಧಿಯಲ್ಲಿ ನಗರಸಭೆಯಲ್ಲಿ ನಡೆದಿರುವ ಭ್ರಷ್ಟಾಚಾರ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸಲಾಗುವುದು ಎಂದು ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ನಗರಸಭೆ ಅಧ್ಯಕ್ಷ ಹಾಗೂ ಆಯುಕ್ತರು, ಭ್ರಷ್ಟ ಅಧಿಕಾರಿಗಳೊಂದಿಗೆ ಶಾಮೀಲಾಗಿ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವಹಿಸದೆ ತಿಪ್ಪೆ ಸಾರಿಸುವ ಕೆಲಸ ಮಾಡುತ್ತಿದ್ದಾರೆ. ನಗರಸಭೆ ಅಧಿಕಾರಿಗಳು ಮಧ್ಯವರ್ತಿಗಳನ್ನು ನೇಮಿಸಿಕೊಂಡು ಸಾರ್ವಜನಿಕರ ಸುಲಿಗೆ ಮಾಡುತ್ತಿದ್ದಾರೆ. ನಗರಸಭೆ ಜನರ ಪಾಲಿಗೆ ನರಕಸಭೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ನಗರಸಭೆ ಸದಸ್ಯರಾದ ಸಿದ್ದರಾಜು, ಮಹೇಶ್ ಅತ್ತಿಖಾನೆ, ಮಹದೇವಮ್ಮ, ಮಹದೇವ ಪ್ರಸಾದ್, ನಾಗಮಣಿ ಶಂಕರಪ್ಪ, ಖಾಲೀದ್ ಅಹಮ್ಮದ್, ಬಾಲಚಂದ್ರ, ಶಂಕರಪ್ಪ, ಸಂಜಯ್ ಶರ್ಮ, ರೈತ ಸಂಘದ ಹಾಡ್ಯ ರವಿ, ಮಂಜೇಶ್ ಕುಮಾರ್, ಶಿವಣ್ಣ, ಮಹದೇವಸ್ವಾಮಿ, ಗಾಯತ್ರಿ, ಉಮೇಶ್ ಉಪಸ್ಥಿತರಿದ್ದರು.

ವಿಜೃಂಭಣೆಯ ಲಕ್ಷ ದೀಪೋತ್ಸವ, ತೆಪ್ಪೋತ್ಸವ



ತಿ.ನರಸೀಪುರದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಗುರುವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ತಿ.ನರಸೀಪುರ, ನ.14– ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ಸೇವಾ ಸಮಿತಿಯಿಂದ ಕಾಶಿಗಿಂತ ಗುಲಗಂಜಿ ಗಾತ್ರವೆನಿಸಿರುವ ಕಾವೇರಿ ಕಪಿಲಾ ನದಿ ದಡದಲ್ಲಿರುವ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ 3ನೇ ವಾರ 13ನೇ ವರ್ಷದ ಲಕ್ಷ ದೀಪೋತ್ಸವ ಮತ್ತು ತೆಪ್ಪೋತ್ಸವ ಗುರುವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದೀಪೋತ್ಸವ ಮತ್ತು ತೆಪ್ಪೋತ್ಸವ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಶ್ರೀಗುಂಜಾ ನರಸಿಂಹ ಸ್ವಾಮಿ ಅವರಿಗೆ ಹೋಮ ಹವನದೊಂದಿಗೆ ವಿವಿಧ ಅಭಿಷೇಕ ನೆರವೇರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಲು ಅವಕಾಶ ಮಾಡಿಕೊಡಲಾಯಿತು.



ಅಲ್ಲದೇ ದೇವಾಲಯದ ಆವರಣದಲ್ಲಿ ನರಸಿಂಹ ಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಸೇವಾ ಸಮಿತಿ ವತಿಯಿಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ದೀಪೋತ್ಸವ, ತೆಪ್ಪೋತ್ಸವ: ಶ್ರೀಗುಂಜಾ ನರಸಿಂಹಸ್ವಾಮಿ ಸೇವಾ ಸಮಿತಿಯಿಂದ ಸಂಜೆ 6 ಗಂಟೆಗೆ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಮಹಿಳೆಯರು, ಮಕ್ಕಳು ಸೇರಿದಂತೆ ಸಾರ್ವಜನಿಕರು ಬೀಳುತ್ತಿದ್ದ ತುಂತುರು ಮಳೆಯನ್ನೂ ಲೆಕ್ಕಿಸದೇ ದೀಪ ಹಚ್ಚಿ ಸಂಭ್ರಮಿಸಿ, ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿದರು. ಅಲ್ಲದೇ ದೇವಾಲಯದ ಆವರಣವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದಲೂ ಅಲಂಕರಿಸಲಾಗಿತ್ತು. ಬಳಿಕ ಕಪಿಲಾ ನದಿಯಲ್ಲಿ ಬಗೆ ಬಗೆಯ ಹೂಗಳಿಂದ ಸಿಂಗರಿಸಿದ್ದ ತೆಪ್ಪದಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ನದಿಯಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕುವ ಮೂಲಕ ಅದ್ಧೂರಿಯಾಗಿ ತೆಪ್ಪೋತ್ಸವ ನಡೆಸಲಾಯಿತು.

ಈ ವೇಳೆ ಕಪಿಲಾ ನದಿ ದಡದಲ್ಲಿ ನೆರೆದಿದ್ದ ಸಾವಿರಾರು ಭಕ್ತರು ತೆಪ್ಪೋತ್ಸವ ಕಣ್ತುಂಬಿಕೊಂಡು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ನರಸಿಂಹ ಸ್ವಾಮಿಗೆ ಪ್ರಾರ್ಥನೆ ಸಲ್ಲಿಸಿದರು. ಅಲ್ಲದೇ ತೆಪ್ಪೋತ್ಸವದ ವೇಳೆ ಸಿಡಿದ ಬಾಣ ಬಿರುಸು ನೋಡುಗರ ಗಮನ ಸೆಳೆಯಿತು. ಈ ವೇಳೆ ದೇವಾಲಯದ ಪ್ರಧಾನ ಅರ್ಚಕ ಸಂಪತ್ ಕುಮಾರ್ (ಜಜ್ಜಪ್ಪ), ಪಾರುಪತ್ತೆಗಾರ್ ತಿರುಮಕೂಡಲು ದೀಪು ಮತ್ತು ಶ್ರೀಪಾದ ಸಿಬ್ಬಂದಿಗಳು ಹಾಜರಿದ್ದರು.

ರಿಯಲ್ ಎಸ್ಟೇಟ್ ಮಾಫಿಯಾ ಅಟ್ಟಹಾಸ

ದಂಪತಿ ಮನನೊಂದು ಆತ್ಮಹತ್ಯೆ; 12 ಮಂದಿ ವಿರುದ್ಧ ಎಫ್‌ಐಆರ್

ಬೆಟ್ಟದಪುರ, ನ.14– ರಿಯಲ್ ಎಸ್ಟೇಟ್ ಮಾಫಿಯಾದಿಂದ ಮನನೊಂದು ಉದ್ಯಮಿ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಬೈಲಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡ ಹೊನ್ನೂರು ಕಾವಲ್‌ನಲ್ಲಿ ಬುಧವಾರ ಸಂಜೆ ನಡೆದಿದೆ. ಪ್ರಕರಣ ಸಂಬಂಧ 12 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕೊಡಗಿನ ಕುಶಾಲನಗರದಲ್ಲಿ ಉದ್ಯಮ ನಡೆಸುತ್ತಿದ್ದ ಮೂಲತಃ ಕೊಪ್ಪ ನಿವಾಸಿ ಸುರೇಶ್ (40) ಹಾಗೂ ಅವರ ಪತ್ನಿ ಪಲ್ಲವಿ (28) ಆತ್ಮಹತ್ಯೆಗೆ ಶರಣಾದವರಾಗಿದ್ದು, ಸುರೇಶ್ ತನ್ನ ಪತ್ನಿಯನ್ನು ದೇವಸ್ಥಾನಕ್ಕೆಂದು ಹೇಳಿ ದೊಡ್ಡಹೊನ್ನೂರು ಕಾವಲ್‌ನ ಜಮೀನಿನ ಹಳೆಯ ಖಾಲಿ ಮನೆಗೆ ಕರೆತಂದಿದ್ದು ಅಲ್ಲಿ ಇಬ್ಬರೂ ನೇಣಿಗೆ ಶರಣಾಗಿದ್ದಾರೆ.

ರಿಯಲ್ ಎಸ್ಟೇಟ್ ಮಾಫಿಯಾ ಕಿರುಕುಳದಿಂದ ಆತ್ಮಹತ್ಯೆಗೆ ಶರಣಾಗುತ್ತಿರುವುದಾಗಿ ಸುರೇಶ್ ಆತ್ಮಹತ್ಯೆಗೆ ಮುನ್ನ ಡೆತ್‌ನೋಟ್‌ನಲ್ಲಿ ಬರೆದಿಟ್ಟಿದ್ದು, ಇದರ ಆಧಾರದ ಮೇರೆಗೆ ಬೈಲುಕೊಪ್ಪ ಪೊಲೀಸ್ ಠಾಣೆಯಲ್ಲಿ 12 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.



ಆತ್ಮಹತ್ಯೆಗೆ ಶರಣಾದ ದಂಪತಿ.

ಈ ನಡುವೆ ಗುರುವಾರ ಮಧ್ಯಾಹ್ನ ಮೃತದೇಹಗಳನ್ನು ಇಟ್ಟುಕೊಂಡು ಮೃತರ ಸಂಬಂಧಿಕರು, ಸ್ನೇಹಿತರು ಹಾಗೂ ಕುಶಾಲನಗರ, ಕೊಪ್ಪ ಗ್ರಾಮಸ್ಥರು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ದಂಪತಿ ಸಾವಿಗೆ ಕಾರಣರಾದ ರಿಯಲ್ ಎಸ್ಟೇಟ್ ಮಾಫಿಯಾದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದರು. ಆರೋಪಿಗಳು ಪ್ರಭಾವಶಾಲಿಗಳಾಗಿದ್ದು, ಹಲವರಿಗೆ ವಂಚನೆ ಎಸಗಿದ್ದಾರೆ. ಇದರಿಂದ ಅಮಾಯಕ ದಂಪತಿ ಪ್ರಾಣ ಕಳೆದುಕೊಳ್ಳುವಂತಾಗಿದೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಆರೋಪಿಗಳನ್ನು ಕೂಡಲೇ ಬಂಧಿಸಿ ಕ್ರಮಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಪೊಲೀಸರನ್ನು ಒತ್ತಾಯಿಸಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಮೃತ ಸುರೇಶ್ ಅವರ ಸ್ನೇಹಿತ ಕೆ.ಜಿ.ಮನು, ಸುರೇಶ್ ನಡೆಸುತ್ತಿದ್ದ ವ್ಯವಹಾರದಲ್ಲಿ ಕೆಲವರು ಮೂಗು ತೂರಿಸಿ ದ್ರೋಹ ಮಾಡಿದ್ದಾರೆ. ಕುಶಾಲನಗರ ಸರ್ಕಾರಿ ಪದವಿ ಕಾಲೇಜು ಬಳಿ ಬಡಾವಣೆ ನಿರ್ಮಾಣಕ್ಕೆ ಜಾಗವೊಂದನ್ನು ಸುರೇಶ್ ಅಭಿವೃದ್ಧಿಪಡಿಸುತ್ತಿದ್ದರು. ಸುರೇಶ್ ವ್ಯವಹಾರಕ್ಕೆ ಅಡ್ಡಗಾಲು ಹಾಕಿದ ರಿಯಲ್ ಎಸ್ಟೇಟ್ ಮಾಫಿಯಾದ ಕೆಲವರು ಮಾಲೀಕರಿಗೆ ಹೆಚ್ಚಿನ ಲಾಭದ ಆಮಿಷವೊಡ್ಡಿ ಆತನಿಂದ ವ್ಯವಹಾರ ಕಸಿದುಕೊಂಡಿದ್ದಾರೆ. ಇದರಿಂದ ಹೂಡಿಕೆ ಮಾಡಿದ್ದ ಹಣ ಕಳೆದುಕೊಂಡು ಇತ್ತ ಜಾಗವೂ ಇಲ್ಲದೇ, ಮನನೊಂದು ಕೊನೆಗೆ ಯಾವುದೇ ದಾರಿ ಕಾಣದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಕಾರಣರಾದ ಜಾಗ ಮಾಲೀಕರು ಹಾಗೂ ಸಂಬಂಧಿಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಆಗಬೇಕಿದೆ ಎಂದು ಗ್ರಾಮಸ್ಥರು ಆಗ್ರಹಿಸಿದರು.

ಸಚಿವ ಜಮೀರ್ ವಿರುದ್ಧ ಅವಹೇಳನಕಾರಿ ಹೇಳಿಕೆ, ಜಾತಿ ನಿಂದನೆ ಮಾಡಿರುವ

ಪುನೀತ್ ಕೆರೆಹಳ್ಳಿ ವಿರುದ್ಧ ದೂರು

ಹುಣಸೂರು, ನ.14– ವಸತಿ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಅವಹೇಳನಕಾರಿ ಹೇಳಿಕೆ ಹಾಗೂ ಧರ್ಮ, ಜಾತಿ ನಿಂದನೆ ಮಾಡಿರುವ ಪುನೀತ್ ಕೆರೆಹಳ್ಳಿ ವಿರುದ್ಧ ನಗರದ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಸಂತೋಷ್ ಕಾಶಪ್ಪ ಅವರಿಗೆ ತಾಲೂಕಿನ ಮುಸ್ಲಿಂ ಮುಖಂಡರು ದೂರು ನೀಡಿದರು.

ನಂತರ ಮಾತನಾಡಿದ ಮುಖಂಡರು, ಫೇಸ್‌ಬುಕ್‌ನಲ್ಲಿ ಪುನೀತ್ ಕರೆಹಳ್ಳಿ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಅವಹೇಳನಕಾರಿ ಹೇಳಿಕೆ ಹಾಗೂ ಧರ್ಮ, ಜಾತಿ ನಿಂದನೆ ಮಾಡಿ ಮುಸ್ಲಿಂ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಉಂಟು ಮಾಡಿದ್ದಾನೆ. ಹಿಂದೂ–ಮುಸ್ಲಿಂರ ನಡುವೆ ಗಲಭೆ ಸೃಷ್ಟಿಸಿ ಸಮಾಜದಲ್ಲಿ ಅಶಾಂತಿ ಉಂಟು ಮಾಡಲು ಪ್ರಯತ್ನಿಸಿರುತ್ತಾನೆ. ಇತನ ವಿರುದ್ಧ ರಾಜ್ಯದ ವಿವಿಧೆಡೆ ಕೊಲೆ, ಕೊಲೆ ಯತ್ನ, ಕೋಮುಗಲಭೆ ಮುಂತಾದ ಪ್ರಕರಣ ದಾಖಲಾಗಿದ್ದು, ಪ್ರಕರಣ ಸಂಬಂಧ ಇತನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಸೀದೆ ಆಲಾ ಅಧ್ಯಕ್ಷ ಅಯೂಬ್ ಖಾನ್, ಕಾರ್ಯದರ್ಶಿ ಮಝಾಝ್ ಅಹಮದ್, ಸದಸ್ಯರಾದ ಮುನ್ನಾ, ಮಹಮೂದ್, ಫೈರೋಜ್, ಮುಜೀಬ್, ವಕೀಲರಾದ ಆಫೀಯಾ, ಜಬ್ಬಾರ್, ರಾಖಿಬ್ ಹಾಜರಿದ್ದರು.

ವೈನ್‌ಸ್ಟೋರ್ ತೆರೆಯುವುದನ್ನು ವಿರೋಧಿಸಿ ಪ್ರತಿಭಟನೆ



ವೈನ್ ಸ್ಟೋರ್ ತೆರೆಯುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು

ನಂಜನಗೂಡು, ನ.14– ನಗರದ ದೇವಿರಮ್ಮನಹಳ್ಳಿ ಬಡಾವಣೆಯ ಬಸವೇಶ್ವರ ವೃತ್ತದಲ್ಲಿ ವೈನ್ ಸ್ಟೋರ್ ತೆರೆಯುವುದನ್ನು ವಿರೋಧಿಸಿ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ರೈತ ಸಂಘಟನೆ ಮುಖಂಡರು ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ನಂಜನಗೂಡು–ಗುಂಡ್ಲುಪೇಟೆ ರಾಷ್ಟ್ರೀಯ ಹೆದ್ದಾರಿಯ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ರಸ್ತೆ ತಡೆದು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕೆಂಪಣ್ಣ ಮಾತನಾಡಿ, ಬಸವೇಶ್ವರ ವೃತ್ತದ ಸಮೀಪದ ಕಟ್ಟಡದಲ್ಲಿ ವೈನ್ ಸ್ಟೋರ್ ಆರಂಭಿಸಲು ಸಿದ್ಧತೆ ನಡೆಸಲಾಗುತ್ತಿದೆ. ಈ ಸ್ಥಳದ ಅಸುಪಾಸಿನಲ್ಲಿ ಶರಣ ಸಂಗಮ ಮಠ, ಜೆಎಸ್‌ಎಸ್ ಕಾಲೇಜು, ಗುರು ಮಲ್ಲೇಶ್ವರ ಶಾಲೆ, ಕಲ್ಯಾಣ ಮಂಟಪ, ಬಸ್ ನಿಲ್ದಾಣಗಳಿವೆ. ಬಸವೇಶ್ವರ ವೃತ್ತ ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿನಿಯರು ಬಸ್ ಹತ್ತಲು ಕಾಯುವ ಸ್ಥಳ, ಜನನಿಬಿಡ ಸ್ಥಳವಾಗಿದ್ದು, ಈ ಪ್ರದೇಶದಲ್ಲಿ ವೈನ್ ಸ್ಟೋರ್ ತೆರೆದರೆ ಸಾರ್ವಜನಿಕರಿಕೆ, ಮಹಿಳೆಯರಿಗೆ ಕುಡುಕರಿಂದ ತೊಂದರೆ ಉಂಟಾಗಲಿದೆ. ಈ ಸ್ಥಳ ಪರಿಶೀಲನೆ ನಡೆಸದೆ ಅಬಕಾರಿ ಇಲಾಖೆ ವೈನ್ ಸ್ಟೋರ್ ತೆರೆಯಲು ಪರವಾನಿಗಿ ನೀಡಿದೆ. ತಾಲೂಕು ಆಡಳಿತ ಹಾಗೂ ಸರ್ಕಾರ ವಿದ್ಯಾರ್ಥಿಗಳ ಮನವಿ ಪುರಸ್ಕರಿಸಿ ವೈನ್ ಸ್ಟೋರ್ ತೆರೆಯಲು ನೀಡಿರುವ ಪರವಾನಗಿ ರದ್ದುಪಡಿಸಬೇಕು ಎಂದರು.

ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ರಾಜೇಂದ್ರ ಕುಮಾರ್ ಮಾತನಾಡಿ, ನಮ್ಮ ಮನವಿ ಮನ್ನಿಸಿ, ವೈನ್ ಸ್ಟೋರ್ ತೆರೆಯಲು ನೀಡಿರುವ ಪರವಾನಗಿ ರದ್ದುಪಡಿಸಬೇಕು. ಇಲ್ಲದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ವಿದ್ಯಾರ್ಥಿಗಳು ಅಹೋರಾತ್ರಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ಎನ್.ಸಿ.ಬಸವಣ್ಣ, ಮಹೇಶ್, ನಾಗರಾಜು, ಯೋಗೇಶ್, ನಗರಸಭೆ ಸದಸ್ಯ ಮಹದೇವ ಪ್ರಸಾದ್, ವಿದ್ಯಾರ್ಥಿಗಳಾದ ಮನೋಜ್ ಕುಮಾರ್, ಮಹದೇವ ಕುಮಾರ್, ಶಿವಣ್ಣ, ಸಿದ್ದರಾಜು, ಮರಿಸ್ವಾಮಿ, ಚಿಕ್ಕಯ್ಯ, ಉಪಸ್ಥಿತರಿದ್ದರು.

ಚಕ್ಕೂರಲ್ಲಿ ಸಿಕಲ್ ಸೆಲ್ ತಪಾಸಣೆ ಪರಿಶೀಲನೆ



ಆರೋಗ್ಯಾಧಿಕಾರಿ ಟಿ.ರವಿಕುಮಾರ್ ಸಿಕಲ್ ಸೆಲ್ ತಪಾಸಣೆ ಪರಿಶೀಲಿಸಿದರು.

ಸರಗೂರು, ನ.14– ತಾಲೂಕಿನ ಕೆ.ಬೆಳತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಚಕ್ಕೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸಿಕಲ್ ಸೆಲ್ ಅನಿಮಿಯಾ ತಪಾಸಣೆಯನ್ನು ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ಪರಿಶೀಲಿಸಿದರು.

ಬಳಿಕ ಮನೆಗಳಿಗೆ ತೆರಳಿ ಜನರಿಗೆ ಸಿಕಲ್ ಸೆಲ್ ಅನಿಮಿಯಾ ಬಗ್ಗೆ ಅರಿವು ಮೂಡಿಸಿದರು. ಬಳಿಕ ಕೆ.ಬೆಳತ್ತೂರು ಗ್ರಾಮದಲ್ಲಿ ನಡೆಯುತ್ತಿದ್ದ ಗ್ರಾಮ ಸಭೆಗೆ ಹಾಜರಾಗಿ ಸಿಕಲ್ ಸೆಲ್ ಅನಿಮಿಯಾ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಬಗ್ಗೆ ತಿಳಿಸಿ, ಚಕ್ಕೂರು ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಿಸಲು ಜಾಗ ನೀಡುವಂತೆ ಮನವಿ ಮಾಡಿದರು. ಈ ಶಿಬಿರದಲ್ಲಿ 40 ವರ್ಷದವರೆಗೆ ತಪಾಸಣೆ ಮಾಡಲಾಗುತ್ತದೆ ಎಲ್ಲರೂ ಸಹಕರಿಸಬೇಕು ಎಂದರು. ಈ ವೇಳೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಾಜು, ಪಿಡಿಓ ಯೋಗೇಂದ್ರ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ, ಉಪಾಧ್ಯಕ್ಷೆ ಪ್ರೀತಿ, ಸದಸ್ಯರು ಸೇರಿದಂತೆ ಇನ್ನಿತರರಿದ್ದರು.

ಹೆಚ್.ಡಿ.ಕೋಟೆ ವಿವಿಧೆಡೆ ಕಾಡಾನೆಗಳ ಹಾವಳಿ

ಮನೆಯಿಂದ ಹೊರಗೆ ಬಾರದಂತೆ ಅರಣ್ಯ ಇಲಾಖೆ ಮನವಿ

ಹೆಚ್.ಡಿ.ಕೋಟೆ, ನ.14– ತಾಲೂಕಿನ ವಿವಿಧೆಡೆ ಕಾಡಾನೆಗಳು ದಾಂಧಲೆ ನಡೆಸುತ್ತಿದ್ದು, ರೈತರು ಫಸಲು ಕಳೆದುಕೊಂಡು ಕಂಗಾಲಾಗಿದ್ದು, ಮನೆಯಿಂದ ಹೊರಗೆ ಬಾರದ ಸ್ಥಿತಿಯಲ್ಲಿದ್ದಾರೆ.

ಬುಧವಾರ ತಾಲೂಕಿನ ಬೆಟ್ಟದಬೀಡು, ಗೋಪಾಲಪುರ ಮತ್ತು ಕಣಿಯನಹುಂಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಹೊಲ ಗದ್ದೆಗಳಲ್ಲಿ ದಾಳಿ ನಡೆಸಿದ ಎರಡು ಕಾಡಾನೆಗಳು ಫಸಲನ್ನು ತಿಂದು, ತುಳಿದು ನಾಶ ಮಾಡಿವೆ. ಗ್ರಾಮಸ್ಥರ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಗ್ರಾಮಸ್ಥರ ಜೊತೆಗೂಡಿ ಆನೆಗಳನ್ನು ಕಾಡಿಗೆ ಅಟ್ಟಿದರು. ಆದರೆ ಗುರುವಾರ ಮುಂಜಾನೆ ಮತ್ತೆ ಅದೇ ಕಾಡಾನೆಗಳು ಲಗ್ಗೆ ಇಟ್ಟಿವೆ.

ಆನೆಗಳು ಮತ್ತೆ ಗ್ರಾಮಕ್ಕೆ ನುಗ್ಗಿರುವ ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಧ್ವನಿವರ್ಧಕದ ಮೂಲಕ ಗ್ರಾಮಸ್ಥರು ರಾತ್ರಿ ವೇಳೆ ಮನೆಯಿಂದ ಹೊರಗೆ ಬಾರದಂತೆ ಮತ್ತು ಹೊಲ ಗದ್ದೆಗಳ ಕಡೆ ಹೋಗದಂತೆ ಮನವಿ ಮಾಡುತ್ತಿದ್ದಾರೆ ಎಂದು ಕಣೀಯನಹುಂಡಿ ಗ್ರಾಮದ ಅನುರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಇದರಿಂದ ಗ್ರಾಮಸ್ಥರು ಆತಂಕಗೊಂಡಿದ್ದು ಮನೆಯಲ್ಲೂ ಇರಲಾರದೆ ತಮ್ಮ ಜಮೀನುಗಳತ್ತ ಕೂಡ ಹೋಗಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗ್ರಾಮಗಳಿಗೆ ಆಗಾಗ ಕಾಡಾನೆಗಳು ದಾಳಿ ಮಾಡಿ ಉಪಟಳ ನೀಡುತ್ತಿದ್ದರೂ, ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕಂಡು ಹಿಡಿದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿದ್ಯುತ್ ತಂತಿ ತುಳಿದು ರೈತ, ಹಸು, ಎತ್ತು ಸಾವು

ಹೆಚ್.ಡಿ.ಕೋಟೆ, ನ.14– ಜಮೀನಿನ ಬಳಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ರೈತ, ತಲಾ ಒಂದು ಎತ್ತು ಹಾಗೂ ಹಸು ಸಾವನ್ನಪ್ಪಿರುವ ಘಟನೆ ತಾಲೂಕಿನ ಮೊತ್ತ ಗ್ರಾಮದಲ್ಲಿ ಗುರುವಾರ ಸಂಜೆ ನಡೆದಿದೆ.



ಗ್ರಾಮದ ನಿವಾಸಿ ದೊರೆ ಸೋಮಪ್ಪ ಅವರ ಪುತ್ರ ಶೇಖರ್ (45) ಸಾವನ್ನಪ್ಪಿದವರು. ಈತ ಎಂದಿನಂತೆ ಗುರುವಾರ ಬೆಳಗ್ಗೆ ತಮ್ಮ ಜಮೀನಿಗೆ ಹಸುಗಳು ಹಾಗೂ ಎತ್ತುಗಳನ್ನು ಮೇಯಿಸಲು ಕರೆದೊಯ್ದಿದ್ದರು. ಸಂಜೆ ಮನೆಗೆ ಜಾನುವಾರುಗಳನ್ನು ಕರೆದೊಯ್ಯುತ್ತಿದ್ದ ವೇಳೆ ಜಮೀನಿನ ಬಳಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಒಂದು ಎತ್ತು ಹಾಗೂ ಹಸು ದಾಟಿಕೊಂಡು ಹೋಗಿದೆ. ಆದರೆ ಹಿಂದೆ ಬರುತ್ತಿದ್ದ ಶೇಖರ್ ಹಾಗೂ ಮತ್ತೊಂದು ಹಸು, ಎತ್ತು ತುಳಿಸು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಈ ವೇಳೆ ಮನೆಗೆ ಒಂದು ಎತ್ತು, ಹಸು ಬಂದಿದ್ದನ್ನು ಗಮನಿಸಿದ ಶೇಖರ್ ಅವರ ಅಣ್ಣ ಮಹೇಶ್ ಜಮೀನಿನ ಬಳಿ ತೆರಳಿದಾದ ಪ್ರಕರಣ ಬೆಳಕಿಗೆ ಬಂದಿದೆ. ತಕ್ಷಣ ಮಹೇಶ್ ಚೆಸ್ಕಾಂ ಇಲಾಖೆಗೆ ಕರೆ ಮಾಡಿದ್ದು, ಅವರು ಸ್ಪಂದಿಸಿಲ್ಲ ಎನ್ನಲಾಗಿದೆ. ಬಳಿಕ ಅಂತರಸಂತೆ ಠಾಣೆ ಕರೆ ಮಾಡಿದ್ದು, ಸ್ಥಳಕ್ಕಾಗಮಿಸಿದ ಎಸ್‌ಐ ಚಂದ್ರಹಾಸ ಪರಿಶೀಲನೆ ನಡೆಸಿದರು.

ಗ್ರಾಮಸ್ಥರ ಆಕ್ರೋಶ: ಘಟನೆಗೆ ಚೆಸ್ಕಾಂ ಅಧಿಕಾರಗಳ ನಿರ್ಲಕ್ಷವೇ ಕಾರಣ. ವಿದ್ಯುತ್ ತಂತಿಗಳು ಹಳೆಯದಾಗಿದ್ದು, ಸಾಕಷ್ಟು ಬಾರಿ ತಂತಿಗಳನ್ನು ಬದಲಾಯಿಸಿ ಎಂದು ಚೆಸ್ಕಾಂಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಘಟನೆ ನಡೆದು ಹಲವು ಗಂಟೆಗಳು ನಡೆದರೂ ಸ್ಥಳಕ್ಕಾಗಮಿಸಿದ ಚೆಸ್ಕಾಂ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲಿಯೂರು ಗ್ರಾಪಂಗೆ ಮಮತ ನೂತನ ಅಧ್ಯಕ್ಷೆ

ತಿ.ನರಸೀಪುರ, ನ.14– ತಾಲೂಕಿನ ಮಲಿಯೂರು ಗ್ರಾಪಂ ನೂತನ ಅಧ್ಯಕ್ಷೆಯಾಗಿ ಮೇಗಳಕೊಪ್ಪಲು ಗ್ರಾಮದ ಕೆ.ಸಿ.ಮಮತ ಅವಿರೋಧವಾಗಿ ಆಯ್ಕೆಯಾದರು.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷೆ ರೇಖಾ ಅವರು ಅಧಿಕಾರವಧಿ ಪೂರ್ಣಗೊಳಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಕೆ.ಸಿ.ಮಮತ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ಕಾವೇರಿ ನೀರಾವರಿ ನಿಗಮದ ಅಧಿಕಾರಿ ಲೋಹಿತ್ ಪ್ರಕಟಿಸಿದರು. ಈ ವೇಳೆ ಗ್ರಾಪಂ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷ ಸಿದ್ದೇಗೌಡ, ನಿಕಟಪೂರ್ವ ಅಧ್ಯಕ್ಷೆ ರೇಖಾ, ಜಯರಾಮು, ಸದಸ್ಯರಾದ ಮಹದೇವಮ್ಮ, ಭಾಗ್ಯಲಕ್ಷ್ಮಿ, ಶಿಲ್ಪ, ಬಾಬು, ರಾಮಕೃಷ್ಣ, ಯಲ್ಲಪ್ಪ, ರಾಣಿ, ರತ್ನಮ್ಮ, ರಾಮೇಗೌಡ, ಡಿ.ರಾಮಲಿಂಗ, ಕೆ.ಬಿ.ಜಯಮ್ಮ, ಶಿವಮ್ಮ, ಶಾಂತಮ್ಮ ಹಾಜರಿದ್ದರೇ, ಸದಸ್ಯೆ ಮಮತಾ ಗೈರಾಗಿದ್ದರು.



ಮಲಿಯೂರು ಗ್ರಾಪಂ ನೂತನ ಅಧ್ಯಕ್ಷೆ ಕೆ.ಸಿ.ಮಮತ, ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರನ್ನು ಅಭಿನಂದಿಸಲಾಯಿತು.


ನೂತನ ಅಧ್ಯಕ್ಷೆಯನ್ನು ಅಭಿನಂದಿಸಿ ಮಾತನಾಡಿದ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು, ಗ್ರಾಪಂನಲ್ಲಿ ಅವಿರೋಧ ಆಯ್ಕೆ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸಲಾಗಿದೆ. ನೂತನ ಅಧ್ಯಕ್ಷರಿಗೆ ಎಲ್ಲಾ ಸದಸ್ಯರು ಸಹಕಾರ ನೀಡುವ ಮೂಲಕ ಉತ್ತಮ ಆಡಳಿತ ನಡೆಸಲು ಅವಕಾಶ ಮಾಡಿಕೊಡಬೇಕಿದೆ. ಅಲ್ಲದೇ ಗ್ರಾಪಂ ಸಮಗ್ರ ಅಭಿವೃದ್ಧಿ ಹಿತದೃಷ್ಟಿಯಿಂದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರೊಂದಿಗೆ ಸಂಪರ್ಕ ಸಾಧಿಸಿ ಹೆಚ್ಚಿನ ಅನುದಾನ ತಂದು ಗ್ರಾಪಂ ಅನ್ನು ತಾಲೂಕಿನಲ್ಲಿಯೇ ಮಾದರಿ ಮಾಡುವ ನಿಟ್ಟಿನಲ್ಲಿ ಅಧ್ಯಕ್ಷ–ಉಪಾಧ್ಯಕ್ಷರು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷೆ ಕೆ.ಸಿ.ಮಮತ ಮಾತನಾಡಿ, ಗ್ರಾಪಂಗೆ ಸರ್ಕಾರದಿಂದ ಬರಬಹುದಾದ ಅನುದಾನಗಳನ್ನು ತಂದು ಪಂಚಾಯ್ತಿ ವ್ಯಾಪ್ತಿ ಗ್ರಾಮಗಳ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಈ ವೇಳೆ ನೀರು ಬಳಕೆದಾರರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಹನುಮನಾಳು ಮರೀಗೌಡ, ಟಿ.ಎಸ್.ಲೋಕೇಶ್, ಗುತ್ತಿಗೆದಾರ ಸಿದ್ದೇಗೌಡ, ಮೇಗಳಕೊಪ್ಪಲು ಮರೀಗೌಡ, ಭಾಸ್ಕರ, ಶಂಕರೇಗೌಡ, ಎಂ.ಆರ್.ರಂಗಸ್ವಾಮಿ, ಎಂ.ಎಸ್.ನಾಗರಾಜು, ಡಿ.ರಂಗಸ್ವಾಮಿ, ಮಾದೇವ, ಎಂ.ವಿ.ರಂಗಸ್ವಾಮಿ, ಸಿದ್ದೇಗೌಡ, ಹರ್ಷ, ಬಸವಣ್ಣ, ಆರ್.ಸಂಪತ್ ಕುಮಾರ್, ಆನಂದ್ ಕುಮಾರ್, ಲಕ್ಷ್ಮಿಕಾಂತ್, ಪಿಡಿಓ ಪುಟ್ಟಸ್ವಾಮಿ ಇತರರಿದ್ದರು.

ತುಂಬಸೋಗೆ ಕಾಲೇಜಲ್ಲಿ ಕನ್ನಡ ರಾಜ್ಯೋತ್ಸವ

ಹೆಚ್.ಡಿ.ಕೋಟೆ, ನ.14– ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಒಂದುಗೂಡಿಸಿ ಮೈಸೂರು ರಾಜ್ಯವನ್ನಾಗಿ ಮಾಡಲು ಹಲವು ಮಂದಿ ಹೋರಾಟ ಮಾಡಿದರು ಎಂದು ಮೈಸೂರಿನ ವಿದ್ಯಾವರ್ಧಕ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎಂ.ವೈ.ಪುಟ್ಟೇಗೌಡ ತಿಳಿಸಿದರು.



ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ತಾಲೂಕಿನ ತುಂಬಸೋಗೆ ಗ್ರಾಮದ ಎಂ.ಎಂ.ಕೆ. ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ನಡೆದ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯಕ್ಕೆ ಈ ಹಿಂದೆ ಮೈಸೂರು ರಾಜ್ಯ ಎಂದು ನಾಮಕರಣವಾದ ಕಾರಣ ಕೆಲವು ಪ್ರಾಂತ್ಯಗಳಲ್ಲಿ ಅಪಸ್ವರ ಎದ್ದ ಕಾರಣ ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಕರ್ನಾಟಕ ಎಂದು ಮರು ನಾಮಕರಣ ಮಾಡಿದರು ಎಂದರು.

ಗೋಕಾಕ್ ಹಾಗೂ ಮಹಾಜನ್ ವರದಿಗಳು ಬೆಳಗಾವಿ ಕರ್ನಾಟಕ್ಕೆ ಸೇರಬೇಕು ಎಂದು ತಿಳಿಸಿದ್ದರೂ, ಬೆಳಗಾವಿಯಲ್ಲಿ ಅಲ್ಲಲ್ಲಿ ಗಲಭೆಗಳು ನಡೆಯುತ್ತಿರುವುದು ನೋವಿನ ಸಂಗತಿ ಎಂದರು.

ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು ಎಂದು ಅಲ್ಲಿನ ಹಲವು ಕವಿಗಳು, ಕನ್ನಡಪರ ಹೋರಾಟಗಾರರು ಹೋರಾಟ ಮಾಡಿದರು. ಆದರೂ ಸಹ ಇನ್ನೂ ಕಾಸರಗೋಡು ನಮಗೆ ಕೈಗೆಟಕದ ಕುಸುಮವಾಗಿಯೇ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಭಾಷೆಯನ್ನು ಸಾಗರದಾಚೆ ಕೊಂಡೊಯ್ದು, ಅಮೆರಿಕಾದಲ್ಲಿ ಅಕ್ಕ ಸಮ್ಮೇಳನ ಮಾಡುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಅಲ್ಲದೇ ಅನೇಕ ದೇಶಗಳಲ್ಲಿಯೂ ಸಹ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತಿದೆ ಎಂದರು.

ಇಂದಿನ ಮಕ್ಕಳು ಮೊಬೈಲ್‌ಗೆ ಅಂಟಿಕೊಂಡಿರುವುದರಿಂದ ಮೊಬೈಲ್ ಅನ್ನೇ ಗುರುವನ್ನಾಗಿ ಸ್ವೀಕರಿಸಿದ್ದಾರೆ ಇದು ಬೇಸರ ತಂದಿದೆ ಎಂದರು. ಶಾಲೆ ವಿದ್ಯಾರ್ಥಿ ಹರಿ ಗಣೇಶ್ ಮಾತನಾಡಿ, ಕನ್ನಡ ರಾಜ್ಯೋತ್ಸವ ಎಂದಾಕ್ಷಣ ಎಲ್ಲೆಲ್ಲೂ ಕನ್ನಡದ ಬಾವುಟ, ಎಲ್ಲೆಲ್ಲೂ ಕನ್ನಡಮಯವಾಗಿರುತ್ತದೆ. ಅದು ಆಯಾ ದಿನಕ್ಕಷ್ಟೇ ಸೀಮಿತವಾಗದೇ ಎಲ್ಲಾ ದಿನಗಳಲ್ಲೂ ಬಳಸಿ ಬೆಳೆಸಬೇಕು ಎಂದು ತಿಳಿಸಿದರು.

ಕಸಾಪ ತಾಲೂಕು ಅಧ್ಯಕ್ಷ ಪ್ರಮೋದ್ ಮಾತನಾಡಿ, 20 ಸಾವಿರಕ್ಕೂ ಹೆಚ್ಚಿನ ವಚನಗಳು ಕನ್ನಡದಲ್ಲಿದ್ದು, ಜಗತ್ತಿನ ಬೇರೆ ಯಾವ ಭಾಷೆಯಲ್ಲೂ ಈ ರೀತಿಯ ಪ್ರಯೋಗಗಳು ನಡೆದಿಲ್ಲ. ಇದೇ ರೀತಿ ದಾಸರು ಸಹ ತಮ್ಮ ಕೀರ್ತನೆಗಳ ಬಗ್ಗೆ ಮಾಡಿದ ಪ್ರಯೋಗಗಳು ಸಹ ಬೇರೆ ಭಾಷೆಯಲ್ಲಿ ನಡೆದಿಲ್ಲ ಎಂದರು.

ಈ ವೇಳೆ ಎಂ.ಎಂ.ಕೆ ಪಬ್ಲಿಕ್ ಸ್ಕೂಲ್ ಎಲ್‌ಕೆಜಿ ವಿದ್ಯಾರ್ಥಿಗಳು ಬಸವಣ್ಣ, ಅಕ್ಕಮಹಾದೇವಿ, ಸರ್ವಜ್ಞ, ಕನ್ನಡಾಂಬೆ, ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ, ಓನಕೆ ಓಬವ್ವ, ರಾಣಿ ಅಬ್ಬಕ್ಕನ ವೇಷ ತೊಟ್ಟು ಗಮನ ಸೆಳೆದರು. ನಂತರ ವಾಲಿಬಾಲ್‌ನಲ್ಲಿ ಹೆಣ್ಣುಮಕ್ಕಳ ವಿಭಾಗದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆ ವೈದ್ಯ ಸೋಮಣ್ಣ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಮೋಹನ್, ಕಾಲೇಜಿನ ಪ್ರಾಂಶುಪಾಲ ಎಸ್.ಪಿ. ಪ್ರಕಾಶ್, ಡ್ರಾಮ ಜೂನಿಯರ್‌ನ ವೈಶಾಖ, ಕಾರ್ಯದರ್ಶಿ ಅಶೋಕ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಹೇಮಂತ್ ಕುಮಾರ್, ವಿನಯ್, ಸಕಲೇಶ್, ಎಂ.ಎಲ್.ರವಿಕುಮಾರ್, ವೈದ್ಯನಾಥ್, ಕೃಷ್ಣೇಗೌಡ ಇದ್ದರು.

ಮೈಸೂರು ಮಿತ್ರ

ಅಧಿಕಾರ ವಿಕೇಂದ್ರೀಕರಣದಿಂದ ಮಾತ್ರ ಅಭಿವೃದ್ಧಿ, ಆಡಳಿತ ಸುಧಾರಣೆ ಸಾಧ್ಯ

ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ವಿಶ್ರಾಂತ ಅಧ್ಯಕ್ಷರೂ ಆದ ನಿವೃತ್ತ ಮುಖ್ಯ ಕಾರ್ಯದರ್ಶಿ ತ.ಮ.ವಿಜಯಭಾಸ್ಕರ್ ಅಭಿಮತ

ಮೈಸೂರು, ನ.14 (ಆರ್‌ಕೆ)– ಅಧಿಕಾರ ವಿಕೇಂದ್ರೀಕರಣ ಮಾಡಿ ಜವಾಬ್ದಾರಿಯನ್ನು ಹಂಚಿದಾಗ ಮಾತ್ರ ರಾಜ್ಯದ ಅಭಿವೃದ್ಧಿ ಹಾಗೂ ಆಡಳಿತ ಸುಧಾರಣೆ ಸಾಧ್ಯ ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ವಿಶ್ರಾಂತ ಅಧ್ಯಕ್ಷ, ನಿವೃತ್ತ ಮುಖ್ಯ ಕಾರ್ಯದರ್ಶಿ ಹಾಗೂ ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ ಕರ್ನಾಟಕ ಪ್ರಾದೇಶಿಕ ಸಂಸ್ಥೆ ಅಧ್ಯಕ್ಷರಾದ ತ.ಮ.ವಿಜಯ ಭಾಸ್ಕರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಮತ್ತು ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ, ಮೈಸೂರು ಸ್ಥಳೀಯ ಶಾಖೆ ಸಂಯುಕ್ತಾಶ್ರಯದಲ್ಲಿ 'ಕರ್ನಾಟಕದ ಎರಡನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು' ವಿಷಯ ಕುರಿತಂತೆ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ವಿಶೇಷ ಉಪನ್ಯಾಸ ನೀಡಿದ ವಿಜಯಭಾಸ್ಕರ್, ಆಡಳಿತದಲ್ಲಿ ಅಧಿಕಾರ ವಿಕೇಂದ್ರೀಕರಣವಾಗದೆ ರಾಜ್ಯದ ಅಭಿವೃದ್ಧಿ ಆಗುವುದಿಲ್ಲ ಎಂಬ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಆಯೋಗದ ಅಧ್ಯಕ್ಷನಾಗಿದ್ದಾಗ ತಾವು ವರದಿ ನೀಡಿರುವುದಾಗಿ ತಿಳಿಸಿದರು.

ರಾಜ್ಯದ ಆಡಳಿತ ಸುಧಾರಣೆ ಸಂಬಂಧ ದೂರವಾಣಿ ಮೂಲಕ ಸಂಪರ್ಕಿಸಿ ಸುಮಾರು 25,522 ಸಾರ್ವಜನಿಕರಿಂದ ಅಭಿಪ್ರಾಯ ಪಡೆದು ಸಮೀಕ್ಷೆ ಮಾಡಲಾಗಿತ್ತು. 2021ರ ಜುಲೈ ತಿಂಗಳಿಂದ 2024ರ ಫೆಬ್ರವರಿ ಮಾಹೆವರೆಗೆ ಒಟ್ಟು 7 ವರದಿಗಳನ್ನು ಶಿಫಾರಸುಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅವುಗಳನ್ನು ಪರಿಶೀಲಿಸಿರುವ ಸರ್ಕಾರ ಅತೀ ಸುಲಭವಾದ ಅಂಶಗಳನ್ನು ಪರಿಗಣಿಸಿ, ಬಹುತೇಕ ಶಿಫಾರಸುಗಳನ್ನು ಅನುಷ್ಠಾನಗೊಳಿಸಿದೆ. ಪ್ರಸ್ತುತ ಪ್ರವಾಸೋದ್ಯಮ ಸಚಿವ ಆರ್.ವಿ. ದೇಶಪಾಂಡೆ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿದ್ದು, ಅವರೂ ಪ್ರತೀ ತಿಂಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಆಯೋಗದ ವರದಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ನುಡಿದರು.

ವಿವಾಹ ನೋಂದಣಿ ಕುರಿತು: ಗ್ರಾಮದಿಂದ ಸಣ್ಣ ಕೆಲಸಕ್ಕಾಗಿ ಜಿಲ್ಲಾ ಕೇಂದ್ರಕ್ಕೆ ಬರುವುದನ್ನು ತಪ್ಪಿಸಲು ಸ್ಥಳೀಯ ತಾಲೂಕು ಮತ್ತು ಹೋಬಳಿ ಮಟ್ಟದ ಇಲಾಖಾ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೇವೆಗಳನ್ನು ಒದಗಿಸುವುದು, ಕೇವಲ ವಿವಾಹ ನೋಂದಣಿ ಮಾಡಿಸಲು ತಾಲೂಕು ಕೇಂದ್ರದ ಉಪನೋಂದಣಾಧಿಕಾರಿ ಕಚೇರಿ ಬಳಿ ನವ ದಂಪತಿ ಕಾಯುವುದನ್ನು ತಪ್ಪಿಸಲು, ಸ್ಥಳೀಯ ಮಟ್ಟದಲ್ಲಿ ನೋಂದಣಿ ಸೌಲಭ್ಯ ಒದಗಿಸಬೇಕು. ಈ ಪ್ರಕ್ರಿಯೆ ಕಷ್ಟಸಾಧ್ಯವಾಗಿರುವ ಕಾರಣ ಕೇವಲ ಶೇ. 30ರಷ್ಟು ಮಾತ್ರ ನವದಂಪತಿ ಹಿಂದೂ ವಿವಾಹ ಕಾಯ್ದೆ ಪ್ರಕಾರ ನೋಂದಣಿ ಮಾಡಿಸುತ್ತಿದ್ದಾರೆ. ಈ ಪ್ರಕ್ರಿಯೆಯನ್ನು ಸುಲಭ ಮಾಡಿದ್ದಲ್ಲಿ ಪೂರ್ಣ ಪ್ರಮಾಣದ ನೋಂದಣಿ ಆಗುತ್ತದೆ ಎಂಬ ಅಭಿಪ್ರಾಯವನ್ನು ಸಲ್ಲಿಸಿದ್ದೆವು ಎಂದೂ ತ.ಮ.ವಿಜಯಭಾಸ್ಕರ್ ತಿಳಿಸಿದರು.

ಗ್ರಾಮ ಪಂಚಾಯತಿ ಹಾಗೂ ಸ್ಥಳೀಯ ಸಂಸ್ಥೆಗಳಲ್ಲೇ ಬಹುತೇಕ ಇಲಾಖೆಗಳ ಸೇವಾ ಸೌಲಭ್ಯ ಸಾರ್ವಜನಿಕರಿಗೆ ಲಭ್ಯವಾಗುವಂತಾಗಬೇಕು. ಪಾರದರ್ಶಕತೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಗೂ ನಗದುರಹಿತ, ಸಂಪರ್ಕರಹಿತ ಮತ್ತು ಕಾಗದ ರಹಿತ, ಆನ್‌ಲೈನ್ ಆಡಳಿತ ವ್ಯವಸ್ಥೆ ಮಾಡುವಂತೆಯೂ ಶಿಫಾರಸು ಮಾಡಲಾಗಿತ್ತಲ್ಲದೆ ಅಭಿವೃದ್ಧಿಗೊಂಡಿರುವ ತಂತ್ರಜ್ಞಾನ ಬಳಸಿ ರೈತರಿಗೆ ಸಿಗಬಹುದಾದ ಸರ್ಕಾರದ ಸೌಲಭ್ಯಗಳನ್ನು ಸುಲಭವಾಗಿ ತಲುಪಿಸುವ ವ್ಯವಸ್ಥೆಗೂ ಶಿಫಾರಸು ಮಾಡಲಾಗಿತ್ತು. ಕೇವಲ 19 ಸಾವಿರ ರೂ. ಮೌಲ್ಯದ ಕೃಷಿ ಸಲಕರಣೆ ಸೌಲಭ್ಯ ಪಡೆಯಲು ಒಬ್ಬ ರೈತ 31 ಬಗೆಯ ದಾಖಲಾತಿಗಳನ್ನು ಕೊಡುವ ವ್ಯವಸ್ಥೆ ಇತ್ತು. ಒಮ್ಮೆ ಯಾವುದಾದರೊಂದು ಸೇವೆಗೆ ಸಾರ್ವಜನಿಕರು ದಾಖಲಾತಿಗಳನ್ನು ಸಲ್ಲಿಸಿದರೆ ಅವುಗಳನ್ನು ಆನ್‌ಲೈನ್‌ನಲ್ಲಿ ಶೇಖರಿಸಿಟ್ಟುಕೊಂಡು ಮತ್ತೆ ಮತ್ತೆ ಅವರಿಂದ ದಾಖಲೆಗಳನ್ನು ಕೇಳಬಾರದೆಂದೂ ಸಲಹೆ ನೀಡಲಾಗಿತ್ತು ಎಂದು ಅವರು ಇದೇ ಸಂದರ್ಭ ನುಡಿದರು.

ದೇಶದ ನಿರುದ್ಯೋಗ ಸಮಸ್ಯೆ ನೀಗಿಸಲು ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸಬೇಕಾಗಿದ್ದು, ಯುವ ಕೈಗಾರಿಕೋದ್ಯಮಿಗಳಿಗೆ ಲೈಸನ್ಸ್, ವಗೈರೆ ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸಬೇಕು. ಜಿಲ್ಲಾ ಮಟ್ಟದಲ್ಲಿ ಕ್ರೀಡಾ ಪ್ರಾಧಿಕಾರ ರಚನೆ, ಸಕಾಲ ಯೋಜನೆ, ಬಹಳ ವರ್ಷಗಳಿಂದ ಖಾಲಿ ಉಳಿಸಿಕೊಂಡಿರುವ ನಿವೇಶನಗಳಿಗೆ ಅತಿ ಹೆಚ್ಚು ಆಸ್ತಿ ತೆರಿಗೆ ವಿಧಿಸಬೇಕು ಎಂದ ವಿಜಯ ಭಾಸ್ಕರ್ ಅವರು, ಏಕೆಂದರೆ ಕೇವಲ ಹೂಡಿಕೆಗಾಗಿ ಕೆಲವೇ ಸ್ಥಿತಿವಂತರು ಮಾತ್ರ ನಿವೇಶನಗಳನ್ನು ಖರೀದಿಸಿ ಲಾಭ ಪಡೆಯಲು ಹತ್ತಾರು ವರ್ಷಗಳ ಕಾಲ ಬಿಟ್ಟಿರುತ್ತಾರೆ. ಇದರಿಂದ ರಾಜ್ಯಕ್ಕೆ ನಷ್ಟವುಂಟಾಗುತ್ತದೆ ಎಂಬುದು ನಮ್ಮ ಉದ್ದೇಶ ಆಗಿತ್ತು ಎಂದರು.

ಆಯೋಗ ಕೊಟ್ಟ ವರದಿಗಳ ಶಿಫಾರಸುಗಳ ಪೈಕಿ ಬಹುತೇಕ ಅಂಶಗಳನ್ನು ಪರಿಗಣಿಸಿ ಸರ್ಕಾರ ಅನುಷ್ಠಾನಗೊಳಿಸಿರುವುದರಿಂದ ಇಂದು ಆಡಳಿತದಲ್ಲಿ ಬಹಳಷ್ಟು ಸುಧಾರಣೆಯಾಗಿದೆ. ಆದರೆ ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯವಿದೆ ಈ ನಿಟ್ಟಿನಲ್ಲಿ ಪ್ರಸ್ತುತ ಆಯೋಗದ ಅಧ್ಯಕ್ಷರಾಗಿರುವ ಸಚಿವ ಆರ್.ವಿ.ದೇಶಪಾಂಡೆ ಅವರು ಪ್ರಯತ್ನಪಡುತ್ತಿದ್ದಾರೆ. ಮುಂದೆ ಆಡಳಿತದಲ್ಲಿ ಮತ್ತಷ್ಟು ಸುಧಾರಣೆ ನಿರೀಕ್ಷಿಸಬಹುದಾಗಿದೆ ಎಂದು ವಿಜಯಭಾಸ್ಕರ್ ಇದೇ ವೇಳೆ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಾರ್ವಜನಿಕರ ಆಡಳಿತ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಕೃಷ್ಣ ಹೊಂಬಳ ಅಧ್ಯಕ್ಷತೆಯಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾರತೀಯ ಆಡಳಿತ ಸಂಸ್ಥೆ ಮೈಸೂರು ಸ್ಥಳೀಯ ಶಾಖೆ ಅಧ್ಯಕ್ಷ ಬಿ.ಎಸ್.ರವಿಕುಮಾರ್ ಹಾಗೂ ಕಾರ್ಯದರ್ಶಿ ಡಾ.ಜೆ.ಸೋಮಶೇಖರ್ ಪಾಲ್ಗೊಂಡಿದ್ದರು. ನಂತರ ವಿದ್ಯಾರ್ಥಿಗಳೊಂದಿಗೆ ತ.ಮ.ವಿಜಯ ಭಾಸ್ಕರ್ ಸಂವಾದ ನಡೆಸಿದರು.



ಸುಧಾರಣೆ ಫಲಶೃತಿ ಇ-ಸ್ವತ್ತು

ಆಯೋಗ ನೀಡಿದ ಸಲಹೆಯಂತೆ ಯಾವುದೇ ಸ್ವತ್ತಿನ ನೋಂದಣಿ ಆಗಬೇಕಾದರೆ ಅದಕ್ಕೆ ಇ-ಸ್ವತ್ತು ಇರಬೇಕೆಂದು ಈಗ ಸರ್ಕಾರ ಈ ನಿಯಮವನ್ನು ಜಾರಿಗೆ ತಂದಿದೆ. ಏಕೆಂದರೆ ಒಂದೇ ಭೂಮಿಗೆ ಒಂದು ಕಡೆ ಆರ್‌ಟಿಸಿಯಲ್ಲಿ 'ಕೃಷಿ' ಎಂದಿರುತ್ತದೆ. ಅದನ್ನೇ ನಿವೇಶನವಾಗಿ ಮಾಡಿ ಹಂಚಿದರೆ ಅದು 'ನಿವೇಶನ' ಎಂದೇ ನಮೂದಾಗುತ್ತದೆ. ಇದರಿಂದ ಒಂದೇ ಆಸ್ತಿಯನ್ನು ಬೇರೆ ಬೇರೆಯವರಿಗೆ ಮೋಸ ಮಾಡುವ ಅವಕಾಶವಿತ್ತು. ಎಷ್ಟೋ ವರ್ಷಗಳ ನಂತರ ಇ-ಸ್ವತ್ತು ಜಾರಿಗೆ ಬಂದಂತಾಗಿದೆ. ಇವೆಲ್ಲ ಆಯೋಗ ನೀಡಿದ ವರದಿಯ ಫಲಶೃತಿಗಳು ಎಂದ ಅವರು, ಕಾಮಗಾರಿ ಗುತ್ತಿಗೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್, ಎಲೆಕ್ಟ್ರಾನಿಕ್ ಬಿಲ್ ಪೇಮೆಂಟ್ ವ್ಯವಸ್ಥೆ ಸಚಿವಾಲಯದಲ್ಲಿ ಒಂದು ಕಡತ 7 ಹಂತ ದಾಟಿ ಮತ್ತೆ ವಾಪಸ್ ಬರುತ್ತಿದ್ದುದನ್ನು ಕೇವಲ 4 ಹಂತಕ್ಕೆ ಇಳಿಸಿದ್ದು, ಯಾವುದೇ ಟ್ರೇಡ್ ಲೈಸನ್ಸ್ ನೀಡುವಾಗ ಪಡೆದಿದ್ದ ದಾಖಲಾತಿಗಳನ್ನೇ ಆಧಾರವಾಗಿಟ್ಟುಕೊಂಡು ಪ್ರತಿ ವರ್ಷ ಸ್ವಯಂಚಾಲಿತ ಪರವಾನಗಿ ನವೀಕರಣವಾಗಬೇಕು ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಂಗುವಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಂಗುವಾ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಮರನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ತಾರಕೇಶ್ವರ(ಕ)+ ಯಲಾಕುನ್ನಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೂರು ತಿಂಗಳಿಂದ ಸಂಬಳ ಇಲ್ಲ: ಹೋರಾಟಕ್ಕೆ ಮುಂದಾದ 108 ಅಂಬುಲೆನ್ಸ್ ಸಿಬ್ಬಂದಿ

ನಾಳೆ ರಾತ್ರಿ 8 ರೊಳಗೆ ಸಂಬಳ ಪಾವತಿಯಾಗದಿದ್ದರೆ ಕೆಲಸ ಸ್ಥಗಿತ



ಬೆಂಗಳೂರು, ನ.14– ಕರ್ನಾಟಕ ಸರ್ಕಾರದ ವಿರುದ್ಧ ಹೋರಾಟ ನಡೆಸಲು 108 ಅಂಬುಲೆನ್ಸ್ ಸಿಬ್ಬಂದಿ ಮುಂದಾಗಿದ್ದಾರೆ. 3 ತಿಂಗಳಿಂದ ನಮಗೆ ಸಂಬಳ ಸಿಕ್ಕಿಲ್ಲ. ಹೀಗಾಗಿ ನ.16ರ ರಾತ್ರಿ 8 ಗಂಟೆಯ ಒಳಗಡೆ ಸಂಬಳವನ್ನು ಬಿಡುಗಡೆ ಮಾಡಬೇಕು. ಅಂದು ಸಂಬಳ ಪಾವತಿಯಾಗದೇ ಇದ್ದರೆ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಸುವರ್ಣ ಕರ್ನಾಟಕ ಆರೋಗ್ಯ ಕವಚ(108) ನೌಕರರ ಸಂಘ, ಅಖಿಲ ಕರ್ನಾಟಕ 108 ಅಂಬುಲೆನ್ಸ್ ನೌಕರರ ಹಿತರಕ್ಷಣಾ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಕವಚ(108) ಅಂಬುಲೆನ್ಸ್ ನೌಕರರ ಸಂಘ ಎಚ್ಚರಿಕೆ ನೀಡಿದೆ.

ಆರೋಗ್ಯ ಕವಚ ಯೋಜನೆಯಲ್ಲಿ 2 ವರ್ಷಗಳಿಂದ ವೇತನದಲ್ಲಿ ಅನೇಕ ಸಮಸ್ಯೆಗಳಿವೆ. ಸರ್ಕಾರ, ಸಂಸ್ಥೆ ಮತ್ತು ಸಂಘಟನೆಗಳು ಸಭೆ ನಡೆಸಿದರೂ ವೇತನ ಸಮಸ್ಯೆ ಬಗೆಹರಿದಿಲ್ಲ. ಸಂಘಟನೆಯ ವತಿಯಿಂದ ನ್ಯಾಯಾಲಯದ ಮೊರೆ ಹೋಗಲಾಗಿತ್ತು. ನ್ಯಾಯಾಲಯವು ಸೆ.12ರಂದು ಮಧ್ಯಂತರ ಆದೇಶ ನೀಡಿತ್ತು. ನ್ಯಾಯಾಲಯ ಆದೇಶ ನೀಡಿದರೂ ಆರೋಗ್ಯ ಇಲಾಖೆ ಅಂಬುಲೆನ್ಸ್ ಸಿಬ್ಬಂದಿಯ ಸಂಬಳದ ಬಗ್ಗೆ ನಿರ್ಲಕ್ಷ್ಯ ತೋರಿದೆ ಈ ಕಾರಣಕ್ಕೆ ಅನಿವಾರ್ಯವಾಗಿ ನಾವು ಹೋರಾಟ ಮಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂದು ಸಂಘಗಳು ತಮ್ಮ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿವೆ.

ನ.16 ಸಂಬಳವಾಗದೇ ಇದ್ದರೆ ರಾತ್ರಿಯಿಂದಲೇ ಕೆಲಸ ಸ್ಥಗಿತಗೊಳಿಸಲಾಗುವುದು ಎಂದು ಸಂಘ ಹೇಳಿದೆ. ಅಷ್ಟೇ ಅಲ್ಲದೇ ಕೋರ್ಟ್ ಆದೇಶದ ಅನ್ವಯ ಪ್ರತಿ ತಿಂಗಳ 7 ರಂದು ವೇತನ ಪಾವತಿಯಾಗಬೇಕು. ಮುಂದೆ ವೇತನ ವಿಳಂಬವಾದರೆ 7ರ ರಾತ್ರಿಯಿಂದಲೇ ಅಂಬುಲೆನ್ಸ್ ಸೇವೆಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಚನ್ನಪಟ್ಟಣ ಉಪ ಚುನಾವಣೆ ಕರ್ತವ್ಯಕ್ಕೆ ತೆರಳಿದ್ದ ಪೊಲೀಸ್ ಪೇದೆ ಹೃದಯಾಘಾತದಿಂದ ಸಾವು

ರಾಮನಗರ, ನ.14– ಕರ್ನಾಟಕದಲ್ಲಿ ತೀವ್ರ ರಾಜಕೀಯ ಪೈಪೋಟಿ ಹಾಗೂ ಕುತೂಹಲಕ್ಕೆ ಕಾರಣವಾಗಿದ್ದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಕರ್ತವ್ಯಕ್ಕೆ ತೆರಳಿ ಮನೆಗೆ ವಾಪಸ್ ಬಂದಿದ್ದ ಪೊಲೀಸ್ ಪೇದೆ ಬುಧವಾರ ಹೃದಯಾಘಾತದಿಂದ ಸಾವಿಗೀಡಾಗಿದ್ದಾರೆ.

ರಾಮನಗರ ಸಿಟಿಯ ಮಹಿಳಾ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಗುರುಲಿಂಗಪ್ಪ ಕಳೆದ ಮೂರ್ನಾಲ್ಕು ದಿನಗಳಿಂದ ಚನ್ನಪಟ್ಟಣ ಉಪ ಚುನಾವಣೆಯ ಕರ್ತವ್ಯದಲ್ಲಿ ನಿರತರಾಗಿದ್ದರು. ನಿನ್ನೆ ಚುನಾವಣೆ ಮುಕ್ತಾಯದ ನಂತರ ಮನೆಗೆ ವಾಪಸ್ ಬಂದಿದ್ದರು. ಚುನಾವಣೆಯ ಕರ್ತವ್ಯದಲ್ಲಿ ಹೆಚ್ಚು ಆಯಾಸಗೊಂಡಿದ್ದ ಗುರುಲಿಂಗಪ್ಪ ರಾತ್ರಿ ಮನೆಯಲ್ಲಿ ಮಲಗಿದವರು ಬೆಳಗ್ಗೆ ಎದ್ದೇ ಇಲ್ಲ. ಇನ್ನು ಗಂಡ ಚುನಾವಣಾ ಕರ್ತವ್ಯಕ್ಕೆ ತೆರಳುತ್ತಿದ್ದ ಹಿನ್ನೆಲೆಯಲ್ಲಿ ಅವರ ಹೆಂಡತಿ ತವರು ಮನೆಗೆ ಹೋಗಿದ್ದರು.

ಗಂಡ ಚುನಾವಣಾ ಕರ್ತವ್ಯ ಮುಗಿಸಿ ರಾತ್ರಿ ಫೋನಿನಲ್ಲಿ ಮಾತನಾಡಿ, ಬೆಳಗ್ಗೆ ಬರುವಂತೆ ಹೇಳಿದ್ದರಿಂದ ಬೆಳಗ್ಗೆ ಹೆಂಡತಿ ಊರಿನಿಂದ ಹೊರಡುವಾಗ ಕರೆ ಮಾಡಿದ್ದಾರೆ. ಆದರೆ, ಕರೆ ಸ್ವೀಕರಿಸಿಲ್ಲ. ಡ್ಯೂಟಿ ಮಾಡಿ ಸುಸ್ತಾಗಿ ಮಲಗಿರಬಹುದು ಎಂದು ಊರಿನಿಂದ ಬಂದು ಮನೆಗೆ ಹೋಗಿ ನೋಡಿದಾಗ ಮನೆಯಲ್ಲಿ ಗಂಡ ಶವವಾಗಿ ಬಿದ್ದಿದ್ದಾರೆ. ಇದನ್ನು ನೋಡಿದ ಹೆಂಡತಿ ಜೋರಾಗಿ ಅಳುತ್ತಲೇ ನೆರಹೊರೆಯವರ ಸಹಾಯದಿಂದ ಗಂಡನನ್ನು ಆಸ್ಪತ್ರೆಗೆ ಕರೆದೊಯ್ಯಲು ಮುಂದಾಗಿದ್ದಾರೆ. ಆದರೆ, ಅದಾಗಲೇ ಅವರ ಪ್ರಾಣಪಕ್ಷಿ ಹಾರಿ ಹೋಗಿತ್ತು. ಗಂಡನ ಸಾವಿನಿಂದ ಪತ್ನಿಯ ಆಕ್ರಂದನ ಮುಗಿಲು ಮುಟ್ಟಿತ್ತು.

ಜಮೀನು ಕಳೆದುಕೊಂಡ ರೈತರಿಗೆ ತೊಂದರೆ ನೀಡಿದರೆ ತೀವ್ರ ಹೋರಾಟ

ಮುಡಾಗೆ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಕೆ



ಮೈಸೂರು, ನ.14(ಬಿಎಲ್ ಯು)– ಮುಡಾದ ಶೇಕಡ 50:50 ಅನುಪಾತದ ನಿವೇಶನ ಹಂಚಿಕೆ ಪ್ರಕರಣದಲ್ಲಿ ಜಮೀನು ಕಳೆದುಕೊಂಡ ರೈತರಿಗೆ ತೊಂದರೆ ಉಂಟು ಮಾಡಿದರೆ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಎಚ್ಚರಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ರೈತರ ಸಭೆ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ಕಡತ ಕಳ್ಳತನವಾದ ಸಂದರ್ಭದಲ್ಲಿ ನಮ್ಮ ಸಂಘಟನೆ ಪ್ರತಿಭಟನೆ ನಡೆಸಿ ಎಚ್ಚರಿಕೆ ನೀಡಿತ್ತು. ಆದರೆ ಇದನ್ನು ನಿರ್ಲಕ್ಷ್ಯ ಮಾಡಿದ ಪರಿಣಾಮ ಈಗ ಮುಡಾದಲ್ಲಿ ಹಗರಣಗಳ ಸರಮಾಲೆಯೇ ನಡೆದಿದೆ ಎಂದು ಆರೋಪಿಸಿದರು.

ಬಡಾವಣೆ ನಿರ್ಮಾಣ ಮಾಡಲು ಮುಡಾ ರೈತರ ಜಮೀನು ಪಡೆದಿದೆ. ಶೇಕಡ 50:50 ಅನುಪಾತದ ನಿವೇಶನ ಹಂಚಿಕೆ ಪ್ರಕರಣದಲ್ಲಿ ಜಮೀನು ಕಳೆದುಕೊಂಡ ರೈತರನ್ನು ಗುರಿ ಮಾಡಿದರೆ ನಾವು ಸುಮ್ಮನಿರುವುದಿಲ್ಲ ಎಂದು ಹೇಳಿದರು.

ವಿಶ್ವ ರೈತ ದಿನದ ಅಂಗವಾಗಿ ಮೈಸೂರಿನಲ್ಲಿ ರಾಷ್ಟ್ರೀಯ ರೈತ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ. ರೈತರ ಹಬ್ಬದಲ್ಲಿ ದೇಶದ ವಿವಿಧ ರಾಜ್ಯಗಳ ನೂರಾರು ರೈತ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಕಾರ್ಪೊರೇಟ್ ಕಂಪನಿಗಳು ಕೃಷಿ ಕ್ಷೇತ್ರವನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ವಾಮಮಾರ್ಗ ಅನುಸರಿಸುತ್ತಿವೆ. ಇದರಿಂದ ಕೃಷಿ ಕ್ಷೇತ್ರ ದುರ್ಬಲಗೊಳ್ಳುತ್ತಿದೆ. ಈ ಹಿನ್ನೆಲೆ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಇದರ ವಿರುದ್ಧ ಹೋರಾಟ ಮಾಡುವ ನಿಟ್ಟಿನಲ್ಲಿ ಮೈಸೂರಿನಲ್ಲಿ ನಡೆಯುವ ರಾಷ್ಟ್ರೀಯ ರೈತ ಸಮಾವೇಶದಲ್ಲಿ ಚರ್ಚಿಸಲಾಗುವುದು ಎಂದು ಹೇಳಿದರು.

ಕಳೆದ ವರ್ಷ ಒಂದು ಚೀಲ ಶುಂಠಿ ಬೆಲೆ 5 ಸಾವಿರ ಇತ್ತು, ಆದರೆ ಇಂದು 1,600 ರೂಪಾಯಿಗೆ ಇಳಿದಿದೆ. ಇಂತಹ ಸಂದರ್ಭದಲ್ಲಿ ರೈತರ ಬೆಳೆಗಳಿಗೆ ಸರ್ಕಾರ ಬೆಂಬಲ ಬೆಲೆ ಘೋಷಿಸಬೇಕು. ಈ ಹಿನ್ನೆಲೆಯಲ್ಲಿ ನವೆಂಬರ್ 25 ರಂದು ನಡೆಯುವ ಸಂಸತ್ ಅಧಿವೇಶನದ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯಲು ಸಂಯುಕ್ತ ಕಿಸಾನ್ ಮೋರ್ಚಾ ದೇಶಾದ್ಯಂತ ರೈತ ಚಳವಳಿ ನಡೆಸಲಿದೆ ಎಂದು ಎಚ್ಚರಿಸಿದರು.

ರೈತ ಪರವಾಗಿದ್ದೇವೆ ಎಂದು ರಾಜ್ಯ ಸರ್ಕಾರ ಮೊಸಳೆ ಕಣ್ಣೀರು ಸುರಿಸುತ್ತಿದೆ. ಆದರೆ ಕಳೆದ 8 ತಿಂಗಳಿಂದ ಹಾಲಿನ ಪ್ರೋತ್ಸಾಹ ಧನ ಬಿಡುಗಡೆ ಮಾಡದೆ ಹಾಲು ಉತ್ಪಾದಕರ ಬಗ್ಗೆ ಅಸಡ್ಡೆ ತೋರಿದೆ ಎಂದು ಕುರುಬೂರು ಶಾಂತಕುಮಾರ್ ಆರೋಪಿಸಿದರು.

ರೈತ ಮುಖಂಡರಾದ ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ನೀಲಕಂಠಪ್ಪ ವೆಂಕಟೇಶ್, ಸೂರಿ, ಉಮೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಿಶೇಷ ಚೇತನರ ಶಾಲೆಯಲ್ಲಿ ಮಕ್ಕಳ ದಿನಾಚರಣೆ

ಮೈಸೂರು, ನ.14(ಬಿಎಲ್‌ಯು)– ನಗರದ ಚಾಮುಂಡಿ ಪುರಂನಲ್ಲಿರುವ ಅರುಣೋದಯ ವಿಶೇಷ ಚೇತನ ಶಾಲೆಯಲ್ಲಿ ಇಂದು ಮಕ್ಕಳಿಗೆ ಸಮವಸ್ತ್ರ ಹಾಗೂ ಸಿಹಿ ತಿಂಡಿ ವಿತರಣೆ ಮಾಡುವ ಮೂಲಕ ಮಕ್ಕಳ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



ಈ ವೇಳೆ ಮಾತನಾಡಿದ ಮಾಜಿ ಕಾರ್ಪೊರೇಟರ್ ಮಾ.ವಿ. ರಾಮ್ ಪ್ರಸಾದ್, ವಿಶೇಷ ಚೇತನ ಮಕ್ಕಳಿಗೆ ಅವಶ್ಯವಿರುವುದು ಕಾಳಜಿಯೇ ಹೊರತು ಕರುಣೆಯಲ್ಲ. ಎಲ್ಲಾ ರೀತಿಯ ಪ್ರೋತ್ಸಾಹ ಹಾಗೂ ಉತ್ತೇಜನ ನೀಡಿ ವಿಶೇಷ ಚೇತನ ಮಕ್ಕಳನ್ನು ಮುಖ್ಯ ವಾಹಿನಿಗೆ ತರಬೇಕು ಎಂದು ಸಲಹೆ ನೀಡಿದರು.

ವಿಶೇಷ ಚೇತನ ಮಕ್ಕಳನ್ನು ನೋಡಿಕೊಳ್ಳುವ ತಂದೆ, ತಾಯಿ, ಶಿಕ್ಷಕರು ಹಾಗೂ ಚಿಕಿತ್ಸೆ ನೀಡುವವರಿಗೆ ತಾಳ್ಮೆಯ ಅಗತ್ಯವಿದ್ದು, ಇದನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು. ವಿಕಲಚೇತನ ಕ್ರೀಡಾಪಟು ಅಲೋಕ್ ಜೈನ್, ಶ್ರೇಯಸ್, ಶಿಕ್ಷಕರಾದ ಮಮತಾ, ನೀಲ, ಲತಾ, ಶಿವಕುಮಾರ್ ಈ ವೇಳೆ ಹಾಜರಿದ್ದರು.

ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ. ಆಮಿಷ ನಿಜ : ಡಿಕೆ ಶಿವಕುಮಾರ್

ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಸಮರ್ಥನೆ

ಬೆಂಗಳೂರು, ನ 14(ಕೆಎಂಶಿ)–ಕಾಂಗ್ರೆಸ್‌ನ 50 ಶಾಸಕರಿಗೆ ಬಿಜೆಪಿ ತಲಾ 50 ಕೋಟಿ ರೂ ಆಮಿಷ ಒಡ್ಡಿರುವುದು ನಿಜ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಕಾಂಗ್ರೆಸ್‌ನ 50 ಶಾಸಕರಿಗೆ ತಲಾ 50 ಕೋಟಿ ರೂ.ನಂತೆ ಬಿಜೆಪಿಯವರು ಆಮಿಷ ಒಡ್ಡುತ್ತಿದ್ದಾರೆ, ಆಪರೇಷನ್ ಕಮಲದ ವಿಚಾರವಾಗಿ ನಮ್ಮ ಪಕ್ಷದ ಶಾಸಕರ ಬಳಿ ಮಾತನಾಡಿದ್ದಾರೆ, ಈ ವಿಚಾರವನ್ನು ಕೆಲವು ಶಾಸಕರು ಮುಖ್ಯಮಂತ್ರಿ ಬಳಿ ತಿಳಿಸಿದ್ದಾರೆ ಎಂದರು.

ಇದನ್ನೇ ಮುಖ್ಯಮಂತ್ರಿ ಅವರು ಮಾಧ್ಯಮದ ಮುಂದೆ ಹೇಳಿದ್ದಾರೆ, ಮಿಕ್ಕ ವಿಚಾರಗಳನ್ನು ಆನಂತರ ನಿಮಗೆ ತಿಳಿಸುತ್ತೇನೆ ಎಂದರು.

ಗುರು ವೃಂದಕ್ಕೆ ಗೌರವ ಸಮರ್ಪಣಾ ಕಾರ್ಯಕ್ರಮ



ಮೈಸೂರು, ನ14(ಬಿಎಲ್‌ಯು)– ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಶಾಲೆಯ ಗುರು ವೃಂದಕ್ಕೆ ಗೌರವ ಸಮರ್ಪಣಾ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾನಿಲಯದ ವೀರನ್ ಸಿಂಗ್ ಮಾತನಾಡಿ, ಯಾವುದೇ ವ್ಯಕ್ತಿ ಶೈಕ್ಷಣಿಕವಾಗಿ ಮುಂದುವರೆಯಲು ಪ್ರಾಥಮಿಕ ಶಾಲಾ ಶಿಕ್ಷಣ ಭದ್ರ ಬುನಾದಿಯಾಗಿದ್ದು, ಇಲ್ಲಿ ಸೇವೆ ಸಲ್ಲಿಸಿರುವ ಎಲ್ಲಾ ಶಿಕ್ಷಕರು ಅಭಿನಂದನಾರ್ಹರು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ ಮಾತನಾಡಿ, ನಾವೆಲ್ಲರೂ ಸಮಾಜದಲ್ಲಿ ಸ್ಥಾನಮಾನ ಗಳಿಸಲು ಮೂಲ ಕಾರಣರೆಂದರೆ ಅದು ನಮ್ಮ ಗುರುಗಳು. ಈ ಹಿನ್ನೆಲೆ ಗುರುಗಳನ್ನು ಅಭಿನಂದಿಸಲು ಈ ಕಾರ್ಯಕ್ರಮ ಆಯೋಜಿಸಿರುವ ಕೆ.ಬಿ.ಲಿಂಗರಾಜು ಕಾರ್ಯ ಅನುಕರಣೀಯ ಎಂದು ಅಭಿಪ್ರಾಯಪಟ್ಟರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾನಿಲಯದ ರಾಮಚಂದ್ರರಾವ್, ಉತ್ತರ ವಲಯ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಅರ್ಪಣಾ, ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಕೆ.ಬಿ.ಲಿಂಗರಾಜು, ನಿವೃತ್ತ ಮುಖ್ಯ ಶಿಕ್ಷಕ ನಾಗಣ್ಣ, ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ನವೀನ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಶಾಸಕರ ಖರೀದಿ ಯತ್ನ ಆರೋಪ


ಕಾಂಗ್ರೆಸ್-ಬಿಜೆಪಿ ನಾಯಕರ ವಾಕ್ಸಮರ ; ತನಿಖೆಗೆ ವಿಜಯೇಂದ್ರ ಆಗ್ರಹ

ಬೆಂಗಳೂರು, ನ. 14(ಕೆಎಂಶಿ)– ಸರ್ಕಾರ ಉರುಳಿಸಲು ನಮ್ಮ ಶಾಸಕರನ್ನು ಎನ್‌ಡಿಎ ಖರೀದಿ ಮಾಡಲು ಯತ್ನಿಸಿತ್ತು ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ಆಡಳಿತಾರೂಢ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಮುಖ್ಯಮಂತ್ರಿ ಹೇಳಿಕೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಹಲವು ಮುಖಂಡರು ಅಲ್ಲಗಳೆದಿರುವುದಲ್ಲದೆ, ಸಿದ್ದರಾಮಯ್ಯ ಕಪೋಲಕಲ್ಪಿತ ಆರೋಪ ಮಾಡುತ್ತಿದ್ದಾರೆಂದು ಕಿಡಿ ಕಾರಿದ್ದಾರೆ.

ಶಾಸಕರ ಖರೀದಿ ವಿಚಾರವನ್ನು ಸರ್ಕಾರದ ಉನ್ನತ ಮಟ್ಟದ ಸಂಸ್ಥೆಗಳಿಂದ ತನಿಖೆ ನಡೆಸುವಂತೆ ವಿಜಯೇಂದ್ರ ಆಗ್ರಹಿಸಿದ್ದಾರೆ.

ಆದರೆ, ಮುಖ್ಯಮಂತ್ರಿ ಅವರು ತಮ್ಮ ಹೇಳಿಕೆಯನ್ನು ಇಂದೂ ಸಮರ್ಥನೆ ಮಾಡಿಕೊಂಡಿರುವುದಲ್ಲದೆ, ತಲಾ 50 ಕೋಟಿ ರೂ.ನಂತೆ ಕಾಂಗ್ರೆಸ್ ಶಾಸಕರನ್ನು ಬಿಜೆಪಿ ಖರೀದಿಸಲು ಹೊರಟಿತ್ತು.



ಹಣದ ಆಮಿಷಕ್ಕೆ ನಮ್ಮವರು ಬಲಿಯಾಗಲಿಲ್ಲ ಆದ್ದರಿಂದ ನನ್ನನ್ನು ಅಧಿಕಾರದಿಂದ ಕೆಳಗಿಸಲು ಸಿಬಿಐ ಮತ್ತು ಇ.ಡಿ. ಸಂಸ್ಥೆಗಳನ್ನು ಛೂ ಬಿಟ್ಟಿದ್ದಾರೆ ಎಂದು ಸುದ್ದಿಗಾರರ ಬಳಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿ ಟ್ವೀಟ್ ಮಾಡಿರುವ ವಿಜಯೇಂದ್ರ, ಕಾಂಗ್ರೆಸ್ ಶಾಸಕರು ಸಿದ್ದರಾಮಯ್ಯ ಅವರ ಮೇಲೆ ವಿಶ್ವಾಸ ಕಳೆದುಕೊಂಡಂತಿದೆ, ಅದಕ್ಕಾಗಿಯೇ 50 ಕೋಟಿ ರೂ.ಗೆ ಅವರು ಮಾರಾಟವಾಗುತ್ತಿದ್ದಾರೆಂದು ಹೇಳಿಕೆ ನೀಡಿದ್ದಾರೆ.

ಸಿದ್ದರಾಮಯ್ಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾಗೂ ಶಾಸಕರನ್ನು ಮಾರಾಟದ ವಸ್ತುಗಳಂತೆ ವ್ಯಾಖ್ಯಾನಿಸುವ ಮೂಲಕ ನಮ್ಮ ಜನಪ್ರತಿನಿಧಿಗಳನ್ನು ಅಪಮಾನಿಸುತ್ತಿದ್ದಾರೆ.

ಶಾಸಕರನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ಆಗುತ್ತಿಲ್ಲ ಹಾಗೂ ನಿಮ್ಮನ್ನು ಸುತ್ತುವರೆದಿರುವ ಭ್ರಷ್ಟಾಚಾರದ ಹಗರಣಗಳನ್ನು ಮುಚ್ಚಿಕೊಳ್ಳಲು ಹೆಣೆದಿರುವ ಸುಳ್ಳಿನ ಕಂತೆ ಇದು ಎಂಬುದನ್ನು ಸಾಮಾನ್ಯ ಜನರೂ ಅರ್ಥ ಮಾಡಿಕೊಳ್ಳಬಲ್ಲರು.

ಸುಳ್ಳು, ಭಂಡತನ, ಕಪೋಲಕಲ್ಪಿತ ಸುದ್ದಿಗಳನ್ನು ಹರಿಬಿಡುವುದು, ನಿಮ್ಮ ಹಾಗೂ ನಿಮ್ಮ ಪಕ್ಷದ ನಿತ್ಯ ಮಂತ್ರವಾಗಿದೆ.

ನೀವು ನಡೆಸಿರುವ ಸರಣಿ ಹಗರಣಗಳ ಉರುಳು ದಿನೇ ದಿನೆ ಬಿಗಿಯಾಗುತ್ತಿರುವಷ್ಟೂ ನಿದ್ದೆಗೆಡುತ್ತಿರುವ ನಿಮ್ಮ ಮನಸ್ಸು ಅಸ್ಥಿರಗೊಂಡು ಇಂತಹ ಹೇಳಿಕೆಗಳು ನಿಮ್ಮ ಬಾಯಲ್ಲಿ ಪುಂಖಾನುಪುಂಖವಾಗಿ ಬರುತ್ತಿವೆ.

ಮುಖ್ಯಮಂತ್ರಿಯಂತಹ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರುವ ನೀವು, ಅದರ ಘನತೆ ಕುಗ್ಗಿಸುವಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ನಿಲ್ಲಿಸಿ, ಐವತ್ತು ಕೋಟಿ ರೂ. ಆಮಿಷಕ್ಕೆ ಸಂಬಂಧಿಸಿದಂತೆ, ನಿಮ್ಮ ಅಧೀನದಲ್ಲಿ ಬರುವ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿ, ಜನರಿಗೆ ಸತ್ಯಾಸತ್ಯತೆ ತಿಳಿಯಲಿ ಎಂದು ಸವಾಲು ಹಾಕಿದ್ದಾರೆ.

ಒಂದು ಕಡೆ ನಿಮ್ಮ ಪುತ್ರ ನ್ಯಾಯಾಂಗ ವ್ಯವಸ್ಥೆಯನ್ನೇ ಅಪಮಾನಿಸುವ ಆರೋಪ ಮಾಡಿದರೆ, ಮತ್ತೊಂದೆಡೆ ನೀವು ಜನಪ್ರತಿನಿಧಿಗಳಿಗೆ ಕಪ್ಪು ಮಸಿ ಬಳಿಯುವ ಕೆಲಸ ಮಾಡುತ್ತಿದ್ದೀರಿ.

ಭ್ರಷ್ಟಾಚಾರದ ಪಿತಾಮಹ ಆಗಿರುವ ನಿಮ್ಮ ಬಗ್ಗೆ ಜನ, ಹಾದಿ-ಬೀದಿಯಲ್ಲಿ ಆಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಿಮ್ಮ ಗುಪ್ತಚರ ಇಲಾಖೆ ನಿಮಗೆ ಮಾಹಿತಿ ನೀಡಿಲ್ಲವೇ ಎಂದು ವ್ಯಂಗ್ಯವಾಡಿದ್ದಾರೆ.

ಈ ಮಧ್ಯೆ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಟ್ಟಲು ಯಾರಿಗಾದರೂ ಸಾಧ್ಯವೇ ಎಂದು ವ್ಯಂಗ್ಯವಾಡಿದ್ದಾರೆ.

ಮುಖ್ಯಮಂತ್ರಿ ಅವರನ್ನು ಮುಟ್ಟಿದರೆ, ಪೋಲಿಸರು ಒಂದರಿಂದ 10 ಮೊಕದ್ದಮೆಗಳನ್ನು ಹೂಡಿ ಒಳಗೆ ಹಾಕುತ್ತಾರೆ. ಎರಡನೇ ಬಾರಿ ರಾಜ್ಯದ ಚುಕ್ಕಾಣಿ ಹಿಡಿದಿರುವ ಅವರಿಗೆ ಇದರ ಪರಿಜ್ಞಾನ ಇಲ್ಲವೆ. ಉನ್ನತ ಸ್ಥಾನದಲ್ಲಿದ್ದು, ಜನರನ್ನು ಪ್ರಚೋದಿಸುವಂತಹ ಹೇಳಿಕೆಗಳು ನಿಮ್ಮಂತಹವರಿಗೆ ಶೋಭೆ ತರುವುದಿಲ್ಲ ಎಂದಿದ್ದಾರೆ.

10ನೇ ವರ್ಷದ ಸವಿನೆನಪು



ಬಸವರಾಜೇಗೌಡ ಎಲ್

ನಿಧನ: 15.11.2014

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಿರುವ

ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

10ನೇ ವರ್ಷದ ಪುಣ್ಯಸ್ಮರಣೆ

ನಿಧನ : 15-11-2014



ಡಾ. ಸಿ.ಜಿ. ಪುರುಷೋತ್ತಮ

ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು

ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ

–ದುಃಖತಪ್ತರು: ಕುಟುಂಬ ವರ್ಗ

PUBLIC NOTICE

Notice is hereby given to the public that my client M.N. Dharmavratha, S/o Late Buddha Das, Aged about 64 years, residing at Poorna Kuteera, # 68, 2nd main, 47th Cross, 8th Block, Jayanagar, Bangalore - 560070 has decided to purchase the below mentioned schedule properties from its present owner R. Chandrashekar, S/o S. Ramegowda, Aged 60 years, residing at # 10/1B, J.L.B. Road, Lakshmipuram, Mysore.

If any person/s have any right, title and interest by way of inheritance, mortgage, sale, lease, lean, charge, trust, maintenance, easements, transfer, licence, possession, gift, encumbrance or in whatsoever manner over the scheduled mentioned properties are hereby required to inform the same in writing with suppoting documents to the undersigned Advocate within 14 days from the date of this public notice, failing which it will be construed that there are no claims/charges over the scheduled mentioned properties and my clients will proceed to purchase the schedule properties from the aforesaid vendor.

SCHEDULE OF THE PROPERTIES

1. The converted land bearing Sy. No. 121/1 measuring 1 acre 35 guntas
2. The converted land bearing Sy. No. 122/1 measuring 2 acres.
3. Agricultural land bearing Sy. No. 122/3 measuring 1 acre.
4. Agricultural land bearing Sy. No. 129/5 measuring 14 guntas.
5. Land bearing Sy. No. 128/4 measuring 06 guntas (utilization of Road).
6. Land bearing Sy. No. 129/3 measuring 04 guntas (utilization of Road), totally measuring 5 acres 19 guntas (including property item No. 5 and 6) situated at Krishnarajapura Village, Antharasanthe Hobli, H.D. Kote Tq, Mysore District.

Sd/- B.S. Chandrashekara, Advocate
#101 & 112, Sri Sangameshwara Complex, Gurur Main Road, Basaveshwara Layout, Gurur Post, Mysuru 570 008.
Mob: 9480222660

Date: 14-11-2024



ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ

ಎನ್. ಮಾಧವರಾವ್ ವೃತ್ತ, ಮೈಸೂರು. Ph: 2520894, 4259665

ಕಂಪ್ಯೂಟರೀಕರಣದ ಬ್ಯಾಂಕ್

ಪ್ರಕಟಣೆ

1. 2023–24 ನೇ ಸಾಲಿಗೆ ಶೇ10 ರಂತೆ ಡಿವಿಡೆಂಡ್ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರುಗಳು ಪಾಸ್ ಪುಸ್ತಕ ಹಾಜರುಪಡಿಸಿ ಪಡೆಯುವುದು.
2. ಚಿನ್ನಾಭರಣಗಳ ಮೇಲೆ ಶೇ 9.5 ರಂತೆ ಗ್ರಾಂಗೆ ರೂ. 5500/– ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.
3. ಮನೆ ಹಾಗೂ ನಿವೇಶನಗಳ ಮೇಲೆ, ಮನೆ/ನಿವೇಶನ ಕೊಳ್ಳುವ ಉದ್ದೇಶಕ್ಕೆ ಶೇ 12.5 ರಂತೆ ಗರಿಷ್ಠ 20 ಲಕ್ಷ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ. (ಸುಸ್ತಿ ಬಡ್ಡಿ ಪಾವತಿಸದೇ ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು.)
4. ಠೇವಣಿಗಳ ಮೇಲೆ ಗರಿಷ್ಠ ಶೇ 7.0 ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 7.5 ರಂತೆ ಬಡ್ಡಿ ನೀಡಲಾಗುತ್ತಿದೆ.

ಡಿ.ಬಸವರಾಜು (ಬಸಪ್ಪ) ಅಧ್ಯಕ್ಷರು — ಶ್ರೀಮತಿ ಹೆಚ್.ಎನ್. ಸರ್ವಮಂಗಳ ಉಪಾಧ್ಯಕ್ಷರು — ಡಿ. ಅನಂತವೀರಪ್ಪ ಪ್ರ.ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಜುಂಡಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ (ಪಾಚಿ), ಪ್ರತಿಧ್ವನಿಪ್ರಸಾದ್ ಬಿ.ವಿ. ಗಣೇಶ್ ಮೂರ್ತಿ, ಶ್ರೀಮತಿ ನಾಗಜ್ಯೋತಿ ಬಿ., ನವೀನ್ ಕುಮಾರ್ ಎಂ.ಎನ್., ಎಂ.ಎಸ್.ಅರುಣ್ (ಅರುಣ್ ಸಿದ್ದಪ್ಪ), ಹೆಚ್.ವಾಸು, ಶಿವಪ್ರಕಾಶ್ ಎಂ.

ಸಹಿ/– ವ್ಯವಸ್ಥಾಪಕರು



ಸುಮಿತ್ರ ಸ್ಟೀಲ್ ಮಾಲೀಕರಾದ

ಶ್ರೀ ಹೆಚ್.ಸಿ. ಕೃಷ್ಣಕುಮಾರ್ ಸಾಗರ್

ಮತ್ತು

ಶ್ರೀಮತಿ ಪದ್ಮಶ್ರೀ ಆರ್.

ದಂಪತಿಗಳಿಗೆ

20th ANNIVERSARY ನೇ ವರ್ಷದ

ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಶುಭಕೋರುವವರು

ಶ್ರೀಮತಿ ಗೀತಾ ಆರ್. ಮತ್ತು ಶ್ರೀ ಕೆ.ವಿ. ಶಶಿಧರ್

ಶ್ರೀ ಶ್ರೀನಿವಾಸ ಸ್ಟೀಲ್ ಟ್ರೇಡರ್ಸ್ ಮಾಲೀಕರು

